ಸೋಮವಾರ, ಮೇ 27, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಕಾನ್ ಚಿತ್ರೋತ್ಸವದಲ್ಲಿ ಅಮೆರಿಕದ ಚಿತ್ರ ನಿರ್ದೇಶಕಿ ಗ್ರೇಟಾ ಗರ್ವಿಗ್ ಪಾಲ್ಗೊಂಡಿದ್ದರು



ಚುಟುಕು

‘ಗಡ್ಕರಿ ಸೋಲಿಸಲು ಮೋದಿ, ಶಾ, ಫಡಣವೀಸ್ ಪ್ರಯತ್ನ’



ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಲೋಕಸಭಾ ಚುನಾವಣೆಯಲ್ಲಿ ನಿತಿನ್ ಗಡ್ಕರಿ ಅವರನ್ನು ಸೋಲಿಸಲು ಶ್ರಮಿಸಿದರು ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಆರೋಪಿಸಿದ್ದಾರೆ.

ರಾವುತ್ ಈ ಬಗ್ಗೆ ತಮ್ಮ ಪಕ್ಷದ ಮುಖವಾಣಿ ‘ಸಾಮ್ನಾ’ದಲ್ಲಿ ಲೇಖನವೊಂದನ್ನು ಬರೆದಿದ್ದಾರೆ. ‘ನಾಗಪುರ ಕ್ಷೇತ್ರದಿಂದ ಸ್ಪರ್ಧಿಸಿರುವ ನಿತಿನ್ ಗಡ್ಕರಿ ಅವರನ್ನು ಸೋಲಿಸಲು ಸಾಧ್ಯವಿಲ್ಲ ಎನ್ನುವುದು ಅರಿವಾದ ನಂತರ ಫಡಣವೀಸ್ ಅವರು ಒಲ್ಲದ ಮನಸ್ಸಿನಿಂದ ಅವರ ಪರ ಪ್ರಚಾರ ಮಾಡಿದರು. ಫಡಣವೀಸ್ ಗಡ್ಕರಿ ಅವರನ್ನು ಸೋಲಿಸಲು ಅವರ ವಿರೋಧಿಗಳಿಗೆ ನೆರವು ನೀಡಿದರು ಎಂಬುದಾಗಿ ನಾಗಪುರದ ಆರ್‌ಎಸ್‌ಎಸ್ ಮಂದಿ ಬಹಿರಂಗವಾಗಿಯೇ ಹೇಳುತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

‘ಅಜಿತ್ ಪವಾರ್ ಅವರ ಎನ್‌ಸಿಪಿ ಅಭ್ಯರ್ಥಿಗಳನ್ನು ಸೋಲಿಸಲು ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಪ್ರತಿ ಕ್ಷೇತ್ರದಲ್ಲಿ ₹25–30 ಕೋಟಿ ಹಂಚಿದ್ದಾರೆ. ಮೋದಿ–ಶಾ ಅಧಿಕಾರಕ್ಕೆ ಮರಳಿದರೆ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಬದಲಾಯಿಸುತ್ತಾರೆ’ ಎಂದು ಆರೋಪಿಸಿದ್ದಾರೆ.

ಎಲ್ಲ ರಾವುತ್ ಭ್ರಾಂತಿ: ರಾವುತ್ ಅವರ ಆರೋಪಗಳನ್ನು ನಿರಾಕರಿಸಿರುವ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಶೇಖರ್ ಬವಾಂಕುಲೆ, ‘ಅದೆಲ್ಲ ಅವರ ಭ್ರಾಂತಿ’ ಎಂದಿದ್ದಾರೆ.

ಮೈತ್ರಿ ಧರ್ಮ ಅಲ್ಲ: ರಾವುತ್ ಲೇಖನದ ವಿರುದ್ಧ ನಾಗಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿಕಾಸ್ ಠಾಕರೆ ಕಿಡಿ ಕಾರಿದ್ದು, ‘ಎಂವಿಎ ಭಾಗವಾಗಿರುವ ರಾವುತ್ ತಮ್ಮ ಗಡ್ಕರಿ ಪ್ರೇಮವನ್ನು ನಾಲ್ಕು ಗೋಡೆಗಳ ನಡುವೆ ಇಟ್ಟುಕೊಳ್ಳಲಿ. ಹೀಗೆ ಬರೆಯುವುದು ಮೈತ್ರಿ ಧರ್ಮವಲ್ಲ’ ಎಂದಿದ್ದಾರೆ.

‘ಗೆಲುವು ಕರುಣಾನಿಧಿಗೆ ಅರ್ಪಣೆ’



ಚೆನ್ನೈ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಕೂಟದ ಗೆಲುವನ್ನು ಡಿಎಂಕೆಯು ಮಾಜಿ ಮುಖ್ಯಮಂತ್ರಿ ಎಂ.ಕರುಣಾನಿಧಿ ಅವರಿಗೆ ಸಮರ್ಪಿಸಲಿದೆ ಮತ್ತು ಅವರ ಜನ್ಮ ಶತಮಾನೋತ್ಸವವನ್ನು ರಾಷ್ಟ್ರ ಮಟ್ಟದಲ್ಲಿ ಆಚರಿಸಲಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಭಾನುವಾರ ಹೇಳಿದರು.

ಕರುಣಾನಿಧಿ ಅವರು ದೇಶ, ಪ್ರಜಾಪ್ರಭುತ್ವ ಹಾಗೂ ಮಾತೃಭಾಷೆಯ ರಕ್ಷಣೆಗಾಗಿ ನೀಡಿದ್ದ ಕೊಡುಗೆಗಳನ್ನು ಸ್ಟಾಲಿನ್ ಸ್ಮರಿಸಿದರು.

ಜೂನ್ 3ರಂದು ನಡೆಯಲಿರುವ ಕರುಣಾನಿಧಿ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮಕ್ಕೆ ಡಿಎಂಕೆಯು ‘ಇಂಡಿಯಾ’ ಒಕ್ಕೂಟದ ನಾಯಕರನ್ನು ಆಹ್ವಾನಿಸಿದೆ.

ಇವಿಎಂಗೆ ಹಾನಿ: ಬಂಧನ

ಭುವನೇಶ್ವರ (ಪಿಟಿಐ): ಮತ ಹಾಕಲು ಹೆಚ್ಚು ಕಾಲ ಸರತಿಯಲ್ಲಿ ನಿಲ್ಲಬೇಕಾಗಿ ಬಂದುದಕ್ಕೆ ಕೋಪಗೊಂಡ ಒಡಿಶಾದ ಖುರ್ದಾ ಜಿಲ್ಲೆಯ ಬಿಜೆಪಿ ಅಭ್ಯರ್ಥಿಯೊಬ್ಬ ಇವಿಎಂಗೆ ಹಾನಿ ಮಾಡಿದ್ದು, ಅವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಇವಿಎಂ ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದುದರಿಂದ ಮತದಾನ ಕೊಂಚ ತಡವಾಗಿತ್ತು. ತಮ್ಮ ಪತ್ನಿಯೊಂದಿಗೆ ಮತ ಚಲಾಯಿಸಲು ಹೋಗಿದ್ದ ಖುರ್ದಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಪ್ರಶಾಂತ್ ಜಗದೇವ್ ಅದರಿಂದ ಕೋಪಗೊಂಡು ಮತಯಂತ್ರಕ್ಕೆ ಹಾನಿ ಮಾಡಿದ್ದಾರೆ. ಬೆಗುನಿಯಾ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 114ರಲ್ಲಿ ಶನಿವಾರ ಘಟನೆ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮತಗಟ್ಟೆ ಅಧಿಕಾರಿ ಕೊಟ್ಟ ದೂರಿನ ಮೇರೆಗೆ ಪ್ರಶಾಂತ್ ಅವರನ್ನು ಬಂಧಿಸಲಾಗಿದೆ ಎಂದು ಎಸ್ಪಿ ಅವಿನಾಶ್ ಕುಮಾರ್ ಹೇಳಿದ್ದಾರೆ. ನಂತರ ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಬಿಜೆಪಿ ಮುಖಂಡರು ಪ್ರಶಾಂತ್ ಅವರು ಇವಿಎಂ ಹಾನಿ ಮಾಡಿದ ಆರೋಪವನ್ನು ನಿರಾಕರಿಸಿದ್ದು, ಇದು ರಾಜಕೀಯಪ್ರೇರಿತ ಬಂಧನ ಎಂದಿದ್ದಾರೆ. ಆಡಳಿತಾರೂಢ ಬಿಜೆಡಿಯು ಪ್ರಶಾಂತ್ ವಿರುದ್ಧ ಕ್ರಮಕ್ಕಾಗಿ ಆಗ್ರಹಿಸಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿದೆ.

ಎಂಥಾ ಮಾತು!



ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ‘ತೀಸ್ ಮಾರ್ ಖಾನ್’ ಎಂದು ಭಾವಿಸಿದ್ದಾರೆ. ಅದು ಅವರ ತಪ್ಪು ತಿಳಿವಳಿಕೆ. ಜನರೇ ನಿಜವಾದ ‘ತೀಸ್ ಮಾರ್ ಖಾನ್’ಗಳು. ಮೋದಿ ಅವರು ಸರ್ವಾಧಿಕಾರಿ. ಅವರು ಮೂರನೇ ಬಾರಿ ಪ್ರಧಾನಿಯಾದರೆ, ಜನರನ್ನು ಏನನ್ನೂ ಹೇಳಲು ಬಿಡುವುದಿಲ್ಲ. ಇದು ಜನರು ಮತ್ತು ಮೋದಿ ನಡುವಿನ ಚುನಾವಣೆ. ಜನರು ಮತ್ತು ರಾಹುಲ್ ಗಾಂಧಿ ನಡುವಿನದ್ದಲ್ಲ. ಪ್ರಧಾನಿ ಎಂಬ ನೆಲೆಯಲ್ಲಿ ನಾವು ಮೋದಿ ಅವರಿಗೆ ಗೌರವ ನೀಡುತ್ತೇವೆ. ಆದರೆ ಅವರು ಕಾಂಗ್ರೆಸ್ ಮುಖಂಡರಿಗೆ ಗೌರವ ನೀಡುವುದಿಲ್ಲ. ಪ್ರಧಾನಿ ಅವರು ಶ್ರೀಮಂತರನ್ನಷ್ಟೇ ಅಪ್ಪಿಕೊಳ್ಳುತ್ತಾರೆ, ಬಡವರನ್ನಲ್ಲ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಹತ್ತು ವರ್ಷಗಳ ಹಿಂದೆ ಭಾರತೀಯರು ಹೆಚ್ಚಾಗಿ ಚೀನಾ, ತೈವಾನ್, ಜಪಾನ್ ಮತ್ತು ಕೊರಿಯಾದಲ್ಲಿ ತಯಾರಾದ ಮೊಬೈಲ್‌ಗಳನ್ನು ಬಳಸುತ್ತಿದ್ದರು. ಇಂದು ಬಹುತೇಕರು ಭಾರತದಲ್ಲಿ ತಯಾರಾದ ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ನಾವು ಬಳಸುತ್ತಿರುವ ಶೇ 97ರಷ್ಟು ಮೊಬೈಲ್ ಫೋನ್‌ಗಳನ್ನು ನಾವೇ ತಯಾರಿಸುತ್ತಿದ್ದೇವೆ. ಇದು ಧನಾತ್ಮಕ ಬದಲಾವಣೆಗೆ ಉದಾಹರಣೆಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕೇವಲ ಆಡಳಿತವನ್ನಷ್ಟೇ ನಡೆಸಿಲ್ಲ. ದೇಶದ ರಾಜಕೀಯ ಸಂಸ್ಕೃತಿಗೆ ಮೂಲಭೂತ ಬದಲಾವಣೆ ತಂದಿದ್ದಾರೆ

ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

‘ದೇಶದ ಸ್ವಾತಂತ್ರ್ಯ ಅಪಾಯದಲ್ಲಿದೆ’

ಚಂಡೀಗಢ (ಪಿಟಿಐ): ದೇಶದ ಸ್ವಾತಂತ್ರ್ಯ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿದ್ದು, ಅದನ್ನು ರಕ್ಷಿಸಲು ಪಂಜಾಬ್‌ನ ಜನರು ಮತ್ತೊಮ್ಮೆ ಮುಂಚೂಣಿಗೆ ಬರಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಭಾನುವಾರ ಕರೆ ನೀಡಿದರು.

‘ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಂಜಾಬ್‌ನ ಜನ ಬಹುಮುಖ್ಯ ಪಾತ್ರ ವಹಿಸಿದ್ದರು. ಹಲವಾರು ಮಂದಿ ಪ್ರಾಣ ತ್ಯಾಗ ಮಾಡಿದ್ದರು’ ಎಂದು ಸ್ಮರಿಸಿದರು.

ಫಿರೋಜ್‌ಪುರದಲ್ಲಿ ವ್ಯಾಪಾರಿಗಳು ಮತ್ತು ಉದ್ಯಮಿಗಳಿಗಾಗಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ‘ವಿರೋಧ ಪಕ್ಷದ ಹಲವು ಮಂದಿ ಮುಖಂಡರನ್ನು ಜೈಲಿಗೆ ಕಳುಹಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು, ಬನ್ನಿ ಚುನಾವಣೆ ಎದುರಿಸೋಣ ಎಂದಿದ್ದರು’ ಎಂದು ಕೇಜ್ರಿವಾಲ್ ಟೀಕಿಸಿದರು.

‘ಮಹಾರಾಷ್ಟ್ರದಲ್ಲಿ ಮೋದಿ ಅವರು ಎನ್‌ಸಿಪಿ, ಶಿವಸೇನಾವನ್ನು ಇಬ್ಭಾಗ ಮಾಡಿದರು. ಅವುಗಳ ಚಿಹ್ನೆ ಕಿತ್ತುಕೊಂಡರು’ ಎಂದರು.

‘ವರ್ಕ್ ಫ್ರಮ್ ಜೈಲ್’: ರಾಜನಾಥ್

ಚಂಡೀಗಢ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ‘ವರ್ಕ್ ಫ್ರಮ್ ಹೋಂ’ ಬಗ್ಗೆ ಕೇಳಿದ್ದೇನೆ. ಆದರೆ ‘ವರ್ಕ್ ಫ್ರಮ್ ಜೈಲ್’ ಬಗ್ಗೆ ಮೊದಲ ಬಾರಿ ಕೇಳುತ್ತಿದ್ದೇನೆ ಎಂದು ಲೇವಡಿ ಮಾಡಿದರು.

ಫತೇಗಢ ಸಾಹಿಬ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗೇಜಾ ರಾಮ್ ವಾಲ್ಮೀಕಿ ಪರ ಹಮ್ಮಿಕೊಂಡಿದ್ದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಪಂಜಾಬ್‌ನಲ್ಲಿ ಆಡಳಿತದಲ್ಲಿರುವ ಎಎಪಿ ಸರ್ಕಾರವು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ನಿಮಗೆ ಹೇಳಬೇಕಾಗಿಲ್ಲ. ದೆಹಲಿಯಲ್ಲೂ ಎಎಪಿ ಸರ್ಕಾರವಿದೆ. ಅದರ ಮುಖ್ಯಸ್ಥ ಅಬಕಾರಿ ನೀತಿ ಹಗರಣದಲ್ಲಿ ಜೈಲಿಗೆ ಹೋಗಿದ್ದಾರೆ’ ಎಂದರು.



‘ವಿಪಕ್ಷಗಳ ಸೋಲು ಮರೆಮಾಚುವ ತಂತ್ರ’

ಚುನಾವಣಾ ಕಣದಲ್ಲಿ ಮುಂದೆಯೂ ಮುಸ್ಲಿಮರ ಮೀಸಲಾತಿ ಬಗ್ಗೆ ಪ್ರಸ್ತಾಪ ಮಾಡುತ್ತೇವೆ: ಅಮಿತ್ ಶಾ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಪ್ರಧಾನಿ ಮೋದಿ ಅವರಿಂದಾಗಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲಿದೆ ಎಂದು ಪ್ರತಿಪಾದಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಚುನಾವಣಾ ಆಯೋಗ ಕುರಿತ ವಿಪಕ್ಷಗಳ ಆರೋಪಗಳು, ಮುಂದೆ ಚುನಾವಣಾ ಫಲಿತಾಂಶದಲ್ಲಿ ಒದಗಲಿರುವ ಸೋಲನ್ನು ಮರೆಮಾಚುವ ತಂತ್ರ ಎಂದು ಟೀಕಿಸಿದರು.

ಪಿಟಿಐ ಜತೆಗೆ ಸಂದರ್ಶನದಲ್ಲಿ ಮಾತನಾಡಿದ ಅವರು, ತಮ್ಮ ಪಕ್ಷವು ಧರ್ಮದ ಆಧಾರದಲ್ಲಿ ಚುನಾವಣಾ ಪ್ರಚಾರ ಮಾಡುತ್ತಿಲ್ಲ ಎಂದು ಪ್ರತಿಪಾದಿಸಿದರು. ‘ಆದರೆ, ಮುಸ್ಲಿಮರ ಮೀಸಲಾತಿ ಬಗ್ಗೆ, 370ನೇ ವಿಧಿ ರದ್ದತಿ ಬಗ್ಗೆ ಮತ್ತು ಮುಂದೆ ಜಾರಿಗೆ ತರಲಿರುವ ಏಕರೂಪ ನಾಗರಿಕ ಸಂಹಿತೆ ಬಗ್ಗೆ ಮಾತನಾಡುವುದು ಧರ್ಮದ ಆಧಾರದ ಪ್ರಚಾರ ಎನ್ನುವುದಾದರೆ, ಬಿಜೆಪಿ ಅದನ್ನು ಮಾಡಿದೆ, ಮುಂದೆಯೂ ಮಾಡಲಿದೆ’ ಎಂದು ನುಡಿದರು.



> ಏಕರೂಪ ನಾಗರಿಕ ಸಂಹಿತೆಯು ಒಂದು ದೊಡ್ಡ ಸಾಮಾಜಿಕ, ಕಾನೂನಾತ್ಮಕ ಹಾಗೂ ಧಾರ್ಮಿಕ ಸುಧಾರಣೆಯಾಗಿದೆ. ಈ ಬಗ್ಗೆ ಧಾರ್ಮಿಕ ಮುಖಂಡರನ್ನೂ ಸಂಪರ್ಕಿಸಲಾಗುವುದು
>
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಮತದಾನ ಪ್ರಮಾಣ ಬಿಡುಗಡೆ ವಿಳಂಬ ಮತ್ತು ಇವಿಎಂ ಬಗೆಗಿನ ಆರೋಪಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಬಿಜೆಪಿಯು ಸೋತ ತೆಲಂಗಾಣ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳು ನ್ಯಾಯಸಮ್ಮತವಾಗಿ ನಡೆದಿವೆ ಎನ್ನುವುದಾದರೆ, ಈ ಚುನಾವಣೆಯೂ ನ್ಯಾಯಸಮ್ಮತವಾಗಿಯೇ ಇದೆ. ಅವರು ಸೋಲುತ್ತಿರಬೇಕಾದರೆ ಮುಂಚೆಯೇ ಅಳಲು ಶುರುಮಾಡುತ್ತಾರೆ ಮತ್ತು ವಿದೇಶಕ್ಕೆ ಹಾರಲು ನೆಪ ಹುಡುಕುತ್ತಾರೆ. ಇದು ಬಹಳ ದಿನ ಹೀಗೇ ನಡೆಯುವುದಿಲ್ಲ. ಜೂನ್ 6ರಂದು ಅವರು ರಜೆಯ ಮೇಲೆ ತೆರಳಲು ಬಯಸಿದ್ದಾರೆ. ಅದಕ್ಕಾಗಿ ಏನೇನೋ ಹೇಳುತ್ತಿದ್ದಾರೆ’ ಎಂದರು.

‘ಇವಿಎಂ ವ್ಯವಸ್ಥೆಯಲ್ಲಿ ನಕಲಿ ಮತದಾನವು ಸಾಧ್ಯವೇ ಇಲ್ಲ. ಆದರೆ, ‘ಇಂಡಿಯಾ’ ಕೂಟಕ್ಕೆ ನಕಲಿ ಮತದಾನಕ್ಕೆ ಅವಕಾಶ ಇರುವಂತಹ ವ್ಯವಸ್ಥೆ ಬೇಕು’ ಎಂದರು.

ಬಿಜೆಪಿ ಮೋದಿ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ ಎಂಬ ವಿಚಾರದ ಬಗ್ಗೆ ಮಾತನಾಡಿದ ಅಮಿತ್ ಶಾ, ‘ಮೋದಿ ಅವರು ಬಡವರ ಕಲ್ಯಾಣ, ದೇಶದ ರಕ್ಷಣೆ, 370ನೇ ವಿಧಿಯ ರದ್ದತಿ, ಯುಸಿಸಿ, ಮಹಿಳಾ ಮೀಸಲಾತಿ, ರಾಮ ಮಂದಿರ ನಿರ್ಮಾಣದಂಥ ಬಿಜೆಪಿಯ ಪ್ರಮುಖ ಆದ್ಯತೆಯ ಯೋಜನೆಗಳನ್ನು ಕಾರ್ಯಗತಗೊಳಿಸಿದರು. ಹೀಗಾಗಿ ಅವರ ಜನಪ್ರಿಯತೆಯು ಬಿಜೆಪಿಯ ಬಲವಾಯಿತು. ಅವರು ನಮ್ಮ ಅತಿ ದೊಡ್ಡ ನಾಯಕ’ ಎಂದು ಹೇಳಿದರು.

ಒಡಿಶಾದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರ ಹಿಡಿಯಲಿದೆ ಎಂದ ಅವರು, ಆಂಧ್ರಪ್ರದೇಶದಲ್ಲೂ ಎನ್‌ಡಿಎ ಅಧಿಕಾರ ಹಿಡಿಯಲಿದೆ ಎಂದು ಪ್ರತಿಪಾದಿಸಿದರು. ತಮಿಳುನಾಡು ಮತ್ತು ಕೇರಳದಲ್ಲಿ ಪಕ್ಷದ ಮತಪ್ರಮಾಣವು ಕಳೆದ ಬಾರಿಗಿಂತಲೂ ಉತ್ತಮವಾಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಬಿಜೆಪಿ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದರೆ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮತ್ತು ‘ಒಂದು ರಾಷ್ಟ್ರ, ಒಂದು ಚುನಾವಣೆ’ಯನ್ನು ಜಾರಿಗೊಳಿಸುವುದಾಗಿ ತಿಳಿಸಿದರು.

‘ನಮ್ಮ ಸಂವಿಧಾನದ ನಿರ್ಮಾತೃಗಳು ನಮ್ಮ ದೇಶದ ಸಂಸತ್ತು, ರಾಜ್ಯ ವಿಧಾನಸಭೆಗಳ ಮೇಲೆ ಯುಸಿಸಿ ಜಾರಿ ಮಾಡುವ ಜವಾಬ್ದಾರಿಯನ್ನು ಹೊರಿಸಿದ್ದಾರೆ’ ಎಂದು ಅಭಿಪ್ರಾಯಪಟ್ಟರು. ಅದೇ ರೀತಿ ಚುನಾವಣಾ ವೆಚ್ಚವನ್ನು ಕಡಿಮೆ ಮಾಡಲು ‘ಒಂದು ರಾಷ್ಟ್ರ, ಒಂದು ಚುನಾವಣೆ’ಯನ್ನು ಜಾರಿಗೆ ತರುವುದಾಗಿ ತಿಳಿಸಿದರು.

‘ಯುವಕರಿಗೆ ‘ಅಗ್ನಿವೀರ್’ಗಿಂತ ಆಕರ್ಷಕವಾದ ಮತ್ತೊಂದು ಯೋಜನೆ ಇಲ್ಲ. ತುಂಬಾ ಚಿಂತನೆ ನಡೆಸಿದ ನಂತರ ಜಾರಿ ಮಾಡಿದ ಯೋಜನೆ ಅದು. ಅವರಿಗೆ ರಾಜ್ಯದ ಪೊಲೀಸ್ ಪಡೆಗಳಲ್ಲಿ ಕೆಲಸ ಸಿಗುವ ಸಾಧ್ಯತೆ ಹೆಚ್ಚು’ ಎಂದು ಹೇಳಿದರು.

ಜಿಎಸ್‌ಟಿ ಅನ್ನು ಗಬ್ಬರ್ ಸಿಂಗ್ ತೆರಿಗೆ ಎಂದು ರಾಹುಲ್ ಗಾಂಧಿ ಟೀಕಿಸಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಪ್ರಸ್ತುತ ಸೈಕಲ್ ಮೇಲೆ ಶೇ 5 ಹಾಗೂ ಮರ್ಸಿಡಿಸ್ ಕಾರಿನ ಮೇಲೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಎರಡಕ್ಕೂ ಸಮಾನ ತೆರಿಗೆ ವಿಧಿಸಲು ಸಾಧ್ಯವೇ? ರಾಹುಲ್ ಉತ್ತರಿಸಲಿ’ ಎಂದರು.

‘ರಾಹುಲ್ ಮತ್ತು ಮೋದಿ ನಡುವಿನ ಆಯ್ಕೆ’

ಸಾಸಾರಾಮ್/ಕಾರಾಕಾಟ್ (ಪಿಟಿಐ): ಲೋಕಸಭಾ ಚುನಾವಣೆಯು, ಹವಾಮಾನ ಕೊಂಚ ಹದಗೆಟ್ಟರೂ ವಿದೇಶಕ್ಕೆ ಹಾರುವ ರಾಹುಲ್ ಗಾಂಧಿ ಮತ್ತು ಸೈನಿಕರೊಂದಿಗೆ ದೀಪಾವಳಿ ಆಚರಿಸುವ ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಆಯ್ಕೆಯಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಪ್ರತಿಪಾದಿಸಿದರು.

ಬಿಹಾರದ ಸಾಸಾರಾಮ್ ಮತ್ತು ಕಾರಾಕಾಟ್ ಲೋಕಸಭಾ ಕ್ಷೇತ್ರಗಳಲ್ಲಿ ಸರಣಿ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿದ ಅವರು, ‘ಇಂಡಿಯಾ’ ಕೂಟದವರು ₹12 ಲಕ್ಷ ಕೋಟಿ ಹಣಕಾಸು ಅವ್ಯವಹಾರ ನಡೆಸಿದವರು. ಆದರೆ, 23 ವರ್ಷದಿಂದ ಮುಖ್ಯಮಂತ್ರಿ ಹಾಗೂ ಪ್ರಧಾನಿ ಆಗಿ ಆಡಳಿತ ನಡೆಸಿದ್ದರೂ ಮೋದಿ ಅವರು ಕಳಂಕರಹಿತವಾಗಿದ್ದಾರೆ’ ಎಂದು ಆರೋಪಿಸಿದರು. ‘ರಾಹುಲ್ ಗಾಂಧಿ ಬಂಗಾರದ ಚಮಚೆಯೊಂದಿಗೆ ಹುಟ್ಟಿದರೆ, ಮೋದಿ ಅವರು ಅತ್ಯುನ್ನತ ಪದವಿಗೆ ಏರಲು ಅಪಾರವಾಗಿ ಶ್ರಮಿಸಿದ್ದಾರೆ. ಅತಿ ಹಿಂದುಳಿದ ವರ್ಗದಿಂದ ಬಂದ ಅವರು ಜೀವನ ನಡೆಸಲು ಒಂದು ಹಂತದಲ್ಲಿ ಟೀ ಕೂಡ ಮಾರುತ್ತಿದ್ದರು’ ಎಂದು ತಿಳಿಸಿದರು.

ಮೀಸಲು ಕ್ಷೇತ್ರವಾದ ಸಾಸಾರಾಮ್‌ನಲ್ಲಿ ಚುನಾವಣಾ ಪ್ರಚಾರ ಮಾಡಿದ ಶಾ, ‘ಹಿಂದಿನ ಯುಪಿಎ ಸರ್ಕಾರವು ದಲಿತರ ಕಲ್ಯಾಣಕ್ಕೆ ₹41 ಸಾವಿರ ಕೋಟಿ ಮೀಸಲಿಟ್ಟರೆ, ತಮ್ಮ ಸರ್ಕಾರವು ಅದನ್ನು ₹1.65 ಲಕ್ಷ ಕೋಟಿಗೆ ಏರಿಕೆ ಮಾಡಿತು’ ಎಂದು ತಿಳಿಸಿದರು. ಬಾಬಾ ಸಾಹೇಬರ ಬದುಕಿಗೆ ಸಂಬಂಧಪಟ್ಟ ಸ್ಥಳಗಳನ್ನು ತೀರ್ಥ ಕ್ಷೇತ್ರಗಳನ್ನಾಗಿ ಮಾಡುವ ಮೂಲಕ ಮೋದಿ ಅವರು ಅಂಬೇಡ್ಕರ್ ಅವರಿಗೆ ಸೂಕ್ತ ಗೌರವ ಸಲ್ಲಿಸಿದರು’ ಎಂದು ಅಭಿಪ್ರಾಯಪಟ್ಟರು.

ಉತ್ತರ ಪ್ರದೇಶದಲ್ಲಿ ಪ್ರಧಾನಿ ಚುನಾವಣಾ ಪ್ರಚಾರ ● ಜಿಹಾದಿಗಳಿಂದ ಕಾಂಗ್ರೆಸ್‌ಗೆ ಬೆಂಬಲ: ಮೋದಿ

‘ಇಂಡಿ ಜಮಾತ್ ನನ್ನ ನಿಂದಿಸುತ್ತಿದೆ’



ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಕ್ಷದ ಕಾರ್ಯಕರ್ತೆಯರು ದೇವರ ವಿಗ್ರಹ ನೀಡಿದರು–ಪಿಟಿಐ ಚಿತ್ರ

ಘೋಸಿ/ದೇವರಿಯ/ಮಿರ್ಜಾಪುರ (ಪಿಟಿಐ): ‘ಇಂಡಿಯಾ’ ಕೂಟವು ದೇಶದ ಬಹುಸಂಖ್ಯಾತ ಸಮುದಾಯವನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಪರಿವರ್ತಿಸಲು ಹೊರಟಿದೆ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು, ಗಡಿಗಳುದ್ದಕ್ಕೂ ಜಿಹಾದಿಗಳು ಕಾಂಗ್ರೆಸ್ ಅನ್ನು ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿದರು.

‘ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವುದನ್ನು ವಿರೋಧಿಸುತ್ತಿರುವುದಕ್ಕಾಗಿ ‘ಇಂಡಿ’ ಜಮಾತ್ ನನ್ನನ್ನು ನಿಂದಿಸುತ್ತಿದೆ’ ಎಂದು ಹೇಳಿದರು.

ಉತ್ತರ ಪ್ರದೇಶದ ಪೂರ್ವಾಂಚಲದ ವಿವಿಧ ಭಾಗಗಳಲ್ಲಿ ರ‍್ಯಾಲಿ ನಡೆಸಿದ ಅವರು, ‘ಇಂಡಿ’ ಕೂಟದ ಸಮಾಜವಾದಿ ಪಕ್ಷ (ಎಸ್‌ಪಿ) ಮತ್ತು ಕಾಂಗ್ರೆಸ್‌ಗಾಗಿ ಪಾಕಿಸ್ತಾನದಲ್ಲಿ ಪ್ರಾರ್ಥನೆ ಮಾಡಲಾಗುತ್ತಿದೆ. ಜಿಹಾದಿಗಳು ಅವರನ್ನು ಬೆಂಬಲಿಸುತ್ತಿದ್ದಾರೆ. ಕಾಂಗ್ರೆಸ್ ಮತ್ತು ಎಸ್‌ಪಿ ಮತ ಜಿಹಾದ್‌ಗಾಗಿ ಕರೆ ನೀಡುತ್ತಿವೆ’ ಎಂದು ಪ್ರತಿಪಾದಿಸಿದರು.

‘ಎಸ್‌ಪಿ ಸರ್ಕಾರವು ಬಂಧಿತ ಉಗ್ರರನ್ನು ಬಿಡುಗಡೆ ಮಾಡುತ್ತಿತ್ತು ಮತ್ತು ಉಗ್ರರನ್ನು ಬಂಧಿಸಿದ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸುತ್ತಿತ್ತು. ಅವರು ಪೂರ್ವಾಂಚಲವನ್ನು ಹಿಂದುಳಿದ ಪ್ರದೇಶವನ್ನಾಗಿಯೇ ಉಳಿಸುವ ಕುತಂತ್ರ ಮಾಡಿದರು’ ಎಂದು ಆರೋಪಿಸಿದರು.

ಮೋದಿ ಮಾತು...

- ಎಸ್‌ಪಿ ಆಡಳಿತದ ಅವಧಿಯಲ್ಲಿ ಸರ್ಕಾರಿ ಜಾಗದಲ್ಲಿ ಮಾಫಿಯಾಗಳು ಬಂಗಲೆಗಳನ್ನು ನಿರ್ಮಿಸಿದ್ದವು. ಯೋಗಿ ಆದಿತ್ಯನಾಥ ಬಂದ ನಂತರ ಮಾಫಿಯಾಗಳ ‘ಅಚ್ಛೇ ದಿನ’ ಹೋಯಿತು. ಅವರ ಬಂಗಲೆಗಳ ಜಾಗದಲ್ಲಿ ಬಡವರ ಮನೆಗಳು ನಿರ್ಮಾಣವಾದವು. ಇದು ಬಿಜೆಪಿ ಮತ್ತು ‘ಇಂಡಿಯಾ’ ಕೂಟದ ನಡುವಿನ ವ್ಯತ್ಯಾಸ.
- ಅನೇಕ ದೇಶಗಳು ‘ಬ್ರಹ್ಮೋಸ್’ ಖರೀದಿ ಮಾಡಲು ಮುಂದೆ ಬಂದವು. ಕಾಂಗ್ರೆಸ್ ಸರ್ಕಾರ ಅದಕ್ಕೆ ಅಡ್ಡಿಪಡಿಸಿತು. ಉತ್ತರ ಪ್ರದೇಶದಲ್ಲಿ ‘ಬ್ರಹ್ಮೋಸ್’ ಕ್ಷಿಪಣಿಗಳನ್ನು ನಿರ್ಮಿಸುವ ದಿನಗಳು ದೂರವಿಲ್ಲ.
- 2014ಕ್ಕೆ ಮುಂಚೆ ಕಾಂಗ್ರೆಸ್ ರಾತ್ರೋರಾತ್ರಿ ಕಾನೂನನ್ನು ಬದಲಿಸಿ, ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳನ್ನು ಅಲ್ಪಸಂಖ್ಯಾತ ಸಂಸ್ಥೆಗಳೆಂದು ಘೋಷಿಸಿತು. ಅದಕ್ಕೂ ಹಿಂದೆ ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳು ಪಡೆಯುತ್ತಿದ್ದ ಮೀಸಲಾತಿ ಸಂಪೂರ್ಣ ಅಂತ್ಯಗೊಂಡಿತು, ಮುಸ್ಲಿಮರಿಗೆ ಮೀಸಲಾತಿ ಸಿಕ್ಕಿತು.
- ಅವರು ಮೋದಿ ವಿರುದ್ಧ ಮತ ಜಿಹಾದ್‌ನ ಫತ್ವಾ ಹೊರಡಿಸುತ್ತಿದ್ದಾರೆ. ಆದರೆ, ಎಲ್ಲಿಯವರೆಗೆ ಮೋದಿಗೆ ದೇಶದ ತಾಯಂದಿರ, ಸೋದರಿಯರ ಮತ್ತು ನಿಮ್ಮೆಲ್ಲರ ರಕ್ಷಣೆ ಇರುತ್ತದೆಯೋ, ಅಲ್ಲಿಯವರೆಗೆ ಯಾರೂ ಏನೂ ಮಾಡಲು ಸಾಧ್ಯವಿಲ್ಲ.

‘ಸರ್ಕಾರ ಉರುಳಿಸುವ ಬಗ್ಗೆ ಬಹಿರಂಗ ಘೋಷಣೆ’

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ಸರ್ಕಾರವನ್ನು ಭ್ರಷ್ಟಾಚಾರ ಮತ್ತು ಹಣದ ಬಲದಿಂದ ಉರುಳಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಚುನಾವಣಾ ರ‍್ಯಾಲಿಯಲ್ಲಿ ಬಹಿರಂಗವಾಗಿ ಘೋಷಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.

ಪ್ರಧಾನಿ ಶುಕ್ರವಾರ ರಾಜ್ಯದ ಮಂಡಿಯಲ್ಲಿ ಮಾತನಾಡುತ್ತಾ, ಕಾಂಗ್ರೆಸ್ ಸರ್ಕಾರ ಹೆಚ್ಚು ದಿನ ಉಳಿಯುವುದಿಲ್ಲ ಎಂದು ಹೇಳಿದ್ದನ್ನು ರಾಹುಲ್ ಪ್ರಸ್ತಾಪಿಸಿದರು.

ಹಿಮಾಚಲ ಪ್ರದೇಶದ ಉನಾದಲ್ಲಿ ಚುನಾವಣಾ ಪ್ರಚಾರ ಮಾಡಿದ ರಾಹುಲ್, ‘ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿ ಜಾರಿಯ ಮೂಲಕ ಸಣ್ಣ ಉದ್ಯಮಿಗಳನ್ನು ಮೋದಿ ಮುಗಿಸಿದ್ದಾರೆ. ಅದಾನಿಯಂತಹವರಿಗೆ ಸಹಾಯ ಮಾಡುವ ಮೂಲಕ ನಿರುದ್ಯೋಗ ಹೆಚ್ಚಿಸುತ್ತಿದ್ದಾರೆ’ ಎಂದು ಪ್ರತಿಪಾದಿಸಿದರು.

ನಂತರ ಸಿರ್‌ಮೌರ್ ಜಿಲ್ಲೆಯಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಪ್ರಧಾನಿ ಕಳೆದ 10 ವರ್ಷದಲ್ಲಿ 22 ಮಂದಿಯ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದರು. ಆದರೆ, ಹಿಮಾಚಲ ಪ್ರದೇಶದ ಪ್ರವಾಹ ಸಂತ್ರಸ್ತರಿಗೆ ₹9,000 ಕೋಟಿ ನೀಡಲಿಲ್ಲ’ ಎಂದು ಟೀಕಿಸಿದರು.

‘ಮೋದಿ ಪ್ರಮಾಣ ವಚನ ಸ್ವೀಕರಿಸಿದಾಗಲೆಲ್ಲ ಅದಾನಿ ಒಡೆತನದ ಕಂಪನಿಗಳ ಷೇರುಗಳ ಬೆಲೆ ಹೆಚ್ಚಾಗುತ್ತದೆ’ ಎಂದು ಆರೋಪಿಸಿದರು.

‘ನನ್ನ ಸಹೋದರಿ ಪ್ರಿಯಾಂಕಾ ರಾಜ್ಯದ ಶಿಮ್ಲಾದಲ್ಲಿ ವಾಸ ಮಾಡುತ್ತಾಳೆ. ರಾಹುಲ್ ಮತ್ತು ಪ್ರಿಯಾಂಕಾ ನಿಮ್ಮ ಸೇನಾನಿಗಳು’ ಎಂದು ಹೇಳಿದರು.

‘ಸಮೃದ್ಧಿ ಕಾಣುತ್ತಿಲ್ಲ ಏಕೆ’

ಫತೇಗಢ (ಪಿಟಿಐ): ದೇಶದ ಆರ್ಥಿಕತೆಯು ತ್ವರಿತ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದು ನಿಜವಾಗಿದ್ದರೆ, ಜನರ ಬದುಕು ಏಕೆ ಸಮೃದ್ಧಿಯಿಂದ ಕೂಡಿಲ್ಲ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದರು.

ಪಂಜಾಬ್‌ನಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಪ್ರಧಾನಿ ಮೋದಿ ಅವರು ಅಧಿಕಾರ ಹಿಡಿಯಲು ಸುಳ್ಳು ಹೇಳುತ್ತಿದ್ದಾರೆ ಮತ್ತು ಪೊಳ್ಳು ಭರವಸೆ ನೀಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ದೇಶದ 70 ಕೋಟಿ ಯುವಜನತೆಯು ನಿರುದ್ಯೋಗಿಯಾಗಿದ್ದು, 45 ವರ್ಷಗಳಲ್ಲಿಯೇ ಅತಿ ಹೆಚ್ಚು ನಿರುದ್ಯೋಗ ಇದೆ. ಮೋದಿ ಆಡಳಿತದಲ್ಲಿ 30 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇವೆ’ ಎಂದು ವಾಗ್ದಾಳಿ ನಡೆಸಿದರು.

‘ಹಣದುಬ್ಬರವು ವಿಪರೀತ ಏರಿಕೆ ಆಗಿರುವುದು ಏಕೆ? ದೇಶವು ತ್ವರಿತಗತಿಯಲ್ಲಿ ಅಭಿವೃದ್ಧಿ ಆಗುತ್ತಿದ್ದರೆ, ಉಕ್ಕಿನ ಘಟಕಗಳು ಏಕೆ ಬಾಗಿಲು ಮುಚ್ಚುತ್ತಿವೆ? ಜಿಎಸ್‌ಟಿ ಹೇರಿಕೆಯಿಂದ ಉದ್ಯಮ ವಲಯಕ್ಕೆ ಪೆಟ್ಟು ಬಿದ್ದಿದ್ದು ಏಕೆ? ಮಧ್ಯಮ ವರ್ಗಕ್ಕೆ ಒಂದೂ ಯೋಜನೆ ಇಲ್ಲ ಏಕೆ’ ಎಂದು ಪ್ರಶ್ನಿಸಿದ್ದಾರೆ.

‘ಅಭಿವೃದ್ಧಿ ಎನ್ನುವುದನ್ನು ಕೇವಲ ಟಿವಿಗಳಲ್ಲಿ ಮಾತ್ರ ನೋಡುತ್ತಿದ್ದು, ವಾಸ್ತವದಲ್ಲಿ ಜನರ ಜೀವನ ಪ್ರಗತಿ ಹೊಂದುತ್ತಿಲ್ಲ’ ಎಂದು ಪ್ರತಿಪಾದಿಸಿದರು.

‘ಆತ್ಮವಿಶ್ವಾಸ ಕಳೆದುಕೊಂಡ ಮೋದಿ’

ಬಲಿಯಾ (ಉತ್ತರ ಪ್ರದೇಶ): ಪ್ರಧಾನಿ ನರೇಂದ್ರ ಮೋದಿ ಅವರು ಆತ್ಮವಿಶ್ವಾಸ ಕಳೆದುಕೊಂಡಿದ್ದು, ಬಿಜೆಪಿಯು ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದನ್ನು ಅರಿತಿರುವುದರಿಂದ ಭಾಷಣ ಮಾಡುವಾಗ ಎಡವುತ್ತಿದ್ದಾರೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಭಾನುವಾರ ಹೇಳಿದರು.

ಸಲೇಂಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಪಕ್ಷದ ಅಭ್ಯರ್ಥಿ ರಾಮ್ ಶಂಕರ್ ವಿದ್ಯಾರ್ಥಿ ಪರ ಚುನಾವಣಾ ರ‍್ಯಾಲಿಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ‘ಕೇಂದ್ರದಲ್ಲಿ ‘ಇಂಡಿಯಾ’ ಒಕ್ಕೂಟ ಸರ್ಕಾರ ರಚಿಸಲಿದೆ ಮತ್ತು ಜೂನ್ 4ರ ನಂತರ ಕೇಂದ್ರ ಸಂಪುಟ ಮತ್ತು ಮಾಧ್ಯಮಗಳು ಬದಲಾಗಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಇಂಡಿಯಾ’ ಸರ್ಕಾರ ರಚನೆಯಾದರೆ ‘ಅಗ್ನಿವೀರ್’ ಯೋಜನೆಯನ್ನು ರದ್ದುಗೊಳಿಸುವುದಾಗಿ ಪುನರುಚ್ಚರಿಸಿದರು. ‘ಮೋದಿ ಸರ್ಕಾರವು ಉದ್ಯಮಿಗಳ ₹25 ಲಕ್ಷ ಕೋಟಿಯ ಸಾಲ ಮನ್ನಾ ಮಾಡಿದೆ. ‘ಇಂಡಿಯಾ’ ಸರ್ಕಾರವು ರೈತರ ಸಾಲವನ್ನು ಮನ್ನಾ ಮಾಡಲಿದೆ ಮತ್ತು ಎಂಎಸ್‌ಪಿಗೆ ಕಾನೂನಿನ ಖಾತರಿ ನೀಡಲಿದೆ’ ಎಂದು ಅಖಿಲೇಶ್ ಭರವಸೆ ನೀಡಿದರು.

ನೈರುತ್ಯ ಶಿಕ್ಷಕರ ವಿಧಾನ ಪರಿಷತ್ ಕ್ಷೇತ್ರ ● ಮೈತ್ರಿ ಅಭ್ಯರ್ಥಿಗೆ ಒಳ ಏಟಿನ ಭೀತಿ

ಜೆಡಿಎಸ್–ಕಾಂಗ್ರೆಸ್ ನಡುವೆ ನೇರ ಹಣಾಹಣಿ

● ಗಣೇಶ ಚಂದನಶಿವ

ಮಂಗಳೂರು: ನೈರುತ್ಯ ಶಿಕ್ಷಕರ ವಿಧಾನ ಪರಿಷತ್ ಕ್ಷೇತ್ರವು ಕರಾವಳಿ, ಮಲೆನಾಡು, ಬಯಲು ಸೀಮೆಯನ್ನು ಒಳಗೊಂಡಿರುವ ವಿಶಾಲ ಕ್ಷೇತ್ರ. ಶಾಲೆಗಳಿಗೆ ರಜೆ ಕಾರಣ ಮತದಾರರ ಖುದ್ದು ಭೇಟಿಯೇ ಎಲ್ಲ ಅಭ್ಯರ್ಥಿಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಜೆಡಿಎಸ್– ಬಿಜೆಪಿ ಮೈತ್ರಿ ಇಲ್ಲಿಯೂ ಮುಂದುವರೆದಿದೆ. ವಿಧಾನ ಪರಿಷತ್ ಹಾಲಿ ಸದಸ್ಯ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಮೈತ್ರಿ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಕೆ.ಕೆ. ಮಂಜುನಾಥ ಕುಮಾರ್ ಕಾಂಗ್ರೆಸ್‌ನಿಂದ ಎರಡನೇ ಬಾರಿ ಸ್ಪರ್ಧಿಸಿದ್ದಾರೆ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹಾಗೂ ‘ಸಹಕಾರ ಭಾರತಿ’ಯಲ್ಲಿ ಕೆಲಸ ಮಾಡಿರುವ ಮಂಗಳೂರು ವಿಶ್ವವಿದ್ಯಾಲಯದ ಸೆನೆಟ್‌ನ ಮಾಜಿ ಸದಸ್ಯ ಎಸ್.ಆರ್. ಹರೀಶ್ ಆಚಾರ್ ಇಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಬಿ.ಆರ್. ನಂಜೇಶ್ ಅವರನ್ನು ಆ ಪಕ್ಷ ಉಚ್ಚಾಟನೆ ಮಾಡಿದೆ.

1988ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಈ ಕ್ಷೇತ್ರದಲ್ಲಿ ಮೊದಲ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಫರ್ನಾಂಡಿಸ್ ಗೆಲುವು ಸಾಧಿಸಿದ್ದರು. ಆ ನಂತರ ಈ ಕ್ಷೇತ್ರ ಬಿಜೆಪಿ ತೆಕ್ಕೆಗೆ ಜಾರಿತ್ತು. ಬಾಲಕೃಷ್ಣ ಭಟ್ ಮತ್ತು ಕ್ಯಾ.ಗಣೇಶ್ ಕಾರ್ಣಿಕ್ ಕ್ರಮವಾಗಿ ತಲಾ ಎರಡು ಬಾರಿ ಗೆಲುವು ಸಾಧಿಸಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಕ್ಯಾ. ಗಣೇಶ್ ಕಾರ್ಣಿಕ್ ಅವರನ್ನು ಮಣಿಸಿ, ಜೆಡಿಎಸ್ ಇಲ್ಲಿ ಮೊದಲ ಬಾರಿ ವಿಜಯ ಸಾಧಿಸಿತು.

ಚಿಕ್ಕಮಗಳೂರಿನ ಭೋಜೇಗೌಡ, ಕೊಡಗಿನ ಮಂಜುನಾಥ್ ಕುಮಾರ್ ಇಬ್ಬರೂ ಒಕ್ಕಲಿಗರು. ಮಂಗಳೂರಿನ ಹರೀಶ್ ಆಚಾರ್ಯ ವಿಶ್ವಕರ್ಮ ಸಮುದಾಯಕ್ಕೆ ಸೇರಿದವರು. ಅರ್ಧಕ್ಕಿಂತ ಹೆಚ್ಚು ಸಂಖ್ಯೆಯಲ್ಲಿರುವ ಉಡುಪಿ–ದಕ್ಷಿಣ ಕನ್ನಡ ಜಿಲ್ಲೆಗಳ (ಶೇ 52) ಮತದಾರರೇ ನಿರ್ಣಾಯಕ. ಕ್ಷೇತ್ರದಲ್ಲಿ ಶಾಸಕರ ಬಲಾಬಲದ ಲೆಕ್ಕ ನೋಡುವುದಾದರೆ ಜೆಡಿಎಸ್–1, ಬಿಜೆಪಿ ಮತ್ತು ಕಾಂಗ್ರೆಸ್ ತಲಾ 14 ಶಾಸಕರನ್ನು ಹೊಂದಿವೆ.

ಕೊಡಗಿನ ಕೂಡ್ಲೂರು ಗ್ರಾಮದ ಕೆ.ಕೆ. ಮಂಜುನಾಥ ಕುಮಾರ್, ಪ್ರೌಢಶಾಲಾ ಶಿಕ್ಷಕರಾಗಿದ್ದರು. ಶಿಕ್ಷಕರ ಸಂಘಟನೆ, ಸರ್ಕಾರಿ ನೌಕರರ ಸಂಘಟನೆಯಲ್ಲಿ ತೊಡಗಿದ್ದವರು. 2012ರ ಚುನಾವಣೆಯಲ್ಲಿ ಪಕ್ಷೇತರರಾಗಿ, 2018ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಪರಿಷತ್ ಚುನಾವಣೆ ಮೇಲೆ ಕಣ್ಣಿಟ್ಟು ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ತಮ್ಮದೇ ಪಕ್ಷದ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಅವರ ಬಲ ಹೆಚ್ಚಿಸಿದೆ.

ಎಸ್.ಎಲ್. ಭೋಜೇಗೌಡ 2012ರಲ್ಲಿ ನೈರುತ್ಯ ಪದವೀಧರರ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕಳೆದ ಚುನಾವಣೆಯಲ್ಲಿ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. 2018ರ ಪರಿಷತ್ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿತ್ತು. ಉಭಯ ಪಕ್ಷಗಳು ಆಗಲೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದವು. ಹೀಗಾಗಿ ಈ ಚುನಾವಣೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಮಧ್ಯೆ ಮೈತ್ರಿ ಇರಲಿಲ್ಲ. ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಅವರ ಬಲದಿಂದಾಗಿ ಭೋಜೇಗೌಡ ಗೆದ್ದಿದ್ದರು.


ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಸಿ.ಟಿ.ರವಿ ಅವರನ್ನು ಭೋಜೇಗೌಡರು ಹಠಕ್ಕೆ ಬಿದ್ದು ಸೋಲಿಸಿರುವ ಒಳಬೇಗುದಿ ಆ ಜಿಲ್ಲೆಯಲ್ಲಿದೆ. ಕರಾವಳಿ ಭಾಗದವರಿಗೆ ಈ ಬಾರಿ ಪ್ರಾತಿನಿಧ್ಯ ಸಿಕ್ಕಿಲ್ಲ. ಮೇಲಾಗಿ ಕಳೆದ ಚುನಾವಣೆಯಲ್ಲಿ ಬಿಜೆಪಿಯ ಕ್ಯಾ. ಗಣೇಶ್ ಕಾರ್ಣಿಕ್ ಅವರನ್ನು ಸೋಲಿಸಿರುವ ಅಸಮಾಧಾನವೂ ಬಿಜೆಪಿಗರಲ್ಲಿದೆ. ಹೀಗಾಗಿ ಬಿಜೆಪಿ ಬೆಂಬಲಿಗರು ಜೆಡಿಎಸ್‌ಗೆ ಮತ ನೀಡಲಿಕ್ಕಿಲ್ಲ ಎಂಬುದು ಕಾಂಗ್ರೆಸ್ಸಿಗರ ಲೆಕ್ಕಾಚಾರ. ಆದರೆ, ಈ ವಾದವನ್ನು ಭೋಜೇಗೌಡ ಒಪ್ಪುವುದಿಲ್ಲ; ವಿಧಾನಸಭೆ ಚುನಾವಣೆಯೇ ಬೇರೆ. ಇದೇ ಬೇರೆ. ‘ಸಿ.ಟಿ.ರವಿ ಅವರಿಗೂ ನನ್ನ ಚುನಾವಣೆಯ ಜವಾಬ್ದಾರಿಯನ್ನು ಬಿಜೆಪಿ ನೀಡಿದೆ. ಅದನ್ನು ಅವರು ಹೇಗೆ ನಿರ್ವಹಿಸದೇ ಇರಲು ಸಾಧ್ಯ’ ಎಂದು ಪ್ರಶ್ನಿಸುತ್ತಾರೆ. ಇನ್ನು ಹರೀಶ್ ಆಚಾರ್ಯ ಕರಾವಳಿ ಮತದಾರರನ್ನೇ ನೆಚ್ಚಿಕೊಂಡಿದ್ದಾರೆ.

ಕಣದಲ್ಲಿ ಎಂಟು ಅಭ್ಯರ್ಥಿಗಳಿದ್ದರೂ, ಮೇಲ್ನೋಟಕ್ಕೆ ಮೈತ್ರಿ ಅಭ್ಯರ್ಥಿ ಮತ್ತು ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಕಂಡುಬರುತ್ತಿದೆ. ಬಿಜೆಪಿ ಬೆಂಬಲ ಸಿಕ್ಕರೆ ಭೋಜೇಗೌಡರ ಹಾದಿ ಸುಗಮವಾಗಬಹುದು. ಒಳಏಟು ಬಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಮೊದಲ ಬಾರಿಗೆ ವಿಜಯ ದಕ್ಕಬಹುದು.

ಕಣದಲ್ಲಿರುವ ಇತರೆ ಅಭ್ಯರ್ಥಿಗಳು: ಭಾಸ್ಕರ್ ಶೆಟ್ಟಿ, ನರೇಶ್ ಹೆಗಡೆ, ಅರುಣ್ ಎಚ್.ಡಿ., ಬಿ.ಆರ್. ನಂಜೇಶ್, ಮಂಜುನಾಥ್ ಕೆ.ಕೆ. (ಎಲ್ಲರೂ ಪಕ್ಷೇತರ).

ನೈರುತ್ಯ ಶಿಕ್ಷಕರ ಕ್ಷೇತ್ರ

ಕ್ಷೇತ್ರದ ವ್ಯಾಪ್ತಿಯ ಜಿಲ್ಲೆಗಳು: ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕು



ಹಾಲಿ ಪ್ರತಿನಿಧಿ
- ಎಸ್.ಎಲ್. ಭೋಜೇಗೌಡ (ಜೆಡಿಎಸ್)
- ಪಡೆದ ಮತ: 8,647
- ಸಮೀಪದ ಸ್ಪರ್ಧಿ: ಕ್ಯಾ.ಗಣೇಶ್ ಕಾರ್ಣಿಕ್ (ಬಿಜೆಪಿ)

ಮತದಾರರ ವಿವರ

ಪುರುಷರ	ಮಹಿಳೆಯರು	ಒಟ್ಟು
10,487	12,195	23,402



> ಬಿಜೆಪಿ ಜೊತೆ ಹೊಂದಾಣಿಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಬಹುತೇಕ ಭರವಸೆ ಈಡೇರಿಸಿದ್ದು, ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ
>
> **ಎಸ್.ಎಲ್. ಭೋಜೇಗೌಡ**, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ



> ಹಣ ಬಲದಿಂದ ಗೆಲ್ಲುವೆ ಎಂಬ ಮಾನಸಿಕತೆಯವರನ್ನು ಶಿಕ್ಷಕರು ಒಪ್ಪಲ್ಲ. ಈ ಭಾಗದ ಮತದಾರರ ಭಾವನಾತ್ಮಕ ಬೆಂಬಲ ನನಗಿದೆ
>
> **ಎಸ್.ಆರ್. ಹರೀಶ್ ಆಚಾರ್ಯ**, ಪಕ್ಷೇತರ ಅಭ್ಯರ್ಥಿ



> ಶಿಕ್ಷಕರ ಸಮಸ್ಯೆಗಳು, ಅವುಗಳ ಪರಿಹಾರ ಗೊತ್ತಿರುವ ಏಕೈಕ ಅಭ್ಯರ್ಥಿ ನಾನು. ಎರಡು ಬಾರಿ ಸೋತ ಅನುಕಂಪ, ಸರ್ಕಾರದ ಬಲ ಇದ್ದು, ಗೆಲುವು ನನ್ನದೇ
>
> **ಕೆ.ಕೆ. ಮಂಜುನಾಥ ಕುಮಾರ್**, ಕಾಂಗ್ರೆಸ್ ಅಭ್ಯರ್ಥಿ

ಸೋಮವಾರ, ಮೇ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 147 | ಪುಟ 14
www.prajavani.net
prajavani.net | prajavani | prajavani | prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕಾನ್ ಚಿತ್ರೋತ್ಸವದಲ್ಲಿ ಭಾರತೀಯರ ಮೆರುಗು

ಪಾರ್ಶ್ವವಾಯು ಪೀಡಿತರಿಗೆ 'ವಿಶೇಷ ಗಾಲಿ ಕುರ್ಚಿ' 5

ಉದ್ಯಾನ ರೂಪಿಸಿ ಒತ್ತುವರಿ ತಡೆದರು 2A

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ
ಚನ್ನಗಿರಿ: 25 ಮಂದಿ ಬಂಧನ 2A

ಶಿಕ್ಷಣ
ಕೌಶಲಾಧಾರಿತ ಐ.ಟಿ.ಐ ನಡೆ ಉದ್ಯೋಗದ ಕಡೆ





ದೆಹಲಿ ಆಸ್ಪತ್ರೆಯಲ್ಲಿ ಅಗ್ನಿ ಅವಘಡ • ಆಸ್ಪತ್ರೆ ಮಾಲೀಕ ಡಾ.ನವೀನ್ ಬಂಧನ

7 ನವಜಾತ ಶಿಶುಗಳ ಸಾವು

ನವದೆಹಲಿ (ಪಿಟಿಐ): ಪೂರ್ವ ದೆಹಲಿಯ ವಿವೇಕ್ ವಿಹಾರ್ ಪ್ರದೇಶದಲ್ಲಿರುವ ಬೇಬಿ ಕೇರ್ ನ್ಯೂಬಾರ್ನ್ ಆಸ್ಪತ್ರೆಯಲ್ಲಿ ಶನಿವಾರ ತಡರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಏಳು ನವಜಾತ ಶಿಶುಗಳು ಮೃತಪಟ್ಟಿವೆ. ಆಸ್ಪತ್ರೆ ಮಾಲೀಕ ಡಾ.ನವೀನ್ ಕಿಚಿ ಎಂಬವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಅವಘಡ ಸಂಭವಿಸಿದ ಬೆನ್ನಲ್ಲೇ, ಡಾ.ನವೀನ್ ಅವರು ತಲೆ ಮರೆಸಿಕೊಂಡಿದ್ದರು. ಅವರ ವಿರುದ್ಧ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ವಿವೇಕ್ ವಿಹಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಶನಿವಾರ ರಾತ್ರಿ 11.30ರ ಸುಮಾರಿಗೆ ಕಾಣಿಸಿಕೊಂಡ ಬೆಂಕಿ ನಂತರ ಅಕ್ಕಪಕ್ಕದ ಕಟ್ಟಡಗಳಿಗೂ ವ್ಯಾಪಿಸಿತು. 16 ಅಗ್ನಿ ಶಾಮಕ ವಾಹನಗಳನ್ನು ಬಳಸಿ, ಬೆಂಕಿಯನ್ನು ನಂದಿಸಲಾಯಿತು ಎಂದು ದೆಹಲಿ ಅಗ್ನಿಶಾಮಕ ಸೇವೆಗಳ (ಡಿಎಫ್‌ಎಸ್) ವಿಭಾಗೀಯ ಅಧಿಕಾರಿ ರಾಜೇಂದ್ರ ಅತ್ವಾಲ್ ಹೇಳಿದ್ದಾರೆ.

ಬೆಂಕಿ ಹೊತ್ತಿಕೊಳ್ಳಲು ಕಾರಣ ಗೊತ್ತಾಗಿಲ್ಲ. ಆದರೆ, ಬೆಂಕಿ ಹೊತ್ತಿಕೊಂಡಿದ್ದ ವೇಳೆ, ಆಸ್ಪತ್ರೆಯಲ್ಲಿದ್ದ ಆಮ್ಲಜನಕ ಸಿಲಿಂಡರ್‌ಗಳು ಸ್ಫೋಟಗೊಂಡ ಪರಿಣಾಮ ಪಕ್ಕದ ಕಟ್ಟಡಗಳಿಗೂ ಹಾನಿಯಾಗಿದೆ ಎಂದು ತಿಳಿಸಿದ್ದಾರೆ.

'ಆಸ್ಪತ್ರೆಯಲ್ಲಿ ದಾಖಲಾಗಿದ್ದ 12 ನವಜಾತ ಶಿಶುಗಳನ್ನು ರಕ್ಷಿಸಲಾಗಿದ್ದು, ಏಳು ಶಿಶುಗಳು ಮೃತಪಟ್ಟವು. ಗಾಯಗೊಂಡಿರುವ ಐದು ಶಿಶುಗಳಿಗೆ ಬೇರೊಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಡಿಎಫ್‌ಎಸ್ ಮುಖ್ಯಸ್ಥ ಅತುಲ್ ಗರ್ಗ್ ತಿಳಿಸಿದ್ದಾರೆ.

ಮೃತ ಶಿಶುಗಳ ದೇಹಗಳನ್ನು ಜಿಟಿಬಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದ್ದು, ಮರಣೋತ್ತರ ಪರೀಕ್ಷೆ ನೆರವೇರಿಸಲಾಯಿತು ಎಂದೂ ಅವರು ಹೇಳಿದ್ದಾರೆ.

'ಅಗ್ನಿ ಶಾಮಕ ಸೇವೆಗಳ ಇಲಾಖೆಯಿಂದ ಆಸ್ಪತ್ರೆಯು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದಿರುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಒಂದು ವೇಳೆ, ಎನ್‌ಒಸಿ ಪಡೆದಿರದಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ಐಪಿಸಿ ಸೆಕ್ಷನ್‌ಗಳನ್ನು ಪ್ರಕರಣಕ್ಕೆ ಸೇರಿಸಲಾಗುವುದು' ಎಂದೂ ಹೇಳಿದ್ದಾರೆ.

2B ಪುಟ ನೋಡಿ



ಪೂರ್ವ ದೆಹಲಿಯ ವಿವೇಕ್ ವಿಹಾರ್ ಪ್ರದೇಶದಲ್ಲಿರುವ ಬೇಬಿ ಕೇರ್ ನ್ಯೂಬಾರ್ನ್ ಆಸ್ಪತ್ರೆಯಲ್ಲಿ ಶನಿವಾರ ತಡರಾತ್ರಿ ಬೆಂಕಿ ಹೊತ್ತಿಕೊಂಡಿತು –ಪಿಟಿಐ ಚಿತ್ರ

ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶ

ಆಸ್ಪತ್ರೆಯಲ್ಲಿ ಅಗ್ನಿ ಅವಘಡ ಕುರಿತು ದೆಹಲಿ ಸರ್ಕಾರ ಮ್ಯಾಜಿಸ್ಟೀರಿಯಲ್ ತನಿಖೆಗೆ ಭಾನುವಾರ ಆದೇಶಿಸಿದೆ.

ಈ ಕುರಿತು ಆದೇಶ ಹೊರಡಿಸಿರುವ ವಿಭಾಗೀಯ ಆಯುಕ್ತ ಅಶ್ವನಿ ಕುಮಾರ್, ತನಿಖೆ ನಡೆಸುವಂತೆ ಶಾಹದರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ನಿರ್ದೇಶನ ನೀಡಿದ್ದಾರೆ. ಆದಷ್ಟು ಶೀಘ್ರವೇ ತನಿಖಾ ವರದಿ ಸಲ್ಲಿಸುವಂತೆಯೂ ಆದೇಶದಲ್ಲಿ ಸೂಚಿಸಲಾಗಿದೆ.

ಬೆಂಕಿ ಅನಾಹುತ: ಮೂವರ ಸಾವು

ಪೂರ್ವ ದೆಹಲಿಯ ಕೃಷ್ಣಾನಗರದಲ್ಲಿರುವ ನಾಲ್ಕು ಮಹಡಿಯ ವಸತಿ ಕಟ್ಟಡದಲ್ಲಿ ಭಾನುವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ ಮೂವರು ಮೃತಪಟ್ಟಿದ್ದು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತರನ್ನು ಪ್ರಮೀಳಾ ಶಾದ್ (66), ಕೇಶವ ಶರ್ಮಾ (18) ಹಾಗೂ ಅಂಜು ಶರ್ಮಾ (39) ಎಂದು ಗುರುತಿಸಲಾಗಿದೆ. ಘಟನಾ ಸ್ಥಳದಲ್ಲಿದ್ದ 14 ವಾಹನಗಳು ಹಾಗೂ ಎರಡು ಸೈಕಲ್‌ಗಳು ಸುಟ್ಟುಹೋಗಿವೆ.

ಘಟನೆಗೆ ಸಂಬಂಧಿಸಿದಂತೆ ಕಟ್ಟಡದ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಮೀಳಾ ಅವರ ದೇಹ ಸುಟ್ಟು ಕರಕಲಾಗಿದ್ದು, ಮೊದಲನೇ ಮಹಡಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ. ಇತರ ಇಬ್ಬರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದ್ದರೂ, ಅದಾಗಲೇ ಅವರು ಮೃತಪಟ್ಟಿದ್ದರು ಎಂಬುದಾಗಿ ಜಿಟಿಬಿ ಆಸ್ಪತ್ರೆ ವೈದ್ಯರು ಘೋಷಿಸಿದರು ಎಂದು ದೆಹಲಿ ಅಗ್ನಿಶಾಮಕ ಸೇವೆಗಳ (ಡಿಎಫ್‌ಎಸ್) ಅಧಿಕಾರಿಗಳು ತಿಳಿಸಿದ್ದಾರೆ.

ಗಂಭೀರವಾಗಿ ಗಾಯಗೊಂಡಿರುವ ವ್ಯಕ್ತಿಯನ್ನು ಮ್ಯಾಕ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಐದು ಅಗ್ನಿ ಶಾಮಕ ವಾಹನಗಳನ್ನು ಬಳಸಿ, ಬೆಂಕಿ ನಂದಿಸಲಾಯಿತು ಎಂದೂ ಅವರು ಹೇಳಿದ್ದಾರೆ.



ಚೆನ್ನೈನಲ್ಲಿ ಭಾನುವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಿಸಿದ ಕೋಲ್ಕತ್ತ ನೈಟ್ ರೈಡರ್ಸ್ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ 9

ನೈಟ್‌ರೈಡರ್ಸ್ ಮುಡಿಗೆ ಐಪಿಎಲ್ ಗರಿ

ಚೆನ್ನೈ: ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ 17ನೇ ಆವೃತ್ತಿಯ ಪ್ರಶಸ್ತಿ ಗೆದ್ದುಕೊಂಡಿತು. ತಂಡಕ್ಕೆ ಇದು ಮೂರನೇ ಟ್ರೋಫಿಯಾಗಿದೆ. ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಮಿಚೆಲ್ ಸ್ಟಾರ್ಕ್ ಅಮೋಘ ಬೌಲಿಂಗ್ ಬಲದಿಂದ ನೈಟ್ ರೈಡರ್ಸ್ 8 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯಭೇರಿ ಬಾರಿಸಿತು. ಹತ್ತು ವರ್ಷಗಳ ನಂತರ ಪ್ರಶಸ್ತಿಗೆ ಮುತ್ತಿಕ್ಕಿತು. ಲೀಗ್ ಹಂತದಲ್ಲಿ ಅಗ್ರಸ್ಥಾನ ಗಳಿಸಿ ಪ್ಲೇ ಆಫ್ ಪ್ರವೇಶಿಸಿದ್ದ ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ಮೊದಲ ಕ್ವಾಲಿಫೈಯರ್‌ನಲ್ಲಿ ಜಯಿಸಿ ಫೈನಲ್ ಪ್ರವೇಶಿಸಿತ್ತು.

- ಚಾಂಪಿಯನ್ ಕೋಲ್ಕತ್ತ ತಂಡವು ₹20 ಕೋಟಿ ಮತ್ತು ರನ್ನರ್ಸ್ ಅಪ್ ಹೈದರಾಬಾದ್ ತಂಡ ₹12.50 ಕೋಟಿ ಬಹುಮಾನವನ್ನು ಗೆದ್ದುಕೊಂಡವು.
- ಸರಣಿಯ ಆಟಗಾರ ಪ್ರಶಸ್ತಿಯನ್ನು ಕೋಲ್ಕತ್ತ ತಂಡದ ಸುನಿಲ್ ನಾರಾಯಣ್, ಪಂದ್ಯದ ಆಟಗಾರ ಪ್ರಶಸ್ತಿಯನ್ನು ಮಿಚೆಲ್ ಸ್ಟಾರ್ಕ್ ಪಡೆದರು.



ಸುನಿಲ್ ನಾರಾಯಣ್

ಐಪಿಎಲ್‌ನಲ್ಲಿ ಕೋಲ್ಕತ್ತ ಪ್ರಶಸ್ತಿ ಸಾಧನೆ
2012, 2014 ಹಾಗೂ 2024

ಫೈನಲ್ ಸ್ಕೋರ್

ಸನ್‌ರೈಸರ್ಸ್ ಹೈದರಾಬಾದ್	ಕೋಲ್ಕತ್ತ ನೈಟ್ ರೈಡರ್ಸ್
113 (18.3 ಓವರ್‌ಗಳಲ್ಲಿ)	2ಕ್ಕೆ 114 (10.3 ಓವರ್‌ಗಳಲ್ಲಿ)
ಮಿಚೆಲ್ ಸ್ಟಾರ್ಕ್	ವೆಂಕಟೇಶ್ ಅಯ್ಯರ್
3-0-14-2	ಅಜೇಯ 52

ಬಿ–1 ವರ್ಗದ ಏಳು ಕಬ್ಬಿಣ ಅದಿರು ಗಣಿಗಳ ಸಮೀಕ್ಷೆ 29ರಿಂದ

ಗಡಿ ಗುರುತಿಲ್ಲದೇ ಗಣಿ ಸರ್ವೆ ಆರಂಭ

• ಹರಿಶಂಕರ್ ಆರ್.

ಬಳ್ಳಾರಿ: ಅಕ್ರಮ ಗಣಿಗಾರಿಕೆಯಿಂದಾಗಿ ನಾಶವಾಗಿರುವ ಕರ್ನಾಟಕ ಮತ್ತು ಆಂಧ್ರ ಪ್ರದೇಶ ಮಧ್ಯದ ಅಂತರರಾಜ್ಯ ಗಡಿ ಗುರುತಿಸುವಿಕೆ ಇನ್ನೂ ಅಪೂರ್ಣವಾಗಿರುವಾಗಲೇ ಎರಡೂ ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಏಳು ಬಿ-1 ವರ್ಗದ ಗಣಿಗಳ ಜಂಟಿ ಸರ್ವೆಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮುಂದಾಗಿದೆ.

ಇದೇ 29ರಿಂದ ಆರಂಭವಾಗಲಿರುವ ಜಂಟಿ ಸರ್ವೆ, ಎಂಟು ದಿನ (ಜೂನ್ 6) ನಡೆಯಲಿದೆ. ಈ ಸಂಬಂಧ ಗಣಿ ಮಾಲೀಕರಿಗೆ ಬಳ್ಳಾರಿ ಜಿಲ್ಲಾ ಹಿರಿಯ ಭೂವಿಜ್ಞಾನಿ ಮೇ 23ರಂದು ಪತ್ರ ಬರೆದಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿನ 'ಅಕ್ರಮ ಗಣಿಗಾರಿಕೆ' ವಿರುದ್ಧದ ಹೋರಾಟಗಾರ ಎಸ್.ಆರ್ ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' 2009ರಲ್ಲಿ ರಿಟ್ ಸಲ್ಲಿಸಿತ್ತು. ಈ ಪ್ರಕರಣದಲ್ಲಿ 2024ರ ಮಾರ್ಚ್ 14ರಂದು ಆದೇಶ ನೀಡಿರುವ ಸುಪ್ರೀಂ ಕೋರ್ಟ್, 'ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಗಡಿಗೆ ಹೊಂದಿಕೊಂಡಿರುವ ಕಬ್ಬಿಣದ ಅದಿರಿನ ಏಳು ಗಣಿಗಳ ಜಂಟಿ ಸರ್ವೆ ನಡೆಸಬೇಕು ಮತ್ತು ನಕ್ಷೆ ಸಿದ್ಧಪಡಿಸಬೇಕು' ಎಂದು ಸೂಚಿಸಿತ್ತು.

5ನೇ ಪುಟ ನೋಡಿ



ಗಣಿ ಸಮೀಕ್ಷೆ ಏಕೆ?

'ಸಮಾಜ ಪರಿವರ್ತನ ಸಮುದಾಯ'ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ತುಮಕೂರು, ಚಿತ್ರದುರ್ಗ, ಬಳ್ಳಾರಿಯ ಬಹುತೇಕ ಗಣಿ ಗುತ್ತಿಗೆಗಳ ವರ್ಗೀಕರಣವನ್ನು 2012-13ರಲ್ಲೇ ಮಾಡಲಾಗಿತ್ತು. ಗಣಿಗಾರಿಕೆಯಲ್ಲಿ ಹೆಚ್ಚಿನ ಅಕ್ರಮವಾಗಿದ್ದರೆ, ಅವುಗಳನ್ನು 'ಸಿ' ವರ್ಗಕ್ಕೆ ಸೇರಿಸಲಾಗುತ್ತದೆ. ಅಲ್ಪ ಪ್ರಮಾಣದ ಅಕ್ರಮಗಳು ನಡೆದಿದ್ದರೆ ಅವುಗಳನ್ನು 'ಬಿ' ವರ್ಗಕ್ಕೆ ಸೇರಿಸಲಾಗುತ್ತದೆ. ಅಕ್ರಮ ಇಲ್ಲದಿದ್ದರೆ ಅದನ್ನು 'ಎ' ವರ್ಗಕ್ಕೆ ಸೇರಿಸಲಾಗುತ್ತದೆ. ಸದ್ಯ ಈ ಏಳೂ ಗಣಿಗಳು ಅಂತರರಾಜ್ಯ ಗಡಿಯಲ್ಲಿ ಬರುತ್ತಿರುವ ಕಾರಣ ಇವುಗಳನ್ನು 'ಬಿ-1' ವರ್ಗದಲ್ಲಿ ಅಂತಿಮವಲ್ಲದ ಗಣಿ ಗುತ್ತಿಗೆಗಳು ಎಂದು ಪರಿಗಣಿಸಲಾಗಿದೆ. ಮೊದಲು ಗಡಿ ಅಂತಿಮಗೊಂಡರೆ ಮಾತ್ರ ಗಣಿ ಸಮೀಕ್ಷೆ ಸಾಧ್ಯ ಎಂಬುದು ತಜ್ಞರ ಅಭಿಪ್ರಾಯ.

ಅಂತರರಾಜ್ಯ ಗಡಿ ಗುರುತಿಸುವ ಕಾರ್ಯದ ಸ್ಥಿತಿಗತಿಯ ಬಗ್ಗೆ ಮಾಹಿತಿ ಇಲ್ಲ. ಆದರೆ, ಸದ್ಯ ಬಿ-1 ವರ್ಗದ ಏಳು ಗಣಿಗಳ ಜಂಟಿ ಸರ್ವೆ ಕಾರ್ಯ ನಡೆಸಲು ಸಿಇಸಿ ತೀರ್ಮಾನಿಸಿದೆ. ಅದರಂತೆ ಜಿಲ್ಲಾಡಳಿತ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಎಲ್ಲ ಸಹಕಾರ ನೀಡಲಾಗುತ್ತಿದೆ

ಚಂದ್ರಶೇಖರ್ ಹಿರೇಮನಿ, ಹಿರಿಯ ಭೂವಿಜ್ಞಾನಿ, ಬಳ್ಳಾರಿ

ಹಿಗ್ಗಿದ ವಿದೇಶಿ ವ್ಯಾಪಾರ ಕೊರತೆ

ದೇಶದ ಆರ್ಥಿಕತೆಗೆ ಅಪಾಯ: ಆರ್ಥಿಕ ತಜ್ಞರ ಹೇಳಿಕೆ

ನವದೆಹಲಿ (ಪಿಟಿಐ): ಭಾರತವು ತನ್ನ ಪ್ರಮುಖ 10 ವ್ಯಾಪಾರ ಪಾಲುದಾರ ರಾಷ್ಟ್ರಗಳ ಪೈಕಿ ಒಂಬತ್ತು ದೇಶಗಳ ಜೊತೆಗೆ 2023-24ನೇ ಆರ್ಥಿಕ ವರ್ಷದಲ್ಲಿ ವ್ಯಾಪಾರ ಕೊರತೆ ಎದುರಿಸಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ಆಮದು ಮತ್ತು ರಫ್ತು ವಹಿವಾಟಿನ ನಡುವಣ ವ್ಯತ್ಯಾಸವನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ. ರಫ್ತಿಗಿಂತಲೂ ಆಮದು ಪ್ರಮಾಣವು ಹೆಚ್ಚಾಗಿರುವುದರಿಂದ ಈ ಅವಧಿಯಲ್ಲಿ ದೇಶದ ವ್ಯಾಪಾರ ಕೊರತೆಯು ದಾಖಲೆ ಬರೆದಿದೆ.

2022-23ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಚೀನಾ, ರಷ್ಯಾ, ಸಿಂಗಪುರ, ಕೊರಿಯಾ ಹಾಗೂ ಹಾಂಗ್‌ಕಾಂಗ್ ನಡುವೆ ವ್ಯಾಪಾರ ಕೊರತೆಯು ಹಿಗ್ಗಿದೆ. ಯುಎಇ, ಸೌದಿ ಅರೇಬಿಯಾ, ಇಂಡೊನೇಷ್ಯಾ ಹಾಗೂ ಇರಾಕ್ ನಡುವಿನ ಕೊರತೆಯ ಅಂತರ ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ.

2023-24ರಲ್ಲಿ ಭಾರತದೊಂದಿಗೆ ಅತಿಹೆಚ್ಚು ವ್ಯಾಪಾರ ನಡೆಸಿದ ರಾಷ್ಟ್ರಗಳ ಪಟ್ಟಿಯಲ್ಲಿ ಅಮೆರಿಕವನ್ನು ಹಿಂದಿಕ್ಕಿ ಚೀನಾವು ಅಗ್ರಸ್ಥಾನದಲ್ಲಿದೆ. ಭಾರತ ಮತ್ತು ಚೀನಾ ನಡುವೆ ₹9.83 ಲಕ್ಷ ಕೋಟಿ ಮೌಲ್ಯದ ದ್ವಿಪಕ್ಷೀಯ ವ್ಯಾಪಾರ ನಡೆದಿದೆ.

2021-22 ಮತ್ತು 2022-23ರಲ್ಲಿ ಅಮೆರಿಕವು ಮೊದಲ ಸ್ಥಾನದಲ್ಲಿತ್ತು. 2023-24ರಲ್ಲಿ ಭಾರತ ಮತ್ತು ಅಮೆರಿಕದ ಮಧ್ಯೆ ₹9.81 ಲಕ್ಷ ಕೋಟಿ ಮೌಲ್ಯದ ದ್ವಿಪಕ್ಷೀಯ ವ್ಯಾಪಾರ ನಡೆದಿದೆ.

9ನೇ ಪುಟ ನೋಡಿ

ಅತಿ ಹೆಚ್ಚು ಕೊರತೆ ಯಾರೊಂದಿಗೆ?

- ₹6.81 ಲಕ್ಷ ಕೋಟಿ — ಚೀನಾ
- ₹4.75 ಲಕ್ಷ ಕೋಟಿ — ರಷ್ಯಾ
- ₹1.22 ಲಕ್ಷ ಕೋಟಿ — ಕೊರಿಯಾ
- ₹1.01 ಲಕ್ಷ ಕೋಟಿ — ಹಾಂಗ್‌ಕಾಂಗ್



ಒಳಪುಟಗಳಲ್ಲಿ



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕೆಆರ್‌ಎಸ್; ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಜಿಲ್ಲೆ ಮತ್ತು ಕೇರಳದ ವಯನಾಡು ಪ್ರದೇಶದಲ್ಲಿ ಮಳೆಯಾಗುತ್ತಿರುವ ಕಾರಣ ಕೆಆರ್‌ಎಸ್ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದೆ.

ವಾರದಿಂದೀಚೆಗೆ ಜಲಾಶಯಕ್ಕೆ 2 ಅಡಿ ನೀರು ಹರಿದು ಬಂದಿದೆ. ಜಲಾಶಯದ ನೀರಿನ ಮಟ್ಟ ಭಾನುವಾರ 82.30 ಅಡಿಗೆ ತಲುಪಿದ್ದು, 3,405 ಕ್ಯುಸೆಕ್ ಒಳಹರಿವು, 533 ಕ್ಯುಸೆಕ್ ಹೊರಹರಿವು ಇತ್ತು. ಈ ಜಲಾಶಯದ ಗರಿಷ್ಠ ಸಂಗ್ರಹ ಸಾಮರ್ಥ್ಯ 124.80 ಅಡಿಗಳು.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಭಾನುವಾರ ಉತ್ತಮ ಮಳೆ ಸುರಿಯಿತು. ನೆಲ ತಂಪಾಯಿತು.

ಕಲಬುರಗಿ ಜಿಲ್ಲೆಯ ಚಿಂಚೋಳಿ, ಯಾದಗಿರಿ ಹಾಗೂ ದೇವದುರ್ಗ ಸೇರಿದಂತೆ ಹಲವೆಡೆ ಗುಡುಗು ಸಿಡಿಲಿನೊಂದಿಗೆ ಧಾರಾಕಾರ ಮಳೆಯಾಗಿದೆ.

ಯಾದಗಿರಿ ನಗರದ ರೈಲು ನಿಲ್ದಾಣ ಮತ್ತು ಹಳೆ ಬಸ್ ನಿಲ್ದಾಣದ ರಸ್ತೆ ಜಲಾವೃತಗೊಂಡಿತ್ತು. ಚರಂಡಿ ನೀರು ತಗ್ಗು ಪ್ರದೇಶದ ಮನೆಗಳಿಗೆ ನುಗ್ಗಿತು.

ಅಲ್ಲಿಪುರ ಗ್ರಾಮದಲ್ಲಿ ಆಟೊ, ಟ್ರ್ಯಾಕ್ಟರ್ ಮೇಲೆ ಮರ ಉರುಳಿ ಬಿದ್ದಿದೆ. ಹಲವು ಗ್ರಾಮಗಳಲ್ಲಿ ಮರಗಳು ಹಾಗೂ ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ.

ಕಲಬುರಗಿ ಜಿಲ್ಲೆಯ ವಾಡಿ ಸಮೀಪದ ಲಾಡ್ಲಾಪುರ ಗ್ರಾಮದಲ್ಲಿ ಸಿಡಿಲು ಬಡಿದು ಸಣ್ಣ ಪ್ರಹ್ಲಾದ (43) ಹಾಗೂ ಪ್ರಕಾಶ ಏಕನಾಥ (50) ಎಂಬುವವರು ಸ್ಥಳದಲ್ಲಿಯೇ ಮೃತಪಟ್ಟರು.



ಯಾದಗಿರಿ ನಗರದ ಹೊಸಳ್ಳಿ ಕ್ರಾಸ್ ರಸ್ತೆಯಲ್ಲಿ ಮಳೆ ನೀರು ರಸ್ತೆ ಮೇಲೆ ಹರಿಯಿತು

1 ಲಕ್ಷ ಜನ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ

ಕೋಲ್ಕತ್ತ (ಪಿಟಿಐ): ರಿಮಲ್ ಚಂಡಮಾರುತದಿಂದ ಜೀವಹಾನಿ ಉಂಟಾಗುವುದನ್ನು ತಪ್ಪಿಸುವ ಉದ್ದೇಶದಿಂದ ಪಶ್ಚಿಮ ಬಂಗಾಳ ಸರ್ಕಾರವು ಅಂದಾಜು 1.10 ಲಕ್ಷ ಜನರನ್ನು ಕರಾವಳಿ ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ರವಾನಿಸಿದೆ. 8

174 ವರ್ಷಗಳ ಹಿಂದೆ ಸ್ಥಾಪನೆಯಾದ ಶಾಲೆಗೆ ಕೊಡುಗೆ

ಪತಿ ನೆನಪಿಗಾಗಿ ಗ್ರಂಥಾಲಯ ಅಭಿವೃದ್ಧಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: 2022ರ ಆಗಸ್ಟ್‌ನಲ್ಲಿ ನಿಧನರಾದ ಪತಿ ನೆನಪಿಗಾಗಿ ಪತ್ನಿಯೊಬ್ಬರು, ಇಲ್ಲಿನ ಸರ್ಕಾರಿ ಸರ್ದಾರ್ ಪ್ರೌಢಶಾಲೆಯಲ್ಲಿ ₹1.13 ಲಕ್ಷ ವೆಚ್ಚದಲ್ಲಿ ಗ್ರಂಥಾಲಯ ಅಭಿವೃದ್ಧಿಪಡಿಸಿದ್ದಾರೆ.

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ಥಾನಿಕ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಡಾ.ವಿದ್ಯಾ ಅರಳಿಕಟ್ಟಿ ಇಂಥದ್ದೊಂದು ಕೆಲಸ ಮಾಡಿದವರು.

174 ವರ್ಷಗಳ ಹಿಂದೆ ಸ್ಥಾಪನೆಯಾದ ಈ ಪ್ರೌಢಶಾಲೆಯಲ್ಲಿ ಗ್ರಂಥಾಲಯಕ್ಕೆ ಪ್ರತ್ಯೇಕ ಕೊಠಡಿ, ಪಠಿಕರ ಮತ್ತು ಆಸನ ವ್ಯವಸ್ಥೆ ಇರಲಿಲ್ಲ. ಒಂದಿಷ್ಟು ಹಳೆಯ ಪುಸ್ತಕಗಳನ್ನು ಹೊರತುಪಡಿಸಿದರೆ, ಗ್ರಂಥಾಲಯ ಇದ್ದೂ ಇಲ್ಲದಂತಿತ್ತು. ಇದರಿಂದಾಗಿ ಇಲ್ಲಿ ಓದುತ್ತಿರುವ ಕನ್ನಡ, ಮರಾಠಿ ಮತ್ತು ಉರ್ದು ಮಾಧ್ಯಮಗಳ 583 ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ತೊಂದರೆಯಾಗುತ್ತಿತ್ತು.

ಕಳೆದ ವರ್ಷ ಶಾಲೆಗೆ ಬಂದಿದ್ದ ವಿದ್ಯಾ ಅವರು, ವೈದ್ಯರಾಗಿದ್ದ ತಮ್ಮ ಪತಿ ಪುರುಷೋತ್ತಮ ಹೆಸರಿನಲ್ಲಿ ₹1 ಲಕ್ಷ ಠೇವಣಿ ಇರಿಸಿ ಅದರಲ್ಲಿ ಬರುವ ಬಡ್ಡಿಯ ಹಣದಲ್ಲಿ ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ಸಹಾಯ ಮಾಡುವುದಾಗಿ ತಿಳಿಸಿದರು. ಆಗ ಮುಖ್ಯಶಿಕ್ಷಕ ಶಿವಕಾಂತ ಹಾದಿಮನಿ, ಶಿಕ್ಷಕ ರವಿ ಹಲಕರ್ಣಿ, 'ಪ್ರತಿಭಾವಂತ ಮಕ್ಕಳಿಗೆ ಆರ್ಥಿಕ ಸಹಾಯ ಮಾಡಲು ಹಲವರು ನಮ್ಮಲ್ಲಿ ಠೇವಣಿ ಇರಿಸಿದ್ದಾರೆ. ಇದರ ಬದಲಿಗೆ ಗ್ರಂಥಾಲಯ ಅಭಿವೃದ್ಧಿಪಡಿಸಿದರೆ ಅನುಕೂಲವಾಗುತ್ತದೆ' ಎಂದರು. ಸರ್ಕಾರ 'ವಿವೇಕ' ಯೋಜನೆಯಡಿ ಸುಸಜ್ಜಿತವಾದ ಕೊಠಡಿಯೂ ನಿರ್ಮಾಣವಾಯಿತು.

5ನೇ ಪುಟ ನೋಡಿ



ಬೆಳಗಾವಿಯ ಸರ್ಕಾರಿ ಸರ್ದಾರ್ ಪ್ರೌಢಶಾಲೆ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳು

ಮೊದಲು ಗ್ರಂಥಾಲಯ ಇಲ್ಲದ್ದರಿಂದ ಸ್ವಯಂ ಅಧ್ಯಯನಕ್ಕೆ ತೊಡಕಾಗಿತ್ತು. ಗ್ರಂಥಾಲಯದಿಂದ ಕಲಿಕೆಗೆ ಅನುಕೂಲವಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 94.72 ಅಂಕ ಗಳಿಸಲು ಸಾಧ್ಯವಾಯಿತು

ರಕ್ಷಿತಾ ಮಾನಗಾವಿ, ವಿದ್ಯಾರ್ಥಿನಿ



ಡಾ.ಪುರುಷೋತ್ತಮ – ವಿದ್ಯಾ ದಂಪತಿ

ಹಲವರಿಂದ ನೆರವು

ಬೆಳಗಾವಿಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ರಮೇಶ ಮಾಂಗಳೇಕರ ಈ ಗ್ರಂಥಾಲಯಕ್ಕೆ ₹18 ಸಾವಿರ ಮೌಲ್ಯದ ಪೀಠೋಪಕರಣ ಕೊಡಿಸಿದ್ದಾರೆ. ನಗರ ಕೇಂದ್ರ ಗ್ರಂಥಾಲಯದವರು ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾದ 1 ಸಾವಿರ ಪುಸ್ತಕ ನೀಡಿದ್ದಾರೆ. ಅಲ್ಲದೆ, ಶಾಲೆಯವರು ₹30 ಸಾವಿರ ಅನುದಾನದಲ್ಲಿ ಹಲವು ಪ್ರಕಾರಗಳ ಪುಸ್ತಕ ಖರೀದಿಸಿದ್ದಾರೆ.

ಇಬ್ಬರ ಹತ್ಯೆ ಪ್ರಕರಣ ಭೇದಿಸಿದ ಬನಶಂಕರಿ ಪೊಲೀಸರು • ಔಷಧ ಮಳಿಗೆಯಲ್ಲಿ ನಿಷೇಧಿತ ಮಾತ್ರೆ ಮಾರಾಟ

ಡ್ರಗ್ಸ್ ಅಮಲು: ಹಣಕ್ಕಾಗಿ ಇಬ್ಬರ ಕೊಲೆ

ಪ್ರಜಾವಾಣಿ ವಾರ್ತೆ


ಗಿರೀಶ್

ಬೆಂಗಳೂರು: ನಗರದಲ್ಲಿ ಇತ್ತೀಚೆಗೆ ನಡೆದಿದ್ದ ಇಬ್ಬರ ಹತ್ಯೆ ಪ್ರಕರಣ ಭೇದಿಸಿರುವ ಬನಶಂಕರಿ ಠಾಣೆ ಪೊಲೀಸರು, ಆರೋಪಿ ಎಂ. ಗಿರೀಶ್ ಅಲಿಯಾಸ್ ಗಿರಿಯನ್ನು (26) ಬಂಧಿಸಿದ್ದಾರೆ.

‘ಸುಬ್ರಹ್ಮಣ್ಯಪುರದ ವಸಂತಪುರ ಗುಡ್ಡೆಯ ಗಿರೀಶ್, ಪ್ರತ್ಯೇಕ ಸ್ಥಳಗಳಲ್ಲಿ ಇಬ್ಬರನ್ನು ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಪರಾರಿಯಾಗಿದ್ದ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಗಿರೀಶ್‌ನನ್ನು ಇತ್ತೀಚೆಗೆ ಸೆರೆ ಹಿಡಿಯಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಗಿರೀಶ್, ಡ್ರಗ್ಸ್ ವ್ಯಸನಿ. ನಿತ್ಯವೂ ಗಾಂಜಾ ತೆಗೆದುಕೊಳ್ಳುತ್ತಿದ್ದ. ಕೆಲ ಔಷಧ ಮಳಿಗೆಯಲ್ಲಿ ಅಕ್ರಮವಾಗಿ ಮಾರುತ್ತಿದ್ದ ನಿಷೇಧಿತ ಮಾತ್ರೆಗಳನ್ನೂ ಖರೀದಿಸಿ ನುಂಗಿ ನಶೆ ಏರಿಸಿಕೊಳ್ಳುತ್ತಿದ್ದ. ಇದೇ ಅಮಲಿನಲ್ಲಿ ನಗರದೆಲ್ಲೆಡೆ ರಾತ್ರಿ ಸುತ್ತಾಡುತ್ತಿದ್ದ. ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಲಗುತ್ತಿದ್ದವರನ್ನು ಸುಲಿಗೆ ಮಾಡುತ್ತಿದ್ದ. ಹಣ ನೀಡದಿದ್ದಕ್ಕೆ ಇಬ್ಬರನ್ನು ಕೊಂದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು
- ಎರಡನೇ ಮದುವೆಯಾಗಿದ್ದ ತಂದೆ
- ಕೇರಳದಲ್ಲಿ ನೆಲೆಸಿದ್ದ ತಾಯಿ–ತಂಗಿ
- ಮನೆಯಿಂದ ದೂರವಿದ್ದ ಆರೋಪಿ

ಅಪರಾಧ ಸುದ್ದಿ

ಮನೆಯಿಂದ ದೂರವಿದ್ದ ಆರೋಪಿ: ‘ಗಿರೀಶ್‌ನ ತಂದೆ ಸುಮಾರು 10 ವರ್ಷಗಳ ಹಿಂದೆಯೇ ಎರಡನೇ ಮದುವೆಯಾಗಿ ಪ್ರತ್ಯೇಕವಾಗಿ ವಾಸವಿದ್ದಾರೆ. ತಾಯಿ ಹಾಗೂ ತಂಗಿ ಜೊತೆ ಗಿರೀಶ್ ವಾಸವಿದ್ದ. ವಸಂತಪುರ ಗುಡ್ಡೆಯಲ್ಲಿದ್ದ ಮನೆಯನ್ನು ಕೆಲ ವರ್ಷಗಳ ಹಿಂದೆಯೇ ಮಾರಾಟ ಮಾಡಿದ್ದ ತಾಯಿ–ತಂಗಿ, ಕೇರಳಕ್ಕೆ ಹೋಗಿ ನೆಲೆಸಿದ್ದಾರೆ. ಆದರೆ, ಗಿರೀಶ್ ಬೆಂಗಳೂರು ಬಿಟ್ಟು ಹೋಗಿರಲಿಲ್ಲ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಗಿರೀಶ್, ಗಾರೆ ಕೆಲಸ, ಹೋಟೆಲ್ ಸಹಾಯಕ ಹಾಗೂ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ. 2015ರಿಂದ ಸ್ನೇಹಿತರ ಜೊತೆ ಸೇರಿ ಅಪರಾಧ ಕೃತ್ಯ ಎಸಗಲಾರಂಭಿಸಿದ್ದ. ಹಲ್ಲೆ, ಲೈಂಗಿಕ ದೌರ್ಜನ್ಯ, ದರೋಡೆಗೆ ಸಂಬಂಧಪಟ್ಟಂತೆ ಈತನ ವಿರುದ್ಧ 4 ಪ್ರಕರಣಗಳು ದಾಖಲಾಗಿದ್ದವು. ಈತ ಜೈಲಿಗೂ ಹೋಗಿ, ಜಾಮೀನು ಮೇಲೆ ಹೊರಗೆ ಬಂದಿದ್ದ’ ಎಂದರು.

ಸ್ನೇಹಿತನ ಕೊಂದಿದ್ದ: ‘ಸಿಟಿ ಮಾರುಕಟ್ಟೆಯಲ್ಲಿ ಇತ್ತೀಚೆಗೆ ಆರೋಪಿ ಗಿರೀಶ್ ಸುತ್ತಾಡುತ್ತಿದ್ದ. ಇದೇ ಸಂದರ್ಭದಲ್ಲಿ ಸ್ನೇಹಿತ ಸುರೇಶ್ ಉರುಫ್ ಸೂರಿ ಭೇಟಿಯಾಗಿದ್ದ. ಡ್ರಗ್ಸ್ ಅಮಲಿನಲ್ಲಿದ್ದ ಗಿರೀಶ್, ಹಣ ನೀಡುವಂತೆ ಸ್ನೇಹಿತನನ್ನು ಕೇಳಿದ್ದ. ತಮ್ಮ ಬಳಿ ಹಣವಿಲ್ಲವೆಂದು ಸುರೇಶ್ ಹೇಳಿದ್ದ. ಅಷ್ಟಕ್ಕೆ ಕೋಪಗೊಂಡ ಆರೋಪಿ, ಸುರೇಶ್ ಮೇಲೆ ಹಲ್ಲೆ ಮಾಡಿದ್ದ. ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ಸ್ಥಳದಿಂದ ಪರಾರಿಯಾಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ಸುರೇಶ್ ಕೊಲೆ ಸಂಬಂಧ ಸಿಟಿ ಮಾರುಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ, ಆರೋಪಿ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ’ ಎಂದರು.

‘ಬನಶಂಕರಿ ಠಾಣೆ ವ್ಯಾಪ್ತಿಯಲ್ಲಿರುವ ಜಯನಗರ 7ನೇ ಹಂತದಲ್ಲಿ ಇತ್ತೀಚೆಗೆ ರಾತ್ರಿ ಸುತ್ತಾಡುತ್ತಿದ್ದ ಆರೋಪಿ ಗಿರೀಶ್, ರಸ್ತೆ ಪಕ್ಕದಲ್ಲಿ ಮಲಗಿದ್ದ ವ್ಯಕ್ತಿಯೊಬ್ಬರನ್ನು ಸುಲಿಗೆ ಮಾಡಲು ಯತ್ನಿಸಿದ್ದ. ಆದರೆ, ಅವರು ಹಣ ಕೊಟ್ಟಿರಲಿಲ್ಲ. ಅವರ ಮೇಲೆಯೂ ಹಲ್ಲೆ ಮಾಡಿದ್ದ ಆರೋಪಿ, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ತಲೆಮರೆಸಿಕೊಂಡಿದ್ದ. ಕೊಲೆಯಾಗಿದ್ದ ವ್ಯಕ್ತಿಯ ಗುರುತು ಇದುವರೆಗೂ ಪತ್ತೆಯಾಗಿಲ್ಲ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದಾಗ, ಆರೋಪಿ ಗಿರೀಶ್ ಸಿಕ್ಕಿಬಿದ್ದ’ ಎಂದು ಪೊಲೀಸರು ಹೇಳಿದರು.

ಸುಲಿಗೆ ಮುಂದುವರಿಕೆ: ‘ಇಬ್ಬರನ್ನೂ ಕೊಲೆ ಮಾಡಿದ್ದ ಆರೋಪಿ, ತಲೆಮರೆಸಿಕೊಂಡು ನಗರದ ಹಲವೆಡೆ ಸುತ್ತಾಡುತ್ತಿದ್ದ. ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಲಗುತ್ತಿದ್ದವರನ್ನು ಬೆದರಿಸುತ್ತಿದ್ದ. ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಜನರನ್ನು ಅಡ್ಡಗಟ್ಟಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ವ್ಯಕ್ತಿ ಕೊಲೆ ನಡೆದಿದ್ದ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿ ದೃಶ್ಯ ಸೆರೆಯಾಗಿತ್ತು. ಹೆಚ್ಚಿನ ತನಿಖೆ ಕೈಗೊಂಡಾಗ, ಆರೋಪಿ ಹೆಸರು ಹಾಗೂ ವಿಳಾಸ ಪತ್ತೆಯಾಯಿತು. ಕೂಡಲೇ ಈತನನ್ನು ವಶಕ್ಕೆ ಪಡೆಯಲಾಯಿತು. ವಶಕ್ಕೆ ಪಡೆಯದಿದ್ದರೆ, ಆರೋಪಿ ಮತ್ತಷ್ಟು ಮಂದಿಯನ್ನು ಕೊಲೆ ಮಾಡುವ ಆತಂಕವೂ ಇತ್ತು’ ಎಂದು ಹೇಳಿದರು.

‘ಔಷಧಿ ಮಳಿಗೆಗಳ ಪತ್ತೆಗೆ ಕ್ರಮ’

‘ನಗರದ ಕೆಲ ಔಷಧಿ ಮಳಿಗೆಯಲ್ಲಿ ನಿಷೇಧಿತ ಮಾತ್ರೆಗಳನ್ನು ಮಾರುತ್ತಿರುವುದು ಗೊತ್ತಾಗಿದೆ. ಇದೇ ಮಾತ್ರೆ ಖರೀದಿಸಿ ನುಂಗುತ್ತಿದ್ದ ಆರೋಪಿ ಗಿರೀಶ್, ಕೊಲೆ ಹಾಗೂ ಸುಲಿಗೆ ಮಾಡಿದ್ದ ಸಂಗತಿ ಪತ್ತೆಯಾಗಿದೆ. ಇಂಥ ಔಷಧಿ ಮಳಿಗೆಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಡ್ರಗ್ಸ್ ಅಂಶವಿರುವ ಮಾತ್ರೆಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಹೆಚ್ಚು ಹಣ ಸಂಪಾದಿಸಲು ಕೆಲ ಔಷಧಿ ಮಳಿಗೆ ಮಾಲೀಕರು, ನಿಷೇಧಿತ ಮಾತ್ರೆಗಳನ್ನು ಮಾರುತ್ತಿದ್ದಾರೆ. ಗಾಂಜಾ ಹಾಗೂ ಸಿಂಥೆಟಿಕ್ ಡ್ರಗ್ಸ್ ಲಭ್ಯವಾಗದ ಸಂದರ್ಭದಲ್ಲಿ ಹಲವು ವ್ಯಸನಿಗಳು, ಮಾತ್ರೆಗಳನ್ನು ಖರೀದಿಸಿ ನುಂಗುತ್ತಿರುವುದು ಕಂಡುಬಂದಿದೆ. ಇದು ಅಪಾಯಕಾರಿಯಾಗಿದ್ದು, ಮಳಿಗೆಗಳನ್ನು ಪತ್ತೆ ಮಾಡಿ ಕ್ರಮ ಜರುಗಿಸಲಾಗುವುದು’ ಎಂದು ತಿಳಿಸಿದರು.

ಅನುಚಿತ ವರ್ತನೆ: ಯುವಕನಿಗೆ ಥಳಿತ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬಾಲಕಿ ಜೊತೆ ಅನುಚಿತವಾಗಿ ವರ್ತಿಸಿದ್ದ ಆರೋಪಿ ಯುವಕನನ್ನು ಸಾರ್ವಜನಿಕರೇ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಯುವಕನನ್ನು ವಶಕ್ಕೆ ಪಡೆಯಲಾಗಿದೆ. ಘಟನೆ ಬಗ್ಗೆ ಸದ್ಯಕ್ಕೆ ಯಾರೂ ದೂರು ನೀಡಿಲ್ಲ. ಬಾಲಕಿ ಅಥವಾ ಪೋಷಕರಿಂದ ಹೇಳಿಕೆ ಪಡೆದ ನಂತರ, ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯ ಕಾಲೇಜೊಂದರಲ್ಲಿ ಶನಿವಾರ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಗಲಾಟೆ ಆಗಿತ್ತು. ಎರಡೂ ಕಡೆಯವರು ಗಾಯಗೊಂಡಿದ್ದರು. ಒಂದು ಗುಂಪಿನ ಯುವಕ, ಠಾಣೆಗೆ ದೂರು ನೀಡಿದ್ದರು. ಇನ್ನೊಂದು ಗುಂಪಿನ ಯುವಕನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು’ ಎಂದು ತಿಳಿಸಿದರು.


‘ಗಾಯಾಳು ಯುವಕನ ಸಂಬಂಧಿಯಾದ ಬಾಲಕಿ ಆಸ್ಪತ್ರೆಯಲ್ಲಿದ್ದರು. ಒಂದು ಗುಂಪಿನ ಪರವಾಗಿ ಆಸ್ಪತ್ರೆಗೆ ಹೋಗಿದ್ದ ಆರೋಪಿ ಯುವಕ, ಬಾಲಕಿ ಜೊತೆ ಅನುಚಿತವಾಗಿ ವರ್ತಿಸಿದ್ದ. ಅದನ್ನು ಗಮನಿಸಿದ್ದ ಸಂಬಂಧಿಕರು ಹಾಗೂ ಸಾರ್ವಜನಿಕರು, ಯುವಕನನ್ನು ಹಿಡಿದು ಥಳಿಸಿದ್ದರು. ಸ್ಥಳಕ್ಕೆ ಹೋದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಯುವಕನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದಾರೆ’ ಎಂದು ಹೇಳಿದರು.

‘ಆರೋಪಿ ಯುವಕ, ಡ್ರಗ್ಸ್ ತೆಗೆದುಕೊಂಡಿದ್ದ. ಅದರ ಅಮಲಿನಲ್ಲಿ ಆಸ್ಪತ್ರೆಗೆ ಹೋಗಿ ಗಲಾಟೆ ಮಾಡಿರುವುದು ಗೊತ್ತಾಗಿದೆ. ಡ್ರಗ್ಸ್ ಬಗ್ಗೆಯೂ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲು ಚಿಂತನೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಮಾಲ್, ಗೇಮ್ ಝೋನ್‌ಗಳ ಸುರಕ್ಷತಾ ಕ್ರಮ ಪರಿಶೀಲಿಸಿ’

ಬೆಂಗಳೂರು: ನಗರದಲ್ಲಿರುವ ಪ್ರತಿಷ್ಠಿತ ಮಾಲ್‌ಗಳು, ಗೇಮಿಂಗ್ ಝೋನ್ಸ್, ಮನರಂಜನಾ ಕೇಂದ್ರಗಳಲ್ಲಿ ಅಗ್ನಿ ದುರಂತ ಸೇರಿದಂತೆ ಎಲ್ಲ ರೀತಿಯ ಅನಾಹುತ ತಪ್ಪಿಸಲು ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್‌ಗೆ ಪತ್ರ ಬರೆದಿದ್ದಾರೆ.



‘ಗುಜರಾತಿನ ರಾಜ್‌ಕೋಟ್‌ನ ಮನರಂಜನಾ ಕೇಂದ್ರದಲ್ಲಿ ಶನಿವಾರ ಸಂಭವಿಸಿರುವ ಅಗ್ನಿ ಅವಘಡ ಕಳವಳಕಾರಿಯಾಗಿದೆ. ಈ ದುರಂತ ಎಚ್ಚರಿಕೆ ಗಂಟೆಯಾಗಿದೆ. ಬೆಂಗಳೂರಿನಲ್ಲಿರುವ ಮಾಲ್ ಹಾಗೂ ಇತರೆ ಜನನಿಬಿಡ ಕೇಂದ್ರಗಳಲ್ಲಿ ಅಗ್ನಿ ದುರಂತ ಸೇರಿದಂತೆ ಯಾವುದೇ ಅನಾಹುತ ಸಂಭವಿಸದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಸಂಬಂಧಪಟ್ಟ ಅಧಿಕಾರಿಗಳಿಂದ ಪರಿಶೀಲನೆ ನಡೆಸಬೇಕು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಈ ಕೇಂದ್ರಗಳಲ್ಲಿ ಈಗಾಗಲೇ ಸೂಚಿಸಿರುವ ರಕ್ಷಣಾ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆಯೇ ಎಂದು ಪರಿಶೀಲಿಸಬೇಕು. ಬೆಂಗಳೂರಿನಲ್ಲಿ ಗುಜರಾತ್‌ನಂತಹ ಯಾವುದೇ ದುರ್ಘಟನೆ ನಡೆಯಬಾರದು ಎಂದು ಸೂಚನೆ ನೀಡಿದ್ದಾರೆ.

‘ರಾಜಕೀಯ ಮರ್ಜಿಗೆ ಒಳಗಾದರೆ ಉತ್ತಮ ಆಡಳಿತ ಅಸಾಧ್ಯ’

ಬೆಂಗಳೂರು: ‘ಸದ್ಯದ ಪರಿಸ್ಥಿತಿಯಲ್ಲಿ ಅಧಿಕಾರಿಗಳು ರಾಜಕೀಯ ಮರ್ಜಿಗೆ ಒಳಗಾಗುತ್ತಿದ್ದಾರೆ. ರಾಜಕೀಯ ಮರ್ಜಿಗೆ ಒಳಗಾದರೆ ಉತ್ತಮ ಆಡಳಿತ ನೀಡಲು ಸಾಧ್ಯವಿಲ್ಲ’ ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

ನಗರದಲ್ಲಿ ಭಾನುವಾರ ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ‘ಟಿ.ತಿಮ್ಮೇಗೌಡರ ಬಹುಮುಖಿ ಚಿಂತನೆಗಳು’ ಕುರಿತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ಅಧಿಕಾರವನ್ನು ಹೊಣೆಗಾರಿಕೆ ಎಂದು ಭಾವಿಸಿ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಜನಪರವಾಗಿ ಕೆಲಸ ಮಾಡಲು ಸಾಧ್ಯ ಎಂದು ಹೇಳಿದರು. ಕೆಲಸದಿಂದ ನುಣುಚಿಕೊಂಡರೆ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗಲ್ಲ ಎಂದು ಎಚ್ಚರಿಸಿದರು.

ಆಡಳಿತದಲ್ಲಿ ನೈತಿಕ ಪ್ರಜ್ಞೆ ಇಟ್ಟುಕೊಂಡು ಸಮರ್ಪಣಾ ಭಾವದಿಂದ ಕೆಲಸ ಮಾಡಬೇಕು ಎಂಬುದಕ್ಕೆ ತಿಮ್ಮೇಗೌಡರು ಮಾದರಿ ಎಂದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ ಮಾತನಾಡಿ, ಅನ್ಯ ರಾಜ್ಯದಿಂದ ಬಂದ ಐಎಎಸ್ ಅಧಿಕಾರಿಗಳು ಇಲ್ಲಿನ ನೆಲ, ಜಲ, ಸಂಸ್ಕೃತಿಗಳ ಪ್ರೀತಿ ಬೆಳೆಸಿಕೊಳ್ಳಬೇಕು ಎಂದು ಹೇಳಿದರು. ವೇದಿಕೆ ಅಧ್ಯಕ್ಷ ಜೀವನ್ಮುಖಿ ಸುರೇಶ್ ಇದ್ದರು. ಟಿ. ತಿಮ್ಮೇಗೌಡ ಅವರನ್ನು ಗೌರವಿಸಲಾಯಿತು.


ಕಾರ್ಯಕ್ರಮದಲ್ಲಿ ಶಾಂತಾರಾಮ್ ಪೈ, ಕಿಶನ್ ಶರ್ಮಾ ಹಾಗೂ ಬಿ.ಎಸ್. ರವೀಂದ್ರ ಉಪಸ್ಥಿತರಿದ್ದರು

ನಿಘಂಟು ತಜ್ಞ ಎಚ್ಚೆಸ್ಕೆ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ಎಚ್ಚೆಸ್ಕೆ ಬೆಳಕು ಒಂಬತ್ತನೆ ಆವೃತ್ತಿ’ ಕಾರ್ಯಕ್ರಮದಲ್ಲಿ ‘ಕನ್ನಡದಲ್ಲಿ ಬ್ಯಾಂಕಿಂಗ್’ ಮತ್ತು ‘ಬ್ಯಾಂಕಿಂಗ್‌ನಲ್ಲಿ ಕನ್ನಡ’ವನ್ನು ತರಲು ಶ್ರಮಿಸಿದ್ದ ಅಂಕಣಕಾರ ಹಾಗೂ ನಿಘಂಟು ತಜ್ಞ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರನ್ನು ಸ್ಮರಿಸಲಾಯಿತು.

ಕಾರ್ಯಕ್ರಮಕ್ಕೆ ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಕಿಶನ್ ಶರ್ಮಾ ಚಾಲನೆ ನೀಡಿ, ಕನ್ನಡದಲ್ಲಿ ಶುಭ ಹಾರೈಸಿದರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಕೆ. ಶಾಂತಾರಾಮ ಪೈ ಪ್ರತಿಷ್ಠಾನದ ಜಾಲತಾಣಕ್ಕೆ ಚಾಲನೆಗೆ ನೀಡಿದರು.

ಎಚ್ಚೆಸ್ಕೆ ಅವರ ‘ಸಮಗ್ರ ಪ್ರಬಂಧಗಳು’, ‘ಬ್ಯಾಂಕಿಂಗ್ ಪ್ರಪಂಚದ ಸಂಪಾದಕೀಯಗಳು’ ಕೃತಿಯ ‘ಕೇಳು ಪುಸ್ತಕ’ ಆವೃತ್ತಿಯನ್ನು ರೂಪಿಸಿ, ಯೂಟ್ಯೂಬ್‌ನಲ್ಲಿ ಪ್ರಚುರಪಡಿಸಿದ ಎಚ್.ಎಲ್. ಗುರುಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬಿ.ಎಸ್. ರವೀಂದ್ರ ಅವರು ಬ್ಯಾಂಕಿಂಗ್ ಕನ್ನಡಕ್ಕೆ ಎಚ್ಚೆಸ್ಕೆ ಅವರ ಕೊಡುಗೆಯ ಬಗ್ಗೆ ವಿವರಿಸಿದರು.

‘ಎಚ್ಚೆಸ್ಕೆ ಅವರ ಸಮಗ್ರ ಲಲಿತ ಪ್ರಬಂಧಗಳ ವೈಶಿಷ್ಟ್ಯ’ದ ಬಗ್ಗೆ ಲೋಲಾಕ್ಷಿ ಕೆರೊಡಿ, 'ಭಾರತೀಯ ಬ್ಯಾಂಕಿಂಗ್: ಕೃತಕ ಬುದ್ಧಿಮತ್ತೆಯ ಬಳಕೆ ಮತ್ತು ಸವಾಲುಗಳು’ ವಿಷಯದ ಬಗ್ಗೆ ಎಚ್. ಶ್ರೀಧರ ರಾವ್ ಮಾತನಾಡಿದರು.

ಪಾನ್ ಕಾರ್ಡ್, ಕ್ರೆಡಿಟ್ ಕಾರ್ಡ್ ನವೀಕರಣ ಹೆಸರಿನಲ್ಲಿ ಮೋಸ

ಆ್ಯಪ್ ಇನ್‌ಸ್ಟಾಲ್ ಮಾಡಿಸಿ ₹ 14.16 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್‌ನಲ್ಲಿ ಆ್ಯಪ್ ಇನ್‌ಸ್ಟಾಲ್ ಮಾಡಿಸಿ ಬ್ಯಾಂಕ್ ಖಾತೆಯಲ್ಲಿದ್ದ ₹ 14.16 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ನಗರದ 57 ವರ್ಷ ವಯಸ್ಸಿನ ಪುರುಷ ಹಾಗೂ 31 ವರ್ಷ ವಯಸ್ಸಿನ ಮಹಿಳೆಯ ಬ್ಯಾಂಕ್ ಖಾತೆಯಿಂದ ಹಣ ವರ್ಗಾಯಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಇಬ್ಬರೂ ದೂರು ನೀಡಿದ್ದು, ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಪಾನ್ ಕಾರ್ಡ್ ಹಾಗೂ ಕ್ರೆಡಿಟ್ ಕಾರ್ಡ್ ನವೀಕರಣ ಹೆಸರಿನಲ್ಲಿ ಆರೋಪಿಗಳು, ದೂರುದಾರರಿಗೆ ಸಂದೇಶ ಕಳುಹಿಸಿದ್ದರು. ಅದನ್ನು ನಂಬಿದ್ದ ದೂರುದಾರರು, ಸಂದೇಶಕ್ಕೆ ಪ್ರತಿಕ್ರಿಯೆ ನೀಡಿದ್ದರು.’

‘ನಿಮ್ಮ ಪಾನ್ ಕಾರ್ಡ್ ಹಾಗೂ ಕ್ರೆಡಿಟ್ ಕಾರ್ಡ್ ನವೀಕರಣ ಮಾಡಿಸಬೇಕು. ಇಲ್ಲದಿದ್ದರೆ, ಬ್ಯಾಂಕ್ ಖಾತೆ ನಿಷ್ಕ್ರಿಯವಾಗುತ್ತದೆ. ಖಾತೆಯಲ್ಲಿರುವ ಹಣ ಸಹ ಸಿಗುವುದಿಲ್ಲ’ ಎಂದಿದ್ದರು. ಹೆದರಿದ್ದ ದೂರುದಾರರು, ನವೀಕರಣ ಮಾಡಿಕೊಳ್ಳಲು ಒಪ್ಪಿದ್ದರು. ಅವಾಗಲೇ ಆರೋಪಿಗಳು, ವಾಟ್ಸ್‌ಆ್ಯಪ್‌ನಲ್ಲಿ ಆ್ಯಪ್‌ವೊಂದರ ಎಪಿಕೆ (ಆ್ಯಡ್ರಾಯ್ಡ್ ಅಪ್ಲಿಕೇಷನ್ ಪ್ಯಾಕೇಜಸ್) ಫೈಲ್ ಕಳುಹಿಸಿದ್ದರು. ಅದನ್ನು ದೂರುದಾರರು, ತಮ್ಮ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ಇದಾದ ನಂತರ ದೂರುದಾರರ ಖಾತೆಯಿಂದ ಹಣ ಕಡಿತವಾಗಿದೆ’ ಎಂದು ತಿಳಿಸಿದರು.

ಆ್ಯಪ್ ಬಗ್ಗೆ ಎಚ್ಚರ: ‘ಸೈಬರ್ ವಂಚಕರು ನಾನಾ ಕಾರಣ ಹೇಳಿ ಆ್ಯಪ್‌ವೊಂದರ ಎಪಿಕೆ ಕಳುಹಿಸಿ ವಂಚನೆ ಮಾಡುತ್ತಿದ್ದಾರೆ. ಜನರು ಹೆಚ್ಚು ಜಾಗೃತಿ ವಹಿಸಬೇಕು’ ಎಂದು ಸೈಬರ್ ಕ್ರೈಂ ಠಾಣೆ ಪೊಲೀಸರು ಹೇಳಿದರು.

‘ಕೆನರಾ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಹಾಗೂ ಇತರೆ ಬ್ಯಾಂಕ್‌ಗಳ ಹೆಸರಿನಲ್ಲಿ ಸಂದೇಶಗಳು ಬರುತ್ತಿವೆ. ಇಂಥ ಸಂದೇಶಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಅನುಮಾನಾಸ್ಪದ ಸಂದೇಶಗಳ ಬಗ್ಗೆ ಠಾಣೆಗೆ ಮಾಹಿತಿ ನೀಡಬೇಕು’ ಎಂದು ತಿಳಿಸಿದ್ದಾರೆ.

‘ಹವಾಮಾನ ವೈಪರೀತ್ಯದಿಂದ ಕೃಷಿಗೆ ಗಂಡಾಂತರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿನ ಜಾಗತಿಕ ಸವಾಲುಗಳಲ್ಲಿ ಹವಾಮಾನ ವೈಪರೀತ್ಯ ಪ್ರಮುಖವಾದುದು. ಬಿಸಿ ಏರಿಕೆ ಸಹಿತ ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಯಿಂದ ಕೃಷಿಗೆ ಗಂಡಾಂತರ ಉಂಟಾಗುತ್ತಿದೆ ಎಂದು ಜನವಿಜ್ಞಾನ ಚಳವಳಿಗಾರ ಸಿ.ಯತಿರಾಜು ಆತಂಕ ವ್ಯಕ್ತಪಡಿಸಿದರು.

‘ಏಂಗೆಲ್ಸ್–200’ ಮಾಲಿಕೆಯ ಅಂಗವಾಗಿ ‘ಪ್ರಕೃತಿಯ ಗತಿತಾರ್ಕಿಕತೆ’ ಕೃತಿಯನ್ನು ಭಾನುವಾರ ಬಿಡುಗಡೆ ಮಾಡಿದ ಅವರು ಮಾತನಾಡಿದರು.

‘ಕಾರ್ಪೊರೇಟ್ ಆಧಾರಿತ ಮತ್ತು ತಂತ್ರಜ್ಞಾನ ಆಧಾರಿತ ಕೃಷಿಗೆ ನಮ್ಮ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಆದರೆ, ಈ ನೀತಿಯನ್ನು ಅಳವಡಿಸಿಕೊಂಡಿರುವ ಪಾಶ್ಚಿಮಾತ್ಯ ದೇಶಗಳಲ್ಲಿ, ಕೃಷಿ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹವಾಮಾನ ವೈಪರೀತ್ಯವನ್ನು ಸಮಗ್ರವಾಗಿ ನೋಡಲು ಸಾಧ್ಯವಾಗದೇ ಇರುವುದೇ ಸಮಸ್ಯೆಗೆ ಕಾರಣವಾಗಿದೆ‘ ಎಂದು ವಿಶ್ಲೇಷಿಸಿದರು.

‘ತಾಂತ್ರಿಕ ಪ್ರಗತಿಯ ಹೆಸರಲ್ಲಿ ವಿಪರೀತಕ್ಕೆ ಹೋಗುತ್ತಿದ್ದೇವೆ. ಇಂದು ಹೊಸ ತಂತ್ರಜ್ಞಾನ ಎನ್ನುವುದು ನಾಳೆಗೇ ಅಪ್ರಸ್ತುತವಾಗುತ್ತಿದೆ. ಈ ಎಲ್ಲ ಸವಾಲುಗಳಿಗೆ ಪರಿಹಾರವನ್ನು ಏಂಗೆಲ್ಸ್ ನೀಡಿದ್ದಾರೆ. ಪರಿಸರವನ್ನು ಸಮಗ್ರ ದೃಷ್ಟಿಕೋನದಿಂದ ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಅದರ ಕನ್ನಡ ಅನುವಾದ ‘ಪ್ರಕೃತಿಯ ಗತಿತಾರ್ಕಿಕತೆ’ಯನ್ನು ಎಲ್ಲರೂ ಓದಿ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಲೇಖಕರಾದ ಬಿ.ಆರ್. ಮಂಜುನಾಥ್, ಎನ್.ಕೆ. ವಸಂತರಾಜ್, ಅನುವಾದಕ ಸುಬ್ರಮಣ್ಯ ಗುಡ್ಗೆ, ಹೋರಾಟಗಾರ್ತಿ ಕೆ.ಎಸ್. ವಿಮಲಾ ಮಾತನಾಡಿದರು. ರಾಜೇಂದ್ರ ಉಡುಪ, ಮಂಡ್ಯದ ಸುರೇಂದ್ರ, ಬಾಗೇಪಲ್ಲಿ ಡಾ.ಅನಿಲ್, ಖಗೋಳ ವಿಜ್ಞಾನ ಪ್ರಾಧ್ಯಾಪಕ ಸಬ್ಯಸಾಚಿ ಚಟರ್ಜಿ, ಖಗೋಳ ಭೌತಶಾಸ್ತ್ರಜ್ಞ ಪಾಲಹಳ್ಳಿ ವಿಶ್ವನಾಥ್, ಶಿಕ್ಷಣ ತಜ್ಞ ಜಿ. ರಾಮಕೃಷ್ಣ ಸಂವಾದದಲ್ಲಿ ಪಾಲ್ಗೊಂಡರು.

ವಾಹನಗಳ ನಿಲುಗಡೆಗೆ ನಿರ್ಬಂಧ

ಬೆಂಗಳೂರು: ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ಸೋಮವಾರ ನಗರಕ್ಕೆ ಭೇಟಿ ನೀಡುತ್ತಿದ್ದು ಅವರು ಸಂಚರಿಸುವ ಮಾರ್ಗಗಳಲ್ಲಿ ಎಲ್ಲ ಮಾದರಿಯ ವಾಹನಗಳ ನಿಲುಗಡೆ ನಿರ್ಬಂಧಿಸಲಾಗಿದೆ.

ಬೆಳಿಗ್ಗೆ 11.30ರಿಂದ ರಾತ್ರಿ 8 ಗಂಟೆ ತನಕ ಇನ್ಫೆಂಟ್ರಿ ರಸ್ತೆ, ಕಬ್ಬನ್‌ರಸ್ತೆ, ಮಹಾತ್ಮಗಾಂಧಿ ರಸ್ತೆ, ಹಳೇ ವಿಮಾನ ನಿಲ್ದಾಣ ರಸ್ತೆ, ವಿಂಡ್ ಟನಲ್ ರಸ್ತೆಗಳ ಬದಿಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಚಿತ್ರಾವಳಿ


ವರ್ತೂರು ಗ್ರಾಮದಿಂದ ವರ್ತೂರು ಕೋಡಿವರೆಗೆ 1.4 ಕಿ.ಮೀ ಉದ್ದದ ರಸ್ತೆ ವಿಸ್ತರಣೆ ಸಂಬಂಧ ಅಂಗಡಿ ಮಳಿಗೆಗಳು, ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯವನ್ನು ಬಿಬಿಎಂಪಿ ಭಾನುವಾರದಿಂದ ಆರಂಭಿಸಿತು
– ಪ್ರಜಾವಾಣಿ ಚಿತ್ರ



ಫೂಟ್ ಸೆಕ್ಯೂರ್ ಸಂಸ್ಥೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಧುಮೇಹ ಪೀಡಿತರ ಪಾದದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು
– ಪ್ರಜಾವಾಣಿ ಚಿತ್ರ


ಶ್ರೀರಾಮ ಕಲಾ ವೇದಿಕೆಯು ರಾಮಚಂದ್ರ ಯಾವಗಲ್ ಅವರ ಸ್ಮರಣಾರ್ಥ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ನಾದ ನಮನ’ ವಾರ್ಷಿಕ ಸಂಗೀತ ಉತ್ಸವದಲ್ಲಿ ತಬಲಾ ವಾದಕ ಓಂಕಾರ್ ಗುಲ್ವಾಡಿ ಅವರಿಗೆ ‘ಕಲಾಶೃಂಗ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ರಮಣಶ್ರೀ ಸಂಸ್ಥೆಯ ಎಸ್. ಷಡಕ್ಷರಿ, ತಬಲಾ ವಾದಕ ರವೀಂದ್ರ ಯಾವಗಲ್ ಮತ್ತು ರವಿ ದೇಸಾಯಿ ಪಾಲ್ಗೊಂಡಿದ್ದರು

‘ಪರಿಸರ ರಕ್ಷಣೆ ಎಲ್ಲರ ಹೊಣೆಯಾಗಲಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಪರಿಸರಕ್ಕೆ ಹಾನಿಯಾಗದಂತೆ ರಕ್ಷಿಸುವುದು ಹಾಗೂ ಸ್ವಚ್ಛ ಪರಿಸರವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವುದು ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿಯಾಗಿದೆ‘ ಎಂದು ಅದಮ್ಯ ಚೇತನ ಟ್ರಸ್ಟ್ ಅಧ್ಯಕ್ಷೆ ಹಾಗೂ ವ್ಯವಸ್ಥಾಪಕ ಟ್ರಸ್ಟಿ ತೇಜಸ್ವಿನಿ ಅನಂತಕುಮಾರ್ ಹೇಳಿದರು.

ಉಲ್ಲಾಳು ವಾರ್ಡ್‌ನ ಮಿನಿ-ಗಾಂಧಿನಗರದ ಬಳಿಯ ಹೊಸಕೆರೆ ಆವರಣದಲ್ಲಿ ಅದಮ್ಯ ಚೇತನ ಟ್ರಸ್ಟ್ ಹಾಗೂ ವಿವಿಧ ಶಾಲೆಗಳ ಮಕ್ಕಳ ಸಹಕಾರದೊಂದಿಗೆ 439ನೇ ಹಸಿರು ಭಾನುವಾರದ ಅಂಗವಾಗಿ ಸಸಿ ನೆಟ್ಟು ಅವರು ಮಾತನಾಡಿದರು.

ಅದಮ್ಯ ಚೇತನ ಟ್ರಸ್ಟ್ ವತಿಯಿಂದ ಪ್ರತಿ ಭಾನುವಾರ ‘ಹಸಿರು ಭಾನುವಾರ’ ಎಂಬ ಕಾರ್ಯಕ್ರಮದಡಿ, ನಗರದ ಹಲವು ಭಾಗಗಳಲ್ಲಿ ಸಸಿನೆಟ್ಟು ಪೋಷಿಸಲಾಗುತ್ತಿದೆ. ಪರಿಸರ ಸಂರಕ್ಷಣೆಯ ಮಹತ್ವದ ಬಗ್ಗೆ ಮಕ್ಕಳಲ್ಲಿ ಹಾಗೂ ಯುವಕರಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡಿಕೊಂಡು ಬರಲಾಗುತ್ತಿದೆ ಎಂದರು.


ಹೊಸಕೆರೆ ಆವರಣದಲ್ಲಿ ಅದಮ್ಯ ಚೇತನ ಟ್ರಸ್ಟ್ ಹಾಗೂ ವಿವಿಧ ಶಾಲೆಯ ಮಕ್ಕಳ ಸಹಕಾರದೊಂದಿಗೆ 439 ನೇ ಹಸಿರು ಭಾನುವಾರದಂದು ವಿವಿಧ ಜಾತಿಯ ಸಸಿಗಳನ್ನು ನೆಡಲಾಯಿತು. ತೇಜಸ್ವಿನಿ ಅನಂತ್ ಕುಮಾರ್, ಎನ್. ಕದರಪ್ಪ, ಜಯರಾಮ್, ನಾಗೇಶ್ ಹೆಗೆಡೆ, ಪ್ರಕಾಶ್ ಇದ್ದಾರೆ

ವಳಗೇರಹಳ್ಳಿ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಎನ್. ಕದರಪ್ಪ ಮಾತನಾಡಿ, ಪರಿಸರ ರಕ್ಷಣೆ ಕಡತಗಳಿಗೆ ಸೀಮಿತಗೊಂಡಿದೆ. ಮಾನವನ ಅಪರಿಮಿತ ದಾಹದಿಂದ ಮಲಿನ ಗೊಂಡಿರುವ ಪರಿಸರವನ್ನು ಸಂರಕ್ಷಿಸಿಕೊಳ್ಳುವ ಅವಕಾಶ ಈಗಲೂ ಇದೆ. ಪರಿಸರ ಸ್ನೇಹಿ ಕ್ರಮಗಳನ್ನು ಅನುಸರಿಸುವ ಮೂಲಕ ಸಮತೋಲಿತ ಪ್ರಕೃತಿಯನ್ನು ಕಾಪಾಡಿಕೊಳ್ಳಬೇಕಿದೆ ಎಂದರು.

ಆರ್.ಎಸ್.ಎಸ್ ಪರಿಸರ ಗತಿವಿಧಿ ವಿಭಾಗದ ಜಯರಾಮ್, ನಾಗೇಶ್ ಹೆಗೆಡೆ, ರಾಮಮೂರ್ತಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಅಂತರರಾಷ್ಟ್ರೀಯ ಸೂರ್ಯಮಿತ್ರ ಪ್ರಶಸ್ತಿ’ ಪ್ರದಾನ ಸಮಾರಂಭ: ಉದ್ಘಾಟನೆ: ನ್ಯಾ.ಪಿ.ಎಸ್. ದಿನೇಶ್ ಕುಮಾರ್, ಮುಖ್ಯ ಅತಿಥಿ: ಅಣ್ಣಾ ರಾಯ್, ಗೌರವ ಅತಿಥಿಗಳು: ಎಲಿನಾ ಕ್ಯಾಸೋಲೇರಿ, ಎಂ.ಎಸ್. ಶ್ರೀರಾಮ್, ಥಾಮಸ್ ಪುಲ್ಲೆಂಕೇವ್, ಅಧ್ಯಕ್ಷತೆ: ಹರೀಶ್ ಹಂದೆ, ಆಯೋಜನೆ: ಸೆಲ್ಕೊ ಫೌಂಡೇಶನ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಮಧ್ಯಾಹ್ನ 3.30


ನ್ಯಾ.ಪಿ.ಎಸ್. ದಿನೇಶ್ ಕುಮಾರ್

ಗೀತಾ ಜಿ.ಎಂ. ಅವರಿಂದ ಮೈಸೂರು ಸಾಂಪ್ರದಾಯಿಕ ಕಲಾ ಪ್ರದರ್ಶನ: ಉದ್ಘಾಟನೆ: ವಿ.ಜಿ.ಅಂದಾನಿ, ಎಂ.ಜೆ.ಕಮಾಲಾಕ್ಷಿ, ಗೌರವ ಅತಿಥಿ: ಮಹಾಂತೇಶ ಬೀಳಗಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 5

ವಸಂತೋತ್ಸವ ಸಾಂಸ್ಕೃತಿಕ ಹಬ್ಬ: ವಸಂತ ವಾದ್ಯಗೋಷ್ಠಿ: ತಿರುಮಲೆ ಶ್ರೀನಿವಾಸ್ ಮತ್ತು ತಂಡ, ವಸಂತ ಗಾಯನ: ಪವನ್ ರಂಗಾಚಾರ್ ಮತ್ತು ತಂಡ, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ಪ್ರಶಸ್ತಿ ಪ್ರದಾನ

ಫೆಡರೇಷನ್ ಆಫ್ ಕೊಂಕಣಿ ಕ್ಯಾಥೋಲಿಕ್ ಅಸೋಸಿಯೇಷನ್‌ನ 26ನೇ ವಾರ್ಷಿಕ ಒಕ್ಕೂಟ ದಿನದ ಅಂಗವಾಗಿ ಅರಮನೆ ಮೈದಾನದಲ್ಲಿ ಭಾನುವಾರ ಕೇಂದ್ರ ಮಾಜಿ ಸಚಿವೆ ಮಾರ್ಗರೇಟ್ ಆಳ್ವಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿಕಟಪೂರ್ವ ಅಧ್ಯಕ್ಷ ಸಿಲ್ವಿಯನ್ ನೊರೊನ್ಹಾ, ಅಧ್ಯಕ್ಷ ರಾಬರ್ಟ್ ಕುಟಿನ್ಹಾ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ , ಎಫ್‌ಎಂಸಿಐ ಕಂಕನಾಡಿಯ ನಿರ್ದೇಶಕ ಫಾದರ್ ಫೌಸ್ಟಿನ್ ಲ್ಯೂಕಾಸ್ ಲೋಬೊ, ಮಾಜಿ ಶಾಸಕ ಜೆ.ಆರ್.ಲೋಬೊ, ಪ್ರಧಾನ ಕಾರ್ಯದರ್ಶಿ ಲೀನಾ ಲೋಬೊ ಉಪಸ್ಥಿತರಿದ್ದರು
– ಪ್ರಜಾವಾಣಿ ಚಿತ್ರ

ಚನ್ನಗಿರಿ: 25 ಮಂದಿ ಬಂಧನ

ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ: ತನಿಖೆಗೆ 5 ತಂಡ ರಚನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿ, ವಾಹನಗಳನ್ನು ಜಖಂಗೊಳಿಸಿದ ಪ್ರಕರಣದಲ್ಲಿ ಪೊಲೀಸರು ಶನಿವಾರ ರಾತ್ರಿ 25 ಮಂದಿಯನ್ನು ಬಂಧಿಸಿದ್ದಾರೆ.

‘ಸಿ.ಸಿ.ಟಿವಿ ಕ್ಯಾಮೆರಾ ಹಾಗೂ ಮೊಬೈಲ್‌ಗಳಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಎಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಬಂಧಿತರು ಚನ್ನಗಿರಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳು. ಆರೋಪಿಗಳ ಬಂಧನಕ್ಕಾಗಿ ಒಟ್ಟು 5 ತಂಡಗಳನ್ನು ರಚಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಮಟ್ಕಾ ಜೂಜಾಟ ನಡೆಸುತ್ತಿದ್ದ ಆರೋಪದಡಿ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾಗಲೇ ಆದಿಲ್ ಎಂಬವರು ಮೃತಪಟ್ಟಿದ್ದರು. ಆದಿಲ್ ಅವರದ್ದು ಲಾಕಪ್ ಡೆತ್ ಎಂದು ಆರೋಪಿಸಿ ಉದ್ರಿಕ್ತರ ಗುಂಪು ಶುಕ್ರವಾರ ತಡರಾತ್ರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿತ್ತು. ಮುಂಜಾಗ್ರತಾ ಕ್ರಮವಾಗಿ ಚನ್ನಗಿರಿಯಲ್ಲಿ ಭಾನುವಾರವೂ ಪೊಲೀಸರ ಬಿಗಿ ಭದ್ರತೆ ಮುಂದುವರಿಸಲಾಗಿತ್ತು.

‘ಸಿಐಡಿಯಿಂದ ತನಿಖೆ’

‘ಆದಿಲ್ ಅವರ ಸಾವು ಹಾಗೂ ನಂತರ ನಡೆದ ಕಲ್ಲು ತೂರಾಟ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳಿಗೆ ಪ್ರಕರಣ ಹಸ್ತಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.

ಕಾನೂನು ಸುವ್ಯವಸ್ಥೆ ಹಾಳಾಗಲು ಬಿಡಲ್ಲ: ಪರಮೇಶ್ವರ



ಜಿ.ಪರಮೇಶ್ವರ

ಬೆಂಗಳೂರು: ‘ಗೂಂಡಾ ವರ್ತನೆ, ದಾದಾಗಿರಿ ಮಾಡಿ ಉಳಿದುಕೊಳ್ಳುತ್ತೇವೆ ಎಂದು ಯಾರಾದರೂ ಭಾವಿಸಿದ್ದರೆ, ಅದು ಸಾಧ್ಯವಿಲ್ಲ. ಇಂತಹ ಘಟನೆಗಳನ್ನು ಸಹಿಸುವುದಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಎಚ್ಚರಿಕೆ ನೀಡಿದರು.

ಅಲ್ಲದೇ, ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುವುದಕ್ಕೂ ಬಿಡುವುದಿಲ್ಲ ಎಂದು ಅವರು ಭಾನುವಾರ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಶಾಸಕರೊಬ್ಬರು ಠಾಣೆಯೊಳಗೆ ಹೋಗಿ ಗಲಾಟೆ ಮಾಡಿ, ಪೊಲೀಸರ ಮೇಲೆ ದಾಂಧಲೆ ಮಾಡಿದರೆ ಸಮಾಜದಲ್ಲಿ ಶಾಂತಿ ಹೇಗಿರಲು ಸಾಧ್ಯ? ಯಾರೂ ಸಹ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂದು ಪದೇ ಪದೇ ಹೇಳುತ್ತಿದ್ದೇನೆ. ಶಾಸಕರಾಗಲಿ, ಸಂಸದರಾಗಲಿ, ಇನ್ಯಾರೇ ಆಗಲಿ ಅವರನ್ನು ಬಿಡುವ ಪ್ರಶ್ನೆ ಇಲ್ಲ. ಅವರ ವಿರುದ್ಧ ಕ್ರಮ ಜರುಗಿಸುತ್ತೇವೆ’ ಎಂದು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಪ್ರಕರಣವನ್ನು ಪ್ರಸ್ತಾಪಿಸಿ ಹೇಳಿದರು.

‘ದಾವಣಗೆರೆ ಜಿಲ್ಲೆ ಚನ್ನಗಿರಿಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ತೋರಿದ ಇನ್‌ಸ್ಪೆಕ್ಟರ್, ಪಿಎಸ್‌ಐನನ್ನು ಅಮಾನತುಗೊಳಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ’ ಎಂದರು.

ಪೊಲೀಸರು ಹಣಕ್ಕಾಗಿ ಪೀಡಿಸುತ್ತಿದ್ದರು ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, ‘ತನಿಖೆಯಲ್ಲಿ ಎಲ್ಲವೂ ಗೊತ್ತಾಗುತ್ತದೆ. ಅಧಿಕಾರಿಗಳು ಈ ರೀತಿ ಭಾಗಿಯಾಗಿರುವುದು ಕಂಡು ಬಂದರೆ, ಅಂತಹವರನ್ನು ಸೇವೆಯಿಂದಲೇ ವಜಾಗೊಳಿಸಲಾಗುವುದು’ ಎಂದರು.

ಕರ್ನಾಟಕ ಬಿಹಾರವಾಗುತ್ತಿದೆ ಎಂದು ಬಿ.ವೈ. ವಿಜಯೇಂದ್ರ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳು ಹೇಗಿದ್ದಾವೆ ಎಂಬುದನ್ನು ನೋಡಿಕೊಳ್ಳಲಿ. ಗುಜರಾತ್‌ನಲ್ಲಿ ಬೆಂಕಿ ಅವಘಡದಿಂದ 27 ಜನ ಸತ್ತಿದ್ದಾರೆ. ಅದಕ್ಕೆ ಯಾರು ಹೊಣೆ? ಅಲ್ಲಿನ ಮುಖ್ಯಮಂತ್ರಿ, ಗೃಹ ಸಚಿವರು ರಾಜೀನಾಮೆ ಕೊಡಬೇಕಲ್ಲ? ಹೇಳೋದು ಸುಲಭ’ ಎಂದು ಅವರು ಕಿಡಿಕಾರಿದರು.

‘ಗೃಹ ಸಚಿವರು ಯಾರೆಂಬುದೇ ಗೊತ್ತಾಗುತ್ತಿಲ್ಲ’



ಆರ್. ಅಶೋಕ

ಬೆಂಗಳೂರು: ‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದರೆ ಗೃಹ ಸಚಿವರು ಯಾರು ಎನ್ನುವುದೇ ಗೊತ್ತಾಗುತ್ತಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಜೆಡಿಎಸ್ ಕಚೇರಿಯಲ್ಲಿ ನಡೆದ ಬಿಜೆಪಿ–ಜೆಡಿಎಸ್ ಜಂಟಿ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ‘ಹೆಣ್ಣು ಮಕ್ಕಳು ಶಾಲೆಗೆ ಹೋದರೆ, ಮಹಿಳೆಯರು ಕೆಲಸಕ್ಕೆ ಹೋದರೆ ಮನೆಗೆ ವಾಪಸ್ ಬರುವ ಗ್ಯಾರಂಟಿಯೇ ಇಲ್ಲ’ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

‘ಕಾಂಗ್ರೆಸ್‌ನವರು ಕುಮಾರಸ್ವಾಮಿ ಅವರ ಬೆನ್ನಿಗೆ ಚೂರಿ ಹಾಕಿದರು. ಕೆಲಸ ಆಗಬೇಕಾದರೆ ಕೈ ಎತ್ತು. ಕೆಲಸ ಆದ ಮೇಲೆ ಚೂರಿ ಹಾಕು ಎಂಬುದು ಕಾಂಗ್ರೆಸ್ ನೀತಿ’ ಎಂದರು.

‘ಕಾಂಗ್ರೆಸ್ ಸರ್ಕಾರ ಎಲ್ಲ ಕಡೆ ಲೂಟಿ ಮಾಡುತ್ತಿದೆ. ಈಗ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಮಾರಾಟಕ್ಕೆ ಇಟ್ಟಿದೆ. ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲ. ಪಕ್ಷದ ವರಿಷ್ಠರಿಗೆ ಕಪ್ಪ ಕೊಡಲು ಇಲ್ಲಿ ಲೂಟಿ ಮಾಡಲು ಹೊರಟಿದ್ದಾರೆ’ ಎಂದು ಟೀಕಿಸಿದರು.

ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ‘ರಾಜ್ಯದಲ್ಲಿ ಕಾನೂನು– ಸುವ್ಯವಸ್ಥೆ ಕುಸಿದಿದೆ. ಈ ಸರ್ಕಾರ. ಕೇವಲ ಒಂದು ಸಮುದಾಯವನ್ನು ತುಷ್ಟೀಕರಣ ಮಾಡುತ್ತಿದೆ. ಕೊಲೆ, ಸುಲಿಗೆ, ಅತ್ಯಾಚಾರದಂತಹ ಘಟನೆಗಳು ನಿರಂತರವಾಗಿ ನಡೆಯುತ್ತಿದ್ದರೂ ಅದರ ಬಗ್ಗೆ ಮಾತನಾಡುತ್ತಿಲ್ಲ. ಕಾಂಗ್ರೆಸ್ ನವರು ಭಂಡತನದವರು, ಅವರಿಗೆ ಸೂಕ್ಷ್ಮತೆಯೇ ಇಲ್ಲ’ ಎಂದರು.

‘ಕೈ’ ಅಭ್ಯರ್ಥಿ ಶ್ರೇಯಸ್ ನಿವಾಸಕ್ಕೆ ಎಸ್ಐಟಿ ಅಧಿಕಾರಿಗಳ ಭೇಟಿ

ಹೊಳೆನರಸೀಪುರ (ಹಾಸನ ಜಿಲ್ಲೆ): ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶ್ರೇಯಸ್ ಎಂ. ಪಟೇಲ್ ಅವರ ನಿವಾಸಕ್ಕೆ ಶುಕ್ರವಾರ ಎಸ್‌ಐಟಿ ತಂಡ ಭೇಟಿ ನೀಡಿದೆ.

ವಕೀಲ ದೇವರಾಜೇಗೌಡ ಅವರು ಸುದ್ದಿಗೋಷ್ಠಿ ನಡೆಸಿ, ‘ಶ್ರೇಯಸ್ ಎಂ. ಪಟೇಲ್ ಅವರು ಕಾರ್ತಿಕ್‌ನನ್ನು ಹಾಸನದ ಹೋಟೆಲ್‌ನಲ್ಲಿ ಭೇಟಿ ಮಾಡಿದ್ದರು’ ಎಂದು ಆರೋಪಿಸಿದ್ದರು. ಈ ಆರೋಪವನ್ನು ಶ್ರೇಯಸ್ ಪಟೇಲ್ ನಿರಾಕರಿಸಿದ್ದರು. ಈ ಮಧ್ಯೆ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೇಯಸ್ ಪಟೇಲ್ ಅವರ ನಿವಾಸಕ್ಕೆ ಎಸ್‌ಐಟಿ ಅಧಿಕಾರಿಗಳು ಭೇಟಿ ನೀಡಿದ್ದರು ಎಂದು ತಿಳಿದುಬಂದಿದೆ. ಪಟ್ಟಣದ ಕಾಂಗ್ರೆಸ್ ಮುಖಂಡರೊಬ್ಬರು ತಲೆಮರೆಸಿಕೊಂಡಿದ್ದು, ಈ ಬಗ್ಗೆ ಶ್ರೇಯಸ್ ಅವರ ವಿಚಾರಣೆ ನಡೆಸಿರಬಹುದು ಎನ್ನಲಾಗಿದೆ.

ಗಾಳಿಯಲ್ಲಿ ಗುಂಡು ಹೊಡೆದಂತೆ ಮಾತನಾಡಬಾರದು

ಬೆಂಗಳೂರು: ಪೆನ್‌ಡ್ರೈವ್ ಪ್ರಕರಣದಲ್ಲಿ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಗಾಳಿಯಲ್ಲಿ ಗುಂಡು ಹೊಡೆದ ಹಾಗೆ, ಯಾರದ್ದೋ ಹೆಸರು ಹೇಳುವ ಅಗತ್ಯವಿಲ್ಲ. ತನಿಖೆ ಆಗುವ ಮುಂಚೆಯೇ ಹೇಳಿಕೆಗಳನ್ನು ನೀಡಿದರೆ ತೊಂದರೆ ಆಗುತ್ತದೆ ಎಂದು ಪರಮೇಶ್ವರ ಅವರು ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ನಿಜವಾದ ಆರೋಪಿಗೆ ಶಿಕ್ಷೆ ಆಗಬೇಕು ಎಂಬ ನಿಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. ನಿಜವಾದ ಆರೋಪಿ ಯಾರು? ಈ ಪ್ರಕರಣದಲ್ಲಿ ಪ್ರಜ್ವಲ್ ಪಾತ್ರ ಏನು ಎಂಬುದಕ್ಕಾಗಿಯೇ ತನಿಖೆ ನಡೆಸಬೇಕು ಎಂಬ ಕಾರಣಕ್ಕಾಗಿಯೇ ಎಸ್‌ಐಟಿ ರಚಿಸಲಾಗಿದೆ’ ಎಂದರು.

ಪ್ರಜ್ವಲ್ ಪಾಸ್‌ಪೋರ್ಟ್ ರದ್ದುಪಡಿಸುವಂತೆ ಮೇ 1ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆ ಪತ್ರ ಎಲ್ಲಿ ಹೋಯಿತು? ಮುಖ್ಯಮಂತ್ರಿಯವರ ಪತ್ರ ಪ್ರಧಾನಿ ಕಚೇರಿಗೆ ಹೋಗುತ್ತದೆ ಎಂದಾದರೆ ಅದಕ್ಕೆ ಗೌರವ ಸಿಗಬೇಕಲ್ಲವೆ? ಕರ್ನಾಟಕ ಮುಖ್ಯಮಂತ್ರಿ ಈಗ ಪತ್ರ ಬರೆದಿದ್ದಾರೆ ಎಂದು ವಿದೇಶಾಂಗ ಸಚಿವರು ಹೇಳಿರುವುದು ಸರಿಯಲ್ಲ ಎಂದರು.

‘ರಾಯಣ್ಣ ಬ್ರಿಗೇಡ್ ಫಲಿತಾಂಶದ ನಂತರ ತೀರ್ಮಾನ’

ಬಾಗಲಕೋಟೆ: ಹಿಂದುಳಿದ, ದಲಿತರು ಸೇರಿದಂತೆ ವಿವಿಧ ಸಮಾಜಗಳ ಸಾಮಾಜಿಕ ನ್ಯಾಯಕ್ಕಾಗಿ ರಾಯಣ್ಣ ಬ್ರಿಗೇಡ್ ಪುನರ್ ಸಂಘಟನೆ ಮಾಡಲು ಹಲವರು ಸಲಹೆ ನೀಡಿದ್ದಾರೆ. ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಈ ಬಗ್ಗೆ ನಿರ್ಧರಿಸಲಾಗುವುದು ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನೊಬ್ಬನೇ ತೀರ್ಮಾನ ತಗೆದುಕೊಳ್ಳುವುದಿಲ್ಲ. ಚುನಾವಣೆ ನಿಲ್ಲುವ ನಿರ್ಧಾರವನ್ನೂ ನಾನೊಬ್ಬನೇ ತೆಗೆದುಕೊಂಡದ್ದಲ್ಲ. ಫಲಿತಾಂಶ ಬಂದ ಮರು ದಿನವೇ ತೀರ್ಮಾನ ಆಗಲ್ಲ. ರಾಜ್ಯದಲ್ಲಿನ ಎಲ್ಲ ಹಿತೈಷಿಗಳನ್ನು ಕರೆದು ಚರ್ಚೆ ಮಾಡುತ್ತೇನೆ. ಅಪ್ಪ, ಮಕ್ಕಳಿಂದ ಬಿಜೆಪಿ ಮುಕ್ತವಾಗಬೇಕು. ಹಿಂದುತ್ವದ ಪಕ್ಷವಾಗಿ ಉಳಿಯಬೇಕು ಎನ್ನುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ’ ಎಂದು ಹೇಳಿದರು.

ಅಪಘಾತ: ಬಾಲಕ ಸೇರಿ 6 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಹಾಸನ: ಹೊರವಲಯದ ಇಚನಹಳ್ಳಿ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬಾಲಕ ಸೇರಿದಂತೆ ಆರು ಮಂದಿ ಸ್ಥಳದಲ್ಲಿಯೇ ಮೃತಪಟ್ಟರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಾರಳ್ಳಿಯ ನಾರಾಯಣ ಸ್ವಾಮಿ(50), ಸುನಂದಾ (40), ಹಂದರಹಳ್ಳಿ ಗ್ರಾಮದ ರವಿಕುಮಾರ್ (30), ನೇತ್ರಾ (25) ದಂಪತಿ ಹಾಗೂ ಅವರ ಪುತ್ರ ಚೇತನ್ (7) ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೊಂಡೇನಹಳ್ಳಿಯ ನಿವಾಸಿ, ಚಾಲಕ ಗುಣಶೇಖರ್ (28) ಮೃತಪಟ್ಟವರು.

ಭಾನುವಾರ ಬೆಳಗಿನ ಜಾವ 5.30ರ ಸುಮಾರಿಗೆ ಮಂಗಳೂರಿನಿಂದ ಬರುತ್ತಿದ್ದ ಇಟಿಯೋಸ್ ಕಾರು, ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿದೆ. ನಂತರ ವಿಭಜಕವನ್ನು ಹಾರಿ ಎದುರಿನಿಂದ ಬರುತ್ತಿದ್ದ ಕಂಟೇನರ್ ಲಾರಿಗೆ ರಭಸವಾಗಿ ಡಿಕ್ಕಿ ಹೊಡೆದಿದೆ. ಅದರ ರಭಸಕ್ಕೆ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದ್ದು, ಮೃತದೇಹಗಳನ್ನು ಹೊರತೆಗೆಯಲು ಪೊಲೀಸರು ಹರಸಾಹಸ ಮಾಡಬೇಕಾಯಿತು.

ಅಪಘಾತದಲ್ಲಿ ಮೃತಪಟ್ಟಿರುವ ನಾರಾಯಣ ಸ್ವಾಮಿ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದು, ಅವರಿಗೆ ಔಷಧಿ ತೆಗೆದುಕೊಂಡು ಬರಲು ಕುಟುಂಬಸ್ಥರು ಮಂಗಳೂರಿಗೆ ತೆರಳಿದ್ದರು. ಅಲ್ಲಿಂದ ಮರಳಿ ಊರಿಗೆ ಬರುವ ವೇಳೆ ಈ ಅಪಘಾತ ಸಂಭವಿಸಿದೆ ಎಂದು ತಿಳಿದುಬಂದಿದೆ.

‘ಚಾಲಕ ನಿದ್ದೆಯ ಮಂಪರಿನಲ್ಲಿ ಇದ್ದುದೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು. ನಂತರ ಕ್ರೇನ್ ಮೂಲಕ ಕಾರನ್ನು ಸ್ಥಳದಿಂದ ತೆರವುಗೊಳಿಸಲಾಯಿತು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಹಾಸನದ ಹಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು.

ಲೈಂಗಿಕ ದೌರ್ಜನ್ಯ: ಬಾಲಕಿ ನೇಣಿಗೆ ಶರಣು

ಚಳ್ಳಕೆರೆ (ಚಿತ್ರದುರ್ಗ): ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ ತಾಲ್ಲೂಕಿನ ಗ್ರಾಮವೊಂದರ ಬಾಲಕಿ (17) ಮನನೊಂದು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಗ್ರಾಮದ ಯುವಕನೊಬ್ಬ, ಬಾಲಕಿಯನ್ನು ಮದುವೆಯಾಗುವುದಾಗಿ ನಂಬಿಸಿ, ಬಲವಂತವಾಗಿ ಕರೆದೊಯ್ದು ದೈಹಿಕ ಸಂಪರ್ಕ ಬೆಳೆಸಿದ್ದ. ಇದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಬಾಲಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಾಲಕಿಯ ತಾಯಿ ಚಳ್ಳಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದೇವೆ’ ಎಂದು ಪಿಎಸ್‌ಐ ಸತೀಶ್‌ನಾಯ್ಕ ತಿಳಿಸಿದ್ದಾರೆ.

ಪ್ರೇಮ ಪ್ರಕರಣ: ಯುವಕನಿಗೆ ಬೆಂಕಿ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ಪಟ್ಟಣದಲ್ಲಿ ಭಾನುವಾರ ಮಧ್ಯಾಹ್ನ ಯುವಕನೊಬ್ಬನಿಗೆ ಬೆಂಕಿ ಹೊತ್ತಿಕೊಂಡು ಗಂಭೀರವಾಗಿ ಗಾಯವಾಗಿದ್ದು, ಆತನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಘಟನೆ ವಿವರ: ಪ್ರೇಮ ಪ್ರಕರಣವೊಂದರಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಢವಳಗಿ ಗ್ರಾಮದ ರಾಹುಲ್ ರಾಮನಗೌಡ ಬಿರಾದಾರ ಎಂಬವರನ್ನು ಹುಡುಗಿಯ ಮನೆಯವರು ಮನೆಗೆ ಕರೆಯಿಸಿಕೊಂಡು ಆತನ ಮೇಲೆ ಪೆಟ್ರೋಲ್ ಸುರುವಿ ಬೆಂಕಿ ಹಚ್ಚಿ ಕೊಲೆಗೆ ಯತ್ನಿಸಿದ್ದಾರೆ ಎಂದು ಯುವಕನ ತಂದೆ ಆರೋಪಿಸಿದ್ದಾರೆ.

‘ಯುವಕನೇ ಪೆಟ್ರೋಲ್ ಅನ್ನು ನಮ್ಮ ಮನೆಗೆ ತಂದು, ತನ್ನ ಮೈಮೇಲೆ ಸುರುವಿಕೊಂಡಿದ್ದಾನೆ. ಅಲ್ಲದೇ, ನಮ್ಮ ಮನೆಯವರ ಮೇಲೂ ಪೆಟ್ರೋಲ್ ಎರಚಿ ಬೆಂಕಿ ಹಚ್ಚಲು ಪ್ರಯತ್ನಿಸಿದ್ದಾನೆ. ಆತನ ದಾಳಿಯಿಂದ ಮನೆಯವರಿಗೂ ಸುಟ್ಟ ಗಾಯಗಳಾಗಿವೆ’ ಎಂದು ಹುಡುಗಿ ಮನೆಯವರು ಆರೋಪಿಸಿದ್ದಾರೆ.

ನಿವೃತ್ತ ನೌಕರರು, ಸಮಾನ ಮನಸ್ಕರಿಂದ ದೇಣಿಗೆ ಸಂಗ್ರಹ

ಉದ್ಯಾನ ರೂಪಿಸಿ ಒತ್ತುವರಿ ತಡೆದರು

● ಎಂ.ಜಿ.ನಾಯ್ಕ

ಕುಮಟಾ (ಉತ್ತರ ಕನ್ನಡ ಜಿಲ್ಲೆ): ಅರಣ್ಯ ಭೂಮಿ ಒತ್ತುವರಿ ತಡೆಯುವ ನಿಟ್ಟಿನಲ್ಲಿ ಪಟ್ಟಣದ ಸಿದ್ಧನಬಾವಿ ವಾರ್ಡ್ ವ್ಯಾಪ್ತಿಯ ಸಮಾನ ಮನಸ್ಕರ ತಂಡವು ರೂಪಿಸಿದ ಉದ್ಯಾನ ಹಚ್ಚಹಸಿರಿನಿಂದ ನಳನಳಿಸುತ್ತಿದೆ.

ಪಟ್ಟಣದ ಅಂಚಿನಲ್ಲಿರುವ ಸಿದ್ದನಬಾವಿ ವಾರ್ಡ್ ಪ್ರದೇಶಕ್ಕೆ ಹೊಂದಿಕೊಂಡು ಅರಣ್ಯವಿದೆ. ಅರಣ್ಯದ ಕೆಲವು ಭಾಗ ಒತ್ತುವರಿಯಾಗಿತ್ತು. ಇನ್ನೂ ಖಾಲಿ ಇದ್ದ ಜಾಗದಲ್ಲಿ ಒತ್ತುವರಿ ಆಗಬಹುದು ಎಂಬ ಆತಂಕದಲ್ಲಿದ್ದ ಸ್ಥಳೀಯ ನಿವಾಸಿಗಳಾದ ಕೆಲ ನಿವೃತ್ತ ಸರ್ಕಾರಿ ನೌಕರರು, ಸಾರ್ವಜನಿಕರು ಚರ್ಚಿಸಿ ಉದ್ಯಾನ ರೂಪಿಸಲು ನಿರ್ಧರಿಸಿದ್ದರು.

‘ಸುಮಾರು 10 ಗುಂಟೆ ಜಾಗದಲ್ಲಿ ಕಳೆದ ವರ್ಷದ ಜುಲೈ ತಿಂಗಳಿನಲ್ಲಿ ಹಣ್ಣು, ಔಷಧಿ, ಕಾಡಿನ ಜಾತಿ ಸಸಿಗಳನ್ನು ನೆಡಲಾಗಿತ್ತು. ಜಾನುವಾರು ತಿನ್ನದಂತೆ ಸುತ್ತಲೂ ತಂತಿಬೇಲಿ ಅಳವಡಿಸಿದ್ದೆವು. ನೂರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸಿ ಅವುಗಳ ಬುಡದಲ್ಲಿ ಫಲಕವನ್ನೂ ಅಳವಡಿಸಿದ್ದೆವು. ಗಿಡಗಳು ಆಳೆತ್ತರಕ್ಕೆ ಬೆಳೆದು ನಿಂತಿವೆ. ಈ ಭಾಗ ಒತ್ತುವರಿದಾರರಿಗೆ ಸಿಲುಕದೆ ಸುರಕ್ಷಿತವಾಗಿಸಿದ ನೆಮ್ಮದಿ ಸಿಕ್ಕಿದೆ’ ಎನ್ನುತ್ತಾರೆ ನಿವೃತ್ತ ಕೃಷಿ ಅಧಿಕಾರಿ ಎಸ್.ವಿ.ಹೆಗಡೆ.



ಸಿದ್ದನಬಾವಿ ಬಳಿ ಅರಣ್ಯ ಇಲಾಖೆ ಜಾಗದಲ್ಲಿ ಸ್ಥಳೀಯರು ಬೆಳೆಸಿದ ಗಿಡಗಳು

‘ಉದ್ಯಾನಕ್ಕೆ ‘ಸಿದ್ಧನವನ’ ಎಂದು ಹೆಸರಿಟ್ಟಿದ್ದೇವೆ. ಉದ್ಯಾನದಲ್ಲಿನ ಗಿಡಗಳಿಗೆ ಪ್ರತಿ ಎರಡು ದಿನಕ್ಕೊಮ್ಮೆ ಟ್ಯಾಂಕರ್ ಮೂಲಕ ನೀರು ಪೂರೈಸುವ ಕೆಲಸ ಮಾಡಲಾಗುತ್ತಿದೆ. ಕಾಲಕಾಲಕ್ಕೆ ಗೊಬ್ಬರ ನೀಡುವುದು ಸೇರಿದಂತೆ ಸಸಿಗಳ ಆರೈಕೆ, ಉದ್ಯಾನದ ತಂತಿಬೇಲಿ ರಕ್ಷಣೆ ಸೇರಿದಂತೆ ನಿರ್ವಹಣೆ ಸಲುವಾಗಿ ವಾರ್ಡ್ ವ್ಯಾಪ್ತಿಯ ಸುಮಾರು 72 ಜನರಿಂದ ತಲಾ ₹2 ಸಾವಿರದಂತೆ ದೇಣಿಗೆ ಸಂಗ್ರಹಿಸಿದ್ದೇವೆ. ಈ ಮೊತ್ತ ಬಳಸಿ ಅರಣ್ಯದ ಮಾದರಿಯ ಉದ್ಯಾನ ಬೆಳೆಸುತ್ತಿದ್ದೇವೆ’ ಎಂದು ವಿವರಿಸಿದರು.

‘ಕೆಲವರು ತಮ್ಮ ಅಥವಾ ಮಕ್ಕಳ ಜನ್ಮದಿನ, ವಿವಾಹ ವಾರ್ಷಿಕೋತ್ಸವದ ನೆನಪಿಗೆ ಗಿಡಗಳಿಗೆ ಉಚಿತವಾಗಿ ನೀರು ಸರಬರಾಜು ಮಾಡಿದ್ದಾರೆ’ ಎಂದು ಸ್ಥಳೀಯರಾದ ಆರ್.ಎಚ್.ದೇಶಭಂಡಾರಿ, ಎನ್.ಜಿ.ಭಟ್ಟ, ಬಿ.ಜಿ.ಗುನಿ, ಖೈರನ್ ಮಾಸ್ತರ ಮಾಹಿತಿ ನೀಡಿದರು.

ಸ್ಥಳೀಯರು ಗಿಡ ಬೆಳೆಸಿದ ಜಾಗದ ಅಕ್ಕಪಕ್ಕದ ಕಾಡಿನಲ್ಲಿ ನೈಸರ್ಗಿಕ ಕಾಡು ಬೆಳೆಸಲು ಸ್ಥಳೀಯರಿಗೆ ಅವಕಾಶ ನೀಡಲಾಗುವುದು

ಎಸ್.ಟಿ.ಪಟಗಾರ

ಕುಮಟಾ ಆರ್.ಎಫ್.ಒ

ರಾಜ್‌ಕೋಟ್: ಟಿಆರ್‌ಪಿ ಗೇಮ್ ಜೋನ್‌ನಲ್ಲಿ ನಡೆದಿದ್ದ ದುರಂತ

6 ಮಂದಿ ವಿರುದ್ಧ ಎಫ್‌ಐಆರ್

ರಾಜ್‌ಕೋಟ್ (ಪಿಟಿಐ): ಗುಜರಾತ್‌ನ ರಾಜ್‌ಕೋಟ್ ನಗರದ ಟಿಆರ್‌ಪಿ ಗೇಮ್ ಜೋನ್‌ನಲ್ಲಿ ಶನಿವಾರ ನಡೆದ ಅಗ್ನಿ ಅನಾಹುತಕ್ಕೆ ಸಂಬಂಧಿಸಿದಂತೆ, ಆರು ಮಂದಿ ಪಾಲುದಾರರ ವಿರುದ್ಧ ಪೊಲೀಸರು ಭಾನುವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಅವರ ವಿರುದ್ಧ 'ಕೊಲ್ಲುವ ಉದ್ದೇಶ ಇಲ್ಲದಿದ್ದರೂ, ಜನರ ಸಾವಿಗೆ ಕಾರಣರಾದ ಆರೋಪ' ಹೊರಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

ಈ ಮನರಂಜನಾ ಕೇಂದ್ರಕ್ಕೆ ಸ್ಥಳೀಯ ಪೊಲೀಸರು 2023ರ ನವೆಂಬರ್‌ನಲ್ಲಿ ಅನುಮತಿ ನೀಡಿದ್ದರು. ಇದನ್ನು ಜನವರಿ 1ರಂದು ನವೀಕರಿಸಲಾಗಿತ್ತು ಎಂದು ರಾಜ್‌ಕೋಟ್ ಪೊಲೀಸ್ ಆಯುಕ್ತ ರಾಜು ಭಾರ್ಗವ ತಿಳಿಸಿದ್ದಾರೆ.

'ಈ ಕೇಂದ್ರವು ರಸ್ತೆಗಳು ಮತ್ತು ಕಟ್ಟಡಗಳ ಇಲಾಖೆಯಿಂದ ಅನುಮತಿ ಪಡೆದಿತ್ತು. ಅಗ್ನಿ ಸುರಕ್ಷತೆಯ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆಯಲು ಕೇಂದ್ರವು ತನ್ನಲ್ಲಿ ಅಗತ್ಯ ಸುರಕ್ಷತಾ ಉಪಕರಣಗಳು ಇವೆ ಎಂಬುದಕ್ಕೆ ಪುರಾವೆಗಳನ್ನು ಸಲ್ಲಿಸಿತ್ತು. ಆದರೆ ಈ ಪ್ರಕ್ರಿಯೆ ಪೂರ್ಣಗೊಂಡಿರಲಿಲ್ಲ' ಎಂದು ಅವರು ಹೇಳಿದ್ದಾರೆ.

ಅಗ್ನಿ ಅವಘಡಗಳ ಸಂದರ್ಭದಲ್ಲಿ ಬಳಕೆಯಾಗುವ ಸುರಕ್ಷತಾ ಉಪಕರಣಗಳು ಈ ಕೇಂದ್ರದಲ್ಲಿ ಇದ್ದವು. ಆದರೆ ಕೇಂದ್ರವು ಬೆಂಕಿ ಹರಡುವುದನ್ನು ತಡೆಯಲು ಕೈಗೊಂಡ ಕ್ರಮಗಳು ಸಮರ್ಪಕವಾಗಿರದೆ ಇದ್ದುದು ದುರಂತಕ್ಕೆ ಕಾರಣವಾಯಿತು ಎಂದು ಅವರು ತಿಳಿಸಿದ್ದಾರೆ.



ಅಗ್ನಿ ಅನಾಹುತ ನಡೆದ ರಾಜ್‌ಕೋಟ್‌ನ ಮನರಂಜನಾ ಕೇಂದ್ರದಲ್ಲಿ ಅವಶೇಷಗಳನ್ನು ಭಾನುವಾರ ತೆರವುಗೊಳಿಸಲಾಯಿತು – ಪಿಟಿಐ ಚಿತ್ರ

ಪ್ರಧಾನಿಯಿಂದ ಪರಿಹಾರ

ಅಗ್ನಿ ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ತಲಾ ₹2 ಲಕ್ಷ ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಗಾಯಗೊಂಡವರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹50 ಸಾವಿರ ಪರಿಹಾರ ನೀಡಲಾಗುತ್ತದೆ.

ಪ್ರಕರಣದ ಪ್ರಮುಖ ಬೆಳವಣಿಗೆಗಳು

- 'ಟಿಆರ್‌ಪಿ ಜೇಮ್ ಜೋನ್' ಅನ್ನು ನಡೆಸುತ್ತಿದ್ದ ರೇಸ್‌ವೇ ಎಂಟರ್‌ಪ್ರೈಸ್‌ನ ಪಾಲುದಾರ ಯುವರಾಜಸಿಂಹ ಸೋಲಂಕಿ, ಗೇಮ್ ಜೋನ್‌ನ ಮನರಂಜನಾ ವಿಭಾಗದ ವ್ಯವಸ್ಥಾಪಕ ನಿತಿನ್ ಜೈನ್ ಬಂಧಿತರು ಎಂದು ಪೊಲೀಸರು ಹೇಳಿದ್ದಾರೆ.
- ಧವಲ್ ಕಾರ್ಪೊರೇಷನ್‌ನ ಮಾಲೀಕ ಧವಲ್ ಥಕ್ಕರ್, ರೇಸ್‌ವೇ ಎಂಟರ್‌ಪ್ರೈಸ್‌ನ ಪಾಲುದಾರರಾದ ಅಶೋಕಸಿಂಹ ಜಡೇಜಾ, ಕಿರೀಟಸಿಂಹ ಜಡೇಜಾ, ಪ್ರಕಾಶ್‌ಚಂದ್ ಹಿರಾನ್, ಯುವರಾಜಸಿಂಹ ಸೋಲಂಕಿ, ರಾಹುಲ್ ರಾಥೋಡ್ ಅವರ ವಿರುದ್ಧ ಭಾರತೀಯ ದಂಡಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಎಫ್‌ಐಆರ್ ದಾಖಲಾಗಿದೆ.
- ತಲೆಮರೆಸಿಕೊಂಡಿರುವ ಆರೋಪಿಗಳ ಬಂಧನಕ್ಕೆ ಕ್ರೈಮ್ ಬ್ರ್ಯಾಂಚ್‌ನ ನಾಲ್ಕು ತಂಡ ರಚಿಸಲಾಗಿದೆ.
- ಪ್ರಕರಣದ ತನಿಖೆಯನ್ನು ಕ್ರೈಮ್ ಬ್ರ್ಯಾಂಚ್ ಮತ್ತು ರಾಜ್‌ಕೋಟ್ ಪೊಲೀಸರ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಲಾಗಿದೆ.
- ಅಲ್ಲದೆ, ಗುಜರಾತ್ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ತ್ರಿವೇದಿ ನೇತೃತ್ವದಲ್ಲಿ ಐವರು ಸದಸ್ಯರ ಇನ್ನೊಂದು ಎಸ್‌ಐಟಿ ರಚಿಸಲು ಸೂಚಿಸಿದೆ.
- ತ್ವರಿತ ತನಿಖೆಗೆ ನೆರವಾಗಲು ಗಾಂಧಿನಗರದಿಂದ ವಿಧಿವಿಜ್ಞಾನ ಪ್ರಯೋಗಾಲಯದ ತಂಡ ಬಂದಿದೆ.

ಆರೋಪಿಗಳು 50 ಮೀಟರ್ ಅಗಲ, 60 ಮೀಟರ್ ಎತ್ತರದ ಕಟ್ಟಡವನ್ನು ಲೋಹದ ತಗಡು ಬಳಸಿ ನಿರ್ಮಿಸಿದ್ದರು. ಇಲ್ಲಿ ಈ ಗೇಮ್ ಜೋನ್‌ನ ಚಟುವಟಿಕೆಗಳು ನಡೆಯುತ್ತಿದ್ದವು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಆರೋಪಿಗಳು ಸೂಕ್ತವಾದ ಅಗ್ನಿಶಾಮಕ ಉಪಕರಣಗಳನ್ನು ಹೊಂದಿರಲಿಲ್ಲ, ಸ್ಥಳೀಯ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದಿರಲಿಲ್ಲ. ಅಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಜನ ಸಾಯಬಹುದು ಎಂಬುದು ಗೊತ್ತಿದ್ದರೂ ಆರೋಪಿಗಳು ಜನರ ಜೀವವನ್ನು ಅಪಾಯಕ್ಕೆ ಒಡ್ಡಿದ್ದರು ಎಂದು ಆರೋಪಿಸಲಾಗಿದೆ.

ಹೈಕೋರ್ಟ್‌ನಿಂದ ಸ್ವಯಂಪ್ರೇರಿತ ವಿಚಾರಣೆ

ಅಹಮದಾಬಾದ್ (ಪಿಟಿಐ): ರಾಜ್‌ಕೋಟ್‌ನ ಮನರಂಜನಾ ಕೇಂದ್ರ 'ಟಿಆರ್‌ಪಿ ಗೇಮ್ ಜೋನ್'ನಲ್ಲಿ ನಡೆದ ಅಗ್ನಿ ಅನಾಹುತದ ಬಗ್ಗೆ ಸ್ವಯಂಪ್ರೇರಿತವಾಗಿ ವಿಚಾರಣೆಗೆ ಮುಂದಾಗಿರುವ ಗುಜರಾತ್ ಹೈಕೋರ್ಟ್‌ನ ವಿಶೇಷ ಪೀಠವು, ಈ ದುರಂತಕ್ಕೆ ಮನುಷ್ಯನೇ ಕಾರಣ ಎಂಬುದು ಮೇಲ್ನೋಟಕ್ಕೆ ಅನ್ನಿಸುತ್ತಿದೆ ಎಂದು ಹೇಳಿದೆ. ಈ ದುರ್ಘಟನೆಯಲ್ಲಿ 27 ಮಂದಿ ಮೃತಪಟ್ಟಿದ್ದಾರೆ.

ಇಂತಹ ಮನರಂಜನಾ ಕೇಂದ್ರಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅಗತ್ಯ ಅನುಮತಿ ಪಡೆಯದೆಯೇ ತಲೆ ಎತ್ತಿವೆ ಎಂದು ನ್ಯಾಯಮೂರ್ತಿಗಳಾದ ಬಿರೇನ್ ವೈಷ್ಣವ್ ಮತ್ತು ದೇವನ್ ದೇಸಾಯಿ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

ಯಾವ ಕಾನೂನಿನ ಅಡಿಯಲ್ಲಿ ಅಧಿಕಾರಿಗಳು ಈ ಬಗೆಯ ಮನರಂಜನಾ ಘಟಕಗಳ ಸ್ಥಾಪನೆಗೆ ಅಥವಾ ಅವುಗಳ ಕಾರ್ಯಾಚರಣೆಗೆ ಅನುಮತಿ ನೀಡಿದ್ದಾರೆ ಎಂಬ ಬಗ್ಗೆ ಮಾಹಿತಿ ಪಡೆದು ವಿಚಾರಣೆಗೆ ಹಾಜರಾಗುವಂತೆ ಅಹಮದಾಬಾದ್, ವಡೋದರಾ, ಸೂರತ್, ರಾಜ್‌ಕೋಟ್‌ನ ಸ್ಥಳೀಯ ಆಡಳಿತ ಸಂಸ್ಥೆಗಳ ವಕೀಲರಿಗೆ ಪೀಠವು ಸೂಚಿಸಿದೆ. ವಿಚಾರಣೆಯನ್ನು ಸೋಮವಾರಕ್ಕೆ ನಿಗದಿ ಮಾಡಲಾಗಿದೆ.

ಹೈಕೋರ್ಟ್ ಹೇಳಿದ್ದು...

- ಪತ್ರಿಕಾ ವರದಿಗಳಿಂದ ಪಡೆದ ಮಾಹಿತಿ ಪ್ರಕಾರ, ಇಂತಹ ಮನರಂಜನಾ ಕೇಂದ್ರಗಳನ್ನು ನಿರ್ಮಾಣ ಮಾಡಿ, ಅನುಮತಿ ಇಲ್ಲದೆಯೇ ಅವುಗಳನ್ನು ಬಳಕೆಗೆ ಮುಕ್ತವಾಗಿಸಲಾಗಿತ್ತು.
- ಮೇಲ್ನೋಟಕ್ಕೆ ಇಲ್ಲಿನ ದುರಂತಕ್ಕೆ ಮನುಷ್ಯನೇ ಕಾರಣ. ಇಲ್ಲಿ ಮುಗ್ಧ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ಕುಟುಂಬಗಳು ದುಃಖದಲ್ಲಿವೆ.
- ಬೆಂಕಿ ಹೊತ್ತಿಕೊಳ್ಳಲು ಅನುವು ಮಾಡಿಕೊಡುವ ಪೆಟ್ರೋಲ್, ಫೈಬರ್ ಗ್ಲಾಸ್ ಶೀಟ್‌ಗಳನ್ನು ಟಿಆರ್‌ಪಿ ಗೇಮ್ ಜೋನ್‌ನಲ್ಲಿ ಇರಿಸಲಾಗಿತ್ತು.

'ಈ ಮನರಂಜನಾ ಕೇಂದ್ರವು ನಿಯಮಗಳಲ್ಲಿನ ಲೋಪವನ್ನು ದುರ್ಬಳಕೆ ಮಾಡಿಕೊಂಡಿತ್ತು ಎನ್ನುವ ವರದಿಗಳನ್ನು ಓದಿ ನಮಗೆ ಆಘಾತವಾಗಿದೆ. ಪತ್ರಿಕೆಗಳು ಹೇಳಿರುವಂತೆ, ಇಂತಹ ಮನರಂಜನಾ ಕೇಂದ್ರಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಅಗತ್ಯ ಅನುಮತಿ ಪಡೆಯದೆಯೇ ತಲೆಎತ್ತಿವೆ' ಎಂದು ಪೀಠವು ಹೇಳಿದೆ.

ನಿರಾಕ್ಷೇಪಣಾ ಪತ್ರ, ನಿರ್ಮಾಣಕ್ಕೆ ಅನುಮತಿ ಸೇರಿದಂತೆ ಕೆಲವು ಅಗತ್ಯ ಅನುಮತಿಗಳನ್ನು ಪಡೆಯುವಲ್ಲಿ ಇರುವ ಅಡ್ಡಿಗಳನ್ನು ನಿವಾರಿಸಲು ಟಿಆರ್‌ಪಿ ಗೇಮ್ ಜೋನ್‌ನಲ್ಲಿ ತಾತ್ಕಾಲಿಕ ಕಟ್ಟಡಗಳನ್ನು ನಿರ್ಮಿಸಲಾಗಿತ್ತು ಎಂದು ಪೀಠವು ಪತ್ರಿಕಾ ವರದಿಗಳನ್ನು ಉಲ್ಲೇಖಿಸಿ ಹೇಳಿದೆ.

ರಾಜ್‌ಕೋಟ್ ಮಾತ್ರವೇ ಅಲ್ಲ; ಇಂತಹ ಮನರಂಜನಾ ಕೇಂದ್ರಗಳು ಅಹಮದಾಬಾದ್ ನಗರದಲ್ಲಿಯೂ ಇವೆ. ಇವು ಸಾರ್ವಜನಿಕರ ಸುರಕ್ಷತೆಗೆ, ಅದರಲ್ಲೂ ಮುಖ್ಯವಾಗಿ ಮುಗ್ಧ ಮಕ್ಕಳ ಸುರಕ್ಷತೆಗೆ ಅಪಾಯ ಒಡ್ಡಿವೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಸಿ.ಎಂ ಭೇಟಿ: 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ನಾಲ್ಕು ಮಕ್ಕಳು ಕೂಡ ಮೃತರಲ್ಲಿ ಸೇರಿದ್ದಾರೆ. ಮನರಂಜನಾ ಕೇಂದ್ರಕ್ಕೆ ಹಾಗೂ ಗಾಯಾಳುಗಳನ್ನು ದಾಖಲಿಸಿರುವ ಆಸ್ಪತ್ರೆಗೆ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಭಾನುವಾರ ಬೆಳಿಗ್ಗೆ ಭೇಟಿ ನೀಡಿದರು.

ಮದುವೆ ಆಮಂತ್ರಣ ಪತ್ರದಲ್ಲೂ ಇವಿಎಂಗೆ ವಿರೋಧ

ಲಾತೂರ್ (ಪಿಟಿಐ): ಮಹಾರಾಷ್ಟ್ರದ ವ್ಯಕ್ತಿಯೊಬ್ಬರು ಮದುವೆ ಆಮಂತ್ರಣ ಪತ್ರದಲ್ಲಿ ಎಲೆಕ್ಟ್ರಾನಿಕ್ ಮತ ಯಂತ್ರದ (ಇವಿಎಂ) ಬಗೆಗಿನ ಅಸಮಾಧಾನವನ್ನು ಹೊರಹಾಕಿದ್ದಾರೆ.

ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಅಜಾನ್‌ಸೊಂದ ನಿವಾಸಿಯಾದ ದೀಪಕ್ ಕಾಂಬ್ಳೆ ಅವರು ತಮ್ಮ ವಿವಾಹ ಆಮಂತ್ರಣ ಪತ್ರಿಕೆಯಲ್ಲಿ 'ಇವಿಎಂ ನಿಷೇಧಿಸಿ, ಪ್ರಜಾಪ್ರಭುತ್ವ ಉಳಿಸಿ' ಎಂಬ ಸಂದೇಶವನ್ನು ನೀಡಿದ್ದಾರೆ.

'ನನ್ನ ಸಂಬಂಧಿಕರು ಮತ್ತು ಸ್ನೇಹಿತರಲ್ಲಿ ಅರಿವು ಮೂಡಿಸುವ ಸಲುವಾಗಿ, ಇವಿಎಂ ಬಗೆಗಿನ ವಿರೋಧವನ್ನು ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ಜೂನ್ 8ರಂದು ಅವರ ವಿವಾಹ ನಡೆಯಲಿದ್ದು, ಆಮಂತ್ರಣ ಪತ್ರಿಕೆಯಲ್ಲಿ ಸಂತರು, ಸಾಮಾಜಿಕ ಸುಧಾರಕರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಮತ್ತು ಅವರ ಸಂದೇಶಗಳನ್ನೂ ಮುದ್ರಿಸಿದ್ದಾರೆ.

7 ನವಜಾತ ಶಿಶುಗಳ ಸಾವು

ಒಂದನೇ ಪುಟದಿಂದ...

ತನಿಖೆ: 'ಅವಘಡಕ್ಕೆ ಕಾರಣ ಗೊತ್ತಾಗಿಲ್ಲ. ಈ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷಿಸಲಾಗುವುದು' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಅವಘಡಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡಲಾಗುವುದು ಎಂದು ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

ರಕ್ಷಣೆಗೆ ಧಾವಿಸಿದ ಜನರು: ಬೆಂಕಿ ಅವಘಡ ಸಂಭವಿಸಿದ್ದು ಗೊತ್ತಾಗುತ್ತಿದ್ದಂತೆಯೇ, ಶಹೀದ್ ಸೇವಾ ದಳದ ಕಾರ್ಯಕರ್ತರು ಹಾಗೂ ಸ್ಥಳೀಯ ಕೆಲ ನಿವಾಸಿಗಳು ಘಟನಾ ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯ ಕೈಗೊಂಡರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಪರಿಹಾರ ಘೋಷಣೆ: ಆಸ್ಪತ್ರೆಯಲ್ಲಿನ ಅಗ್ನಿ ದುರಂತಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶೋಕ ವ್ಯಕ್ತಪಡಿಸಿದ್ದಾರೆ.

ದುರ್ಘಟನೆಯಲ್ಲಿ ಮೃತಪಟ್ಟ ಮಕ್ಕಳ ಕುಟುಂಬಕ್ಕೆ ತಲಾ ₹2 ಲಕ್ಷ ಪರಿಹಾರವನ್ನೂ ಅವರು ಘೋಷಿಸಿದ್ದಾರೆ.

ದೆಹಲಿ ಅಗ್ನಿ ದುರಂತ: ಪೋಷಕರ ಆಕ್ರಂದನ

ನವದೆಹಲಿ(ಪಿಟಿಐ): ದೆಹಲಿಯ ವಿವೇಕ್ ವಿಹಾರ್ ಪ್ರದೇಶದ ಬೇಬಿ ಕೇರ್ ನ್ಯೂಬಾರ್ನ್ ಆಸ್ಪತ್ರೆಯಲ್ಲಿ ಶನಿವಾರ ತಡರಾತ್ರಿ ಸಂಭವಿಸಿದ ಅಗ್ನಿ ದುರಂತದಲ್ಲಿ ನವಜಾತ ಶಿಶುಗಳನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಬೆಂಕಿಗೆ ಆಹುತಿಯಾಗಿರುವ ತಮ್ಮ ಪುಟಾಣಿ ಕೂಸುಗಳನ್ನು ಗುರುತಿಸಲು ಕುಟುಂಬಗಳ ಸದಸ್ಯರು ಪರದಾಡುತ್ತಿದ್ದ ದೃಶ್ಯ ಕಂಡು ಬಂತು. ಶಿಶುಗಳ ಸಾವಿನ ಆಘಾತಕ್ಕೆ ಒಳಗಾಗಿರುವ ಪೋಷಕರ ರೋದನೆ ಮನ ಕಲಕುತ್ತಿತ್ತು.

'ನನ್ನ ಮಗಳು ಅಲ್ಲಾಗೆ ಇಷ್ಟವಾಗಿ ಬಿಟ್ಟಳೆ' ಎಂದು ಕಣ್ಣೀರು ಹಾಕುತ್ತಿದ್ದ ತಂದೆಯೊಬ್ಬರು, ತನ್ನ 11 ದಿನಗಳ ಕಂದಮ್ಮನಿಗಾಗಿ ಪರಿತಪಿಸುತ್ತಿದ್ದರು. ಮಗಳ ದೇಹವನ್ನು ಇಲ್ಲಿಯವರೆಗೆ ಗುರುತಿಸಲು ಸಾಧ್ಯವಾಗದಿದ್ದಕ್ಕೆ ಅವರ ದುಃಖ ಹೆಚ್ಚಾಗಿತ್ತು.

'ಮೇ 15ರಂದು ಬೇರೊಂದು ಆಸ್ಪತ್ರೆಯಲ್ಲಿ ಜನಿಸಿದ ನನ್ನ ಮಗಳನ್ನು ಈ ಆಸ್ಪತ್ರೆಯಲ್ಲಿ 72 ಗಂಟೆಗಳ ಕಾಲ ವೀಕ್ಷಣೆಗೆ ಇರಿಸುವಂತೆ ಸೂಚಿಸಲಾಗಿತ್ತು. ಇಲ್ಲಿ 10 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಮಗಳು ಈಗ ಇಲ್ಲವಾಗಿದ್ದಾಳೆ' ಎಂದು ಅವರು ರೋದಿಸಿದರು.



ದೆಹಲಿಯ ಆಸ್ಪತ್ರೆಯಲ್ಲಿ ಸಂಭವಿಸಿದ್ದ ಅಗ್ನಿ ದುರಂತದಲ್ಲಿ ನವಜಾತ ಶಿಶುಗಳನ್ನು ಕಳೆದುಕೊಂಡ ಪೋಷಕರು ರೋದಿಸಿದರು –ಪಿಟಿಐ ಚಿತ್ರ

ಈ ದುರಂತದಲ್ಲಿ ಮೃತಪಟ್ಟಿರುವ ಮತ್ತೊಂದು ಶಿಶು ರೂಹಿ. ಅದು ಜನಿಸಿ 17 ದಿನಗಳಾಗಿತ್ತು. 'ನಿನ್ನೆಯಷ್ಟೇ ಮಗುವನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ್ದೆ. ಆದರೆ ಇಂದು ಬೆಳಿಗ್ಗೆ ಆಸ್ಪತ್ರೆಗೆ ಬೆಂಕಿ ಬಿದ್ದಿರುವ ವಿಷಯ ತಿಳಿಯಿತು. ಕೂಡಲೇ ಇಲ್ಲಿಗೆ ಬಂದೆವು. ಮಗಳನ್ನು ಗುರುತಿಸುವುದೇ ಕಷ್ಟವಾಗಿದೆ' ಎಂದು ಶಿಶುವಿನ ತಾಯಿ ಕಣ್ಣೀರು ಹಾಕಿದರು.

'ಮಗಳ ಆರೋಗ್ಯ ಸುಧಾರಿಸಲಿ ಎಂದು ಈ ಆಸ್ಪತ್ರೆಗೆ ಸೇರಿಸಿದೆವು. ಆದರೆ ಆಸ್ಪತ್ರೆಯೇ ನಮ್ಮ ಏಕೈಕ ಮಗುವನ್ನು ಕಸಿದುಕೊಳ್ಳುತ್ತದೆ ಎಂದು ತಿಳಿದಿರಲಿಲ್ಲ' ಎಂದರು.

ಆಸ್ಪತ್ರೆಯ ವೈದ್ಯರು, ಅಧಿಕಾರಿಗಳು ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ಆಸ್ಪತ್ರೆ ಕಾನೂನುಬದ್ಧವೊ, ಅಲ್ಲವೊ ಎಂಬುದೂ ತಿಳಿಯುತ್ತಿಲ್ಲ. ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣ ಪತ್ರ ಪಡೆದಿದೆಯೊ ಇಲ್ಲವೊ ಎಂಬುದೂ ಗೊತ್ತಿಲ್ಲ. ಈ ಪ್ರಶ್ನೆಗಳಿಗೆ ಯಾರೊಬ್ಬರೂ ಉತ್ತರಿಸುತ್ತಿಲ್ಲ ಎಂದು ಹೃತಿಕ್ ಚೌಧರಿ ಎಂಬುವರು ಪ್ರತಿಕ್ರಿಯಿಸಿದರು.

ಮೂಲಸೌಕರ್ಯಗಳ ಮೇಲೆ ಹೆಚ್ಚಿದ ಒತ್ತಡ


ಕಾಶ್ಮೀರ: ಪ್ರವಾಸಿಗರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಶ್ರೀನಗರ: ಇತ್ತೀಚಿನ ವರ್ಷಗಳಲ್ಲಿ ಕಾಶ್ಮೀರ ಕಣಿವೆಯಲ್ಲಿ ಭದ್ರತೆ ಹೆಚ್ಚಿದೆ. ಸುರಕ್ಷತೆಯ ಭಾವನೆಯೂ ಹೆಚ್ಚುತ್ತಿರುವ ಕಾರಣ, ಇಲ್ಲಿನ ಪ್ರಕೃತಿ ಸೌಂದರ್ಯ ಸವಿಯಲು ಧಾವಿಸುತ್ತಿರುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬರುತ್ತಿದೆ.

ದೇಶದ ವಿವಿಧ ರಾಜ್ಯಗಳಿಂದಲ್ಲದೇ, ವಿದೇಶಗಳ ಪ್ರವಾಸಿಗರು ಇತ್ತೀಚಿನ ದಿನಗಳಲ್ಲಿ ಇಲ್ಲಿಗೆ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಶುದ್ಧ ನೀರಿನಿಂದ ಕಣ್ಮನ ಸೆಳೆಯುವ ದಾಲ್ ಲೇಕ್, ಹಿಮಚ್ಛಾದಿತ ಗುಲ್ಮಾರ್ಗ್‌ನ ಬೆಟ್ಟಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

ಪ್ರವಾಸೋದ್ಯಮಕ್ಕೆ ಇಂಬು ಸಿಕ್ಕಿದ್ದರೂ, ಪ್ರವಾಸಿಗರ ಸಂಖ್ಯೆಯಲ್ಲಾದ ಹೆಚ್ಚಳದಿಂದಾಗಿ ಇಲ್ಲಿನ ಮೂಲಸೌಕರ್ಯಗಳ ಮೇಲೆ ಒತ್ತಡ ಬೀಳುತ್ತಿದೆ. ಅವುಗಳ ಧಾರಣಾ ಸಾಮರ್ಥ್ಯಕ್ಕೂ ಇದು ಸವಾಲಾಗಿ ಪರಿಣಮಿಸಿದೆ.



ಗುಲ್ಮಾರ್ಗ್, ಪಹಲ್ಗಾಮ್ ಹಾಗೂ ಸೋನಮಾರ್ಗದಂತಹ ಗಿರಿಧಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಈಗ ಭಾರಿ ಸಂಖ್ಯೆಯಲ್ಲಿ ವಾಹನಗಳನ್ನು ಕಾಣಬಹುದಾಗಿದೆ. ಈ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಂದ ಈ ವಾಹನಗಳು ತುಂಬಿರುತ್ತವೆ.

ಆದರೆ, ಈ ಎಲ್ಲ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಇಲ್ಲಿರುವ ಸಣ್ಣ ಪ್ರಮಾಣದ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗಿದೆ. ಇಲ್ಲಿರುವ ಹೋಟೆಲ್‌ಗಳು, ಗೆಸ್ಟ್‌ಹೌಸ್‌ಗಳನ್ನು ಸಹ ಒಂದು ಕಾಲದಲ್ಲಿ ಇಲ್ಲಿಗೆ ಬರುವ ಕಡಿಮೆ ಸಂಖ್ಯೆಯ ಪ್ರವಾಸಿಗರಿಗೆ ಸಾಕಾಗುವಂತೆ ನಿರ್ಮಿಸಲಾಗಿದೆ. ಈಗ, ಪ್ರವಾಸಿಗರ ಸಂಖ್ಯೆಯಲ್ಲಿನ ದಿಢೀರ್ ಹೆಚ್ಚಳ ಈ ಎಲ್ಲ ಮೂಲಸೌಕರ್ಯಗಳ ಮೇಲೆ ಒತ್ತಡಕ್ಕೆ ಕಾರಣವಾಗಿದೆ.

ಮುಖ್ಯಾಂಶಗಳು

- ಹೆಚ್ಚುತ್ತಿರುವ ಪ್ರವಾಸಿಗರ ಸಂಖ್ಯೆಯಿಂದ ಹಲವು ಸಮಸ್ಯೆ
- ತ್ಯಾಜ್ಯ ವಿಲೇವಾರಿ ವ್ಯವಸ್ಥೆ ಮೇಲೂ ಒತ್ತಡ
- ಪರಿಸರ, ಪ್ರಾಕೃತಿಕ ಸೌಂದರ್ಯಕ್ಕೆ ಹಾನಿ ಸಾಧ್ಯತೆ

ಕೆಲವೆಡೆ ತಾತ್ಕಾಲಿಕ ಲಾಡ್ಜಿಂಗ್‌ಗಳನ್ನು ನಿರ್ಮಿಸಲಾಗಿದ್ದರೂ, ಅವುಗಳಲ್ಲಿ ಮೂಲಸೌಲಭ್ಯಗಳು ಇಲ್ಲ. ಇದು ಒಂದೆಡೆ ಪ್ರವಾಸಿಗರು ತೊಂದರೆ ಅನುಭವಿಸುವಂತೆ ಮಾಡಿದರೆ, ಮತ್ತೊಂದೆಡೆ ಅವರಲ್ಲಿ ಕಣಿವೆ ರಾಜ್ಯದ ಪ್ರವಾಸ ಕೆಟ್ಟ ಅನುಭವ ಮೂಡಿಸುವ ಸಾಧ್ಯತೆ ಇರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ.

'ಕೆಲ ವರ್ಷಗಳ ಹಿಂದೆ ರಾಜಕೀಯ ಅಸ್ಥಿರತೆ ಪರಿಣಾಮ ಹೌಸ್‌ಬೋಟ್‌ಗಳ ಮಾಲೀಕರು ಕಷ್ಟ ಅನುಭವಿಸುತ್ತಿದ್ದರು. ಈಗ ಸುರಕ್ಷತೆ ಹೆಚ್ಚಿರುವ ಕಾರಣ ಹೌಸ್‌ಬೋಟ್‌ಗಳು ಪ್ರವಾಸಿಗರಿಂದ ತುಂಬುತ್ತಿವೆ. ಈ ಪರಿಯ ಪ್ರವಾಸಿಗರ ದಟ್ಟಣೆಯನ್ನು ನಾನು ನೋಡಿಯೇ ಇರಲಿಲ್ಲ' ಎಂದು ಹೌಸ್‌ಬೋಟ್‌ವೊಂದರ ಮಾಲೀಕ ಶಹೀದ್ ಅಹ್ಮದ್ ಹೇಳುತ್ತಾರೆ.

'ಇತ್ತೀಚಿನ ದಿನಗಳಲ್ಲಿ ಹಲವು ತಿಂಗಳು ಮೊದಲೇ ಹೋಟೆಲ್‌ಗಳಲ್ಲಿ ಬುಕಿಂಗ್ ಆರಂಭವಾಗಿರುತ್ತದೆ. ಎಷ್ಟೋ ಜನ ಪ್ರವಾಸಿಗರನ್ನು ವಾಪಸು ಕಳುಹಿಸಿದ್ದೇವೆ. ಸಾಕಷ್ಟು ಕಷ್ಟದ ದಿನಗಳನ್ನು ಅನುಭವಿಸಿದ ನಂತರ ಇಂತಹ ಪರಿಸ್ಥಿತಿ ಎದುರಿಸುತ್ತಿರುವುದು ಒಳ್ಳೆಯದೇ' ಎಂದು ಗುಲ್ಮಾರ್ಗ್‌ನ ಪ್ರಮುಖ ಹೋಟೆಲ್‌ನ ವ್ಯವಸ್ಥಾಪಕರಾಗಿರುವ ತಾರಿಕ್ ದರ್ ಹೇಳುತ್ತಾರೆ.

ಯಶವಂತಪುರ ಎಪಿಎಂಸಿ ಆವರಣದಲ್ಲಿ ನಿರ್ಮಿಸಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡ

₹85 ಕೋಟಿ ಖರ್ಚು: ಕಟ್ಟಡ ವ್ಯರ್ಥ

• ಆದಿತ್ಯ ಕೆ.ಎ.

ಬೆಂಗಳೂರು: ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ) ಆವರಣದಲ್ಲಿ ಸುಮಾರು ₹85 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದ ಬಹುಮಹಡಿ ವಾಹನಗಳ ಪಾರ್ಕಿಂಗ್ ಕಟ್ಟಡವೊಂದು ಬಳಕೆಗೆ ಲಭಿಸದೇ ವ್ಯರ್ಥವಾಗುತ್ತಿದೆ.

ಹತ್ತು ಅಂತಸ್ತಿನ ಕಟ್ಟಡದ ಕಾಮಗಾರಿ ಮುಕ್ತಾಯವಾಗಿ ಎರಡು ವರ್ಷ ಕಳೆದಿದ್ದರೂ ಬಳಕೆಗೆ ಇಲ್ಲವಾಗಿದೆ. ಕಟ್ಟಡದ ಮುಖ್ಯದ್ವಾರಕ್ಕೆ ಬೀಗ ಹಾಕಿ, ಬಂದ್ ಮಾಡಲಾಗಿದೆ.

ಯಶವಂತಪುರ, ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣ, ತುಮಕೂರು ರಾಷ್ಟ್ರೀಯ ಹೆದ್ದಾರಿಯ ಬದಿ, ಯಶವಂತಪುರ ರೈಲ್ವೆ ನಿಲ್ದಾಣದ ಆವರಣದಲ್ಲಿ ನಿತ್ಯವೂ ವಾಹನ ನಿಲುಗಡೆಗೆ ವಾಹನ ಸವಾರರು ಪರದಾಡುತ್ತಿದ್ದರೂ, ಅದರ ಸಮೀಪದಲ್ಲಿರುವ ಕಟ್ಟಡ ಬಳಸಿಕೊಳ್ಳಲು ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂಬ ಆರೋಪವಿದೆ.

ಯಶವಂತಪುರ ಎಪಿಎಂಸಿಗೆ ಪ್ರತಿನಿತ್ಯ ಸಾವಿರಾರು ರೈತರು, ಮಧ್ಯವರ್ತಿಗಳು ತಮ್ಮ ವಾಹನಗಳಲ್ಲಿ ಕೆಲಸಕ್ಕೆಂದು ಬರುತ್ತಾರೆ. ಅವರೆಲ್ಲರೂ ತಮ್ಮ ವಾಹನ ನಿಲುಗಡೆಗೆ ಪರದಾಡುತ್ತಲೇ ಇರುತ್ತಾರೆ. ಕೆಲವೊಮ್ಮೆ ಎಲ್ಲಿ ಹುಡುಕಿದರೂ ಸ್ಥಳವೇ ಲಭಿಸುತ್ತಿಲ್ಲ! ಪಾರ್ಕಿಂಗ್ ಉದ್ದೇಶಕ್ಕೆ ನಿರ್ಮಿಸಿದ ಕಟ್ಟಡವನ್ನು ಬಳಕೆ ಮಾಡಿಕೊಳ್ಳದೇ ಇರುವುದು ದುರಂತ ಎಂದು ವ್ಯಾಪಾರಿಗಳು ಹೇಳುತ್ತಾರೆ.

2018ರಲ್ಲಿ ಈ ಕಟ್ಟಡದ ಕಾಮಗಾರಿ ಆರಂಭಗೊಂಡಿತ್ತು. ಆರಂಭದಲ್ಲಿ ಕಾಮಗಾರಿ ಚುರುಕುಗೊಂಡಿದ್ದರೂ ನಂತರ ವಿಳಂಬವಾಗಿತ್ತು. ಮಧ್ಯದಲ್ಲಿ ಕಟ್ಟಡದ ಒಂದು ಬದಿ ಕುಸಿದ ಕಾರಣಕ್ಕೆ ಕೆಲವು ತಿಂಗಳು ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ಇಷ್ಟೆಲ್ಲಾ ಅಡೆತಡೆಗಳ ನಡುವೆಯೂ 2022ರ ಡಿಸೆಂಬರ್ ವೇಳೆಗೆ ಸುಣ್ಣಬಣ್ಣ ಬಳಿದುಕೊಂಡು ಕಟ್ಟಡ ಸಜ್ಜಾಗಿತ್ತು. ಆದರೆ, ಬಳಕೆಗೆ ಮಾತ್ರ ಬರುತ್ತಿಲ್ಲ ಎಂದು ಸವಾರರು ನೋವು ತೋಡಿಕೊಳ್ಳುತ್ತಾರೆ.

ದಟ್ಟಣೆ ನಿವಾರಣೆ ಸಾಧ್ಯ: ತುಮಕೂರು ರಾಷ್ಟ್ರೀಯ ಹೆದ್ದಾರಿ ಮೂಲಕ ನಗರಕ್ಕೆ ಪ್ರತಿನಿತ್ಯ ಸಾವಿರಾರು ಕಾರುಗಳು ನಗರ ಪ್ರವೇಶಿಸುತ್ತವೆ. ಇದರಿಂದ ನಿತ್ಯ ನಗರ ದಟ್ಟಣೆಯ ಸಮಸ್ಯೆಗೆ ಸಿಲುಕುತ್ತಿದೆ. ಮತ್ತೊಂದು ಕಡೆ ಯಶವಂತಪುರ ಮಾರುಕಟ್ಟೆ ಪೂರ್ಣ ಪ್ರಮಾಣದಲ್ಲಿ ನೆಲಮಂಗಲ ಸಮೀಪದ ದಾಸನಪುರಕ್ಕೆ ಸ್ಥಳಾಂತರವಾಗಿಲ್ಲ. ಇದು ಸಹ ಸಮಸ್ಯೆ ಹೆಚ್ಚಿಸಿದೆ.

‘ಬಹುಮಹಡಿ ಕಟ್ಟಡವು ಬಳಕೆಗೆ ಲಭ್ಯವಾದರೆ, ತುಮಕೂರು ರಸ್ತೆಯ ಮೂಲಕ ಕಾರಿನಲ್ಲಿ ಬಂದವರು ಈ ಪಾರ್ಕಿಂಗ್ ಕಟ್ಟಡದಲ್ಲೇ ಕಾರು ಹಾಗೂ ಬೈಕ್ ನಿಲುಗಡೆ ಮಾಡಿ ಮೆಟ್ರೊದಲ್ಲಿ ನಗರದ ಒಳಕ್ಕೆ ಬರುತ್ತಾರೆ. ಕೆಲಸ ಮುಗಿದ ಮೇಲೆ ತಮ್ಮ ವಾಹನ ಕೊಂಡೊಯ್ಯುತ್ತಾರೆ. ಸ್ವಲ್ಪವಾದರೂ ದಟ್ಟಣೆ ಸಮಸ್ಯೆ ಬಗೆಹರಿಯುವ ಸಾಧ್ಯತೆಯಿದೆ’ ಎಂದು ತೆಂಗಿನಕಾಯಿ ವ್ಯಾಪಾರಿ ಸುರೇಶ್ ಹೇಳಿದರು.



ಬಳಕೆಗೆ ಲಭಿಸದ ಯಶವಂತಪುರದ ಎಪಿಎಂಸಿ ಆವರಣದಲ್ಲಿರುವ ವಾಹನ ಪಾರ್ಕಿಂಗ್ ಕಟ್ಟಡ —ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಅಂಕಿ ಅಂಶಗಳು

750 ಕಾರುಗಳ ಪಾರ್ಕಿಂಗ್‌ಗೆ ಅವಕಾಶ

110 ಬೈಕ್‌ಗಳ ನಿಲುಗಡೆ ಸ್ಥಳ

> ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿರುವ ಕಟ್ಟಡವನ್ನು ಇನ್ನಾದರೂ ಬಳಕೆ ಮಾಡಿಕೊಳ್ಳುವತ್ತ ಅಧಿಕಾರಿಗಳು ಗಮನ ಹರಿಸಬೇಕು
>
> **ಈರಪ್ಪ**
> ಈರುಳ್ಳಿ ವ್ಯಾಪಾರಿ, ಯಶವಂತಪುರ

ಫ್ರೀಡಂ ಪಾರ್ಕ್: ತಂತ್ರಜ್ಞಾನ ಅಳವಡಿಕೆ

ಫ್ರೀಡಂ ಪಾರ್ಕ್‌ನಲ್ಲಿ ನಿರ್ಮಿಸಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡದ ನಿರ್ವಹಣೆ, ಪಾರ್ಕಿಂಗ್ ಶುಲ್ಕ ವಸೂಲಿಗೆ ಟೆಂಡರ್ ಪಡೆದಿರುವ ‘ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸೆಲ್ಯೂಷನ್ ಕಂಪನಿ’ ಅಡ್ವಾನ್ಸ್ ಪಾರ್ಕಿಂಗ್ ತಂತ್ರಜ್ಞಾನ ಅಳವಡಿಕೆ ಚುರುಕುಗೊಳಿಸಿದೆ. ದುಬೈನಿಂದ ಕೆಲವು ಸ್ಮಾರ್ಟ್ ಯಂತ್ರಗಳು ಬರುವುದು ಬಾಕಿಯಿದ್ದು, ಅವುಗಳ ಅಳವಡಿಕೆ ನಂತರ ಪಾರ್ಕಿಂಗ್ ಸ್ಥಳ ಸಂಪೂರ್ಣ ಸಜ್ಜಾಗಲಿದೆ. ಜೂನ್ 20ಕ್ಕೆ ಉದ್ಘಾಟನೆ ನಡೆಸಲು ಚಿಂತಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಟೆಂಡರ್‌ದಾರರು ಬೇಸರ

ಎಪಿಎಂಸಿ ಆವರಣದಲ್ಲಿರುವ ಬಹುಮಹಡಿ ಕಟ್ಟಡದ ಟೆಂಡರ್ ಆಹ್ವಾನಿಸುವ ವಿಚಾರದಲ್ಲಿ ಅಧಿಕಾರಿಗಳು ವಿಳಂಬ ಧೋರಣೆ ಹಾಗೂ ಅವೈಜ್ಞಾನಿಕ ನೀತಿ ಅನುಸರಿಸುತ್ತಿದ್ದಾರೆ ಎಂದು ಗುತ್ತಿಗೆದಾರರು ದೂರುತ್ತಾರೆ. ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಗೂ ಮೊದಲೇ ಎರಡರಿಂದ ಮೂರು ಬಾರಿ ಟೆಂಡರ್ ಕರೆದು ಅಂತಿಮಗೊಳಿಸಬೇಕಿತ್ತು. ನೀತಿ ಸಂಹಿತೆ ಜಾರಿಗೂ ಮೊದಲು ಒಮ್ಮೆ ಮಾತ್ರ ಟೆಂಡರ್ ಕರೆಯಲಾಗಿತ್ತು. ಟೆಂಡರ್ ಮೊತ್ತವನ್ನು ₹12.74 ಕೋಟಿಗೆ ನಿಗದಿ ಪಡಿಸಲಾಗಿತ್ತು. ಪ್ರತಿ ವರ್ಷ ಶೇ 10ರಷ್ಟು ಏರಿಕೆ ಮಾಡುವುದಾಗಿ ಎಪಿಎಂಸಿ ಆದೇಶದಲ್ಲಿ ಹೇಳಿತ್ತು. ದುಬಾರಿ ದರ ನಿಗದಿ ಪಡಿಸಿರುವ ಕಾರಣಕ್ಕೆ ಯಾರೂ ಆಸಕ್ತಿ ತೋರಿರಲಿಲ್ಲ ಎಂದು ಗುತ್ತಿಗೆದಾರರೊಬ್ಬರು ಹೇಳಿದರು.

ನೀತಿ ಸಂಹಿತಿ ಮುಕ್ತಾಯವಾದ ತಕ್ಷಣವೇ ಮತ್ತೊಮ್ಮೆ ಟೆಂಡರ್ ಆಹ್ವಾನಿಸಲಾಗುವುದು. ಗುತ್ತಿಗೆ ದರ ಕಡಿಮೆ ಮಾಡುವುದು, ಇಲ್ಲವೇ ಲಾಭ ಹಂಚಿಕೆಯಡಿ ಗುತ್ತಿಗೆ ನೀಡುವ ಬಗ್ಗೆ ಚಿಂತಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.



ಮೀನು ಶಿಕಾರಿ ನಗರದ ರಾಮಚಂದ್ರಕೆರೆಯಲ್ಲಿ ಬಣ್ಣದ ಕೊಕ್ಕರೆಗಳು (ಪೇಂಟೆಡ್ ಸ್ಟಾರ್ಕ್) ಮೀನು ಹಿಡಿದು ನುಂಗುತ್ತಿರುವ ದೃಶ್ಯ ಕ್ಯಾಮೆರಾಗೆ ಕಂಡಿದ್ದು ಹೀಗೆ —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

‘ಎಲೆ ಮಲ್ಲಪ್ಪ ಕೆರೆ ಉಳಿಸಿ’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರದ ಬಳಿಯಿರುವ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಲ್ಲಿ ತ್ಯಾಜ್ಯ ತುಂಬಿದ್ದು, ಸ್ಥಳೀಯ ನಾಗರಿಕರು, ‘ಎಲೆ ಮಲ್ಲಪ್ಪ ಕೆರೆ ಉಳಿಸಿ’ ಅಭಿಯಾನದ ಮೂಲಕ ಕೆರೆಯ ಸ್ವಚ್ಛತಾ ಕಾರ್ಯ ಮಾಡಿದರು.

ಮೇಡಹಳ್ಳಿ ರೈಸಿಂಗ್, ದ ಇಂಡಿಯನ್ ಪ್ಲಾಗರ್ಸ್ ಆರ್ಮಿ, ಫ್ರೆಂಡ್ಸ್ ಆಫ್ ಲೇಕ್ಸ್ ಹಾಗೂ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಸ್ವಯಂಸೇವಕರು 50ಕ್ಕೂ ಅಧಿಕ ಮಂದಿ ಈ ಕಾರ್ಯದಲ್ಲಿ ತೊಡಗಿಸಿಕೊಂಡು 20 ಚೀಲಕ್ಕೂ ಅಧಿಕ ಕಸ ಸಂಗ್ರಹ ಮಾಡಿದರು.

‘ಎಲೆ ಮಲ್ಲಪ್ಪ ಶೆಟ್ಟಿ ಕೆರೆಯನ್ನು ಪ್ಲಾಸ್ಟಿಕ್ ರಹಿತ, ಕಸರಹಿತ, ಮಿಶ್ರ-ತ್ಯಾಜ್ಯರಹಿತವನ್ನಾಗಿ ಮಾಡಲು ಸ್ವಚ್ಛತಾ ಕಾರ್ಯ ಒಂದು ಹೆಜ್ಜೆಯಾಗಿದೆ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶ, ಸ್ಥಳೀಯರು ಹೋರಾಟ ನಡೆಸುತ್ತಿದ್ದರೂ ಕೆರೆಯಲ್ಲಿ ಕಟ್ಟಡ ತ್ಯಾಜ್ಯವನ್ನು ಇಂದಿಗೂ ಸುರಿಯಲಾಗುತ್ತಿದೆ. ಒಂದು ಕಡೆ ಕೆರೆಗೆ ಕಸ ತುಂಬಲಾಗುತ್ತಿದೆ. ಇನ್ನೊಂದೆಡೆ ಒತ್ತುವರಿಯಿಂದ ಕೆರೆ ನಲುಗುತ್ತಿದೆ. ಬಿಬಿಎಂಪಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಿತ ಸಂಬಂಧ ಪಟ್ಟ ಯಾರೂ ಇತ್ತ ಗಮನ ಹರಿಸುತ್ತಿಲ್ಲ’ ಎಂದು ಸ್ವಯಂ ಸೇವಕರು ದೂರಿದರು.

ಸ್ವಚ್ಛತಾ ಕಾರ್ಯದಲ್ಲಿ ಎಲೆ ಮಲ್ಲಪ್ಪ ಶೆಟ್ಟಿಯವರ ಕುಟುಂಬದ ಸದಸ್ಯರೂ ಸೇರಿದಂತೆ ಅನೇಕರು ಭಾಗವಹಿಸಿದ್ದರು.



ನಗರದ ಎಲೆ ಮಲ್ಲಪ್ಪ ಅವರ ಕುಟುಂಬದ ಸದಸ್ಯರು ಮತ್ತು ಸ್ಥಳೀಯರು ‘ಎಲೆ ಮಲ್ಲಪ್ಪ ಕೆರೆ ಉಳಿಸಿ’ ಅಭಿಯಾನ ನಡೆಸಿದರು

ತಪ್ಪಿದ ಸಂಭಾವ್ಯ ರೈಲು ಅವಘಡ

ಪ್ರಜಾವಾಣಿ ವಾರ್ತೆ

ಉಡುಪಿ: ಕೊಂಕಣ ರೈಲು ಮಾರ್ಗದ ಇನ್ನಂಜೆ ಹಾಗೂ ಪಡುಬಿದ್ರಿ ನಡುವಿನ ರೈಲ್ವೆ ಹಳಿಯಲ್ಲಿ ವೆಲ್ಡಿಂಗ್ ಜಾಯಿಂಟ್ ಬಿಟ್ಟಿರುವುದನ್ನು ಪತ್ತೆ ಹಚ್ಚುವ ಮೂಲಕ ರೈಲ್ವೆ ಜಾಗೃತ ಹಳಿ ನಿರ್ವಾಹಕ ಪ್ರದೀಪ್ ಶೆಟ್ಟಿ ಸಂಭಾವ್ಯ ಅವಘಡ ತಪ್ಪಿಸಿದ್ದಾರೆ.

ಮಧ್ಯರಾತ್ರಿ 2.25ರ ಸುಮಾರಿಗೆ ಹಳಿ ಜಾಯಿಂಟ್ ಬಿಟ್ಟಿರುವುದನ್ನು ಗಮನಿಸಿದ ಪ್ರದೀಪ್ ಶೆಟ್ಟಿ, ತಕ್ಷಣ ಉಡುಪಿಯ ಆರ್‌ಎಂಇ ಗಮನಕ್ಕೆ ತಂದಿದ್ದಾರೆ. ಕೂಡಲೇ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಹಳಿ ದುರಸ್ತಿಗೊಳಿಸಿ ಸಮಸ್ಯೆ ಪರಿಹರಿಸಿದ್ದಾರೆ. ದುರಸ್ತಿ ಹಿನ್ನೆಲೆಯಲ್ಲಿ ಹಲವು ರೈಲುಗಳ ಸಂಚಾರ ವ್ಯತ್ಯಯವಾಗಿದ್ದು, ರೈಲುಗಳನ್ನು ಉಡುಪಿ ಹಾಗೂ ಸುರತ್ಕಲ್ ನಿಲ್ದಾಣಗಳಲ್ಲಿ ಕೆಲಹೊತ್ತು ತಡೆ ಹಿಡಿಯಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹುಮಾನ ಘೋಷಣೆ: ಜಾಗೃತ ಹಳಿ ನಿರ್ವಾಹಕ ಪ್ರದೀಪ್ ಶೆಟ್ಟಿ ಅವರ ಕರ್ತವ್ಯಕ್ಕೆ ಮೆಚ್ಚಿ ಕೊಂಕಣ ರೈಲ್ವೆಯ ನೂತನ ಸಿಎಂಡಿ ಸಂತೋಷ ಕುಮಾರ್ ಝಾ ₹25 ಸಾವಿರ ನಗದು ಬಹುಮಾನ ಘೋಷಿಸಿದ್ದರು. ಅದರಂತೆ ಉಡುಪಿಯ ಹಿರಿಯ ಎಂಜಿನಿಯರ್ ಗೋಪಾಲಕೃಷ್ಣ ಹಳಿ ದುರಸ್ತಿ ನಡೆದ ಸ್ಥಳದಲ್ಲಿಯೇ ಪ್ರದೀಪ್ ಶೆಟ್ಟಿ ಅವರಿಗೆ ಬಹುಮಾನದ ಚೆಕ್ ಹಸ್ತಾಂತರಿಸಿ ಶ್ಲಾಘಿಸಿದರು.

ಬಿಬಿಎಂಪಿ ಶಾಲೆಗಳಿಗೆ ಹೊಸ ಟೆಂಡರ್ ಕರೆಯದೆ ನೇಮಕಾತಿ ಪ್ರಕ್ರಿಯೆ

ಸೆಕ್ಯೂರಿಟಿ ಏಜೆನ್ಸಿಗಳಿಂದಲೇ ಶಿಕ್ಷಕರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲಾ-ಕಾಲೇಜುಗಳಿಗೆ ಶಿಕ್ಷಣ ಇಲಾಖೆ ಮೂಲಕವೇ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು ಎಂದು ಸರ್ಕಾರ ನೀಡಿದ್ದ ಭರವಸೆ ಹುಸಿಯಾಗಿದೆ. ಡಿಟೆಕ್ಟಿವ್– ಸೆಕ್ಯೂರಿಟಿ ಏಜೆನ್ಸಿಗಳಿಂದಲೇ ಮತ್ತೆ ಹೊರಗುತ್ತಿಗೆ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳಲು ಆದೇಶ ನೀಡಲಾಗಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು 2024-25ನೇ ಶೈಕ್ಷಣಿಕ ವರ್ಷದಿಂದ ಶಿಕ್ಷಣ ಇಲಾಖೆಯಿಂದ ಬಿಬಿಎಂಪಿ ಶಾಲೆ ಕಾಲೇಜುಗಳಿಗೆ ಶಿಕ್ಷಕರನ್ನು ಒದಗಿಸಲಾಗುವುದು. ಮೂಲ ಸೌಕರ್ಯಗಳನ್ನು ಬಿಬಿಎಂಪಿ ಒದಗಿಸಲಿದೆ ಎಂದು ಹೇಳಿದ್ದರು.

ಈ ಪ್ರಕ್ರಿಯೆಗೆ ಸುಮಾರು 700ಕ್ಕೂ ಹೆಚ್ಚು ಹೊರಗುತ್ತಿಗೆ ಶಿಕ್ಷಕರು ವಿರೋಧ ವ್ಯಕ್ತಪಡಿಸಿದ್ದರು. ಶಾಲೆ ಬಹಿಷ್ಕರಿಸಿ ಪ್ರತಿಭಟಿಸಿದ್ದರು. ಆದರೂ, ಇದಕ್ಕೆ ಮಣಿಯದ ಸರ್ಕಾರ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರು, ‘ಅನರ್ಹ ಶಿಕ್ಷಕರಿದ್ದಾರೆ. ಅವರೆಲ್ಲ ಬೇಡ. ಶಿಕ್ಷಣ ಇಲಾಖೆಯಿಂದಲೇ ಶಿಕ್ಷಕರು ಬರುತ್ತಾರೆ. ಈಗಿರುವವರು ಅರ್ಹತೆ ಇದ್ದರೆ ಎಸ್‌ಡಿಎಂಸಿ ಮೂಲಕ ನೇಮಕವಾಗಬಹುದು. ಅವರಿಗೆ ಪ್ರಥಮ ಆದ್ಯತೆ ನೀಡಲಾಗುತ್ತದೆ’ ಎಂದು ಹೇಳಿದ್ದರು.

ಆದರೆ, ಇದ್ಯಾವ ಪ್ರಕ್ರಿಯೆಯೂ ಆಗದೆ, ಹಿಂದಿನ ಏಜೆನ್ಸಿಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರನ್ನು ಒದಗಿಸಲು ಬಿಬಿಎಂಪಿ ಆದೇಶ ಹೊರಡಿಸಿದೆ.

2023-24ನೇ ಶೈಕ್ಷಣಿಕ ವರ್ಷದಲ್ಲಿ ಗುತ್ತಿಗೆ ಪಡೆದಿದ್ದ ಏಜೆನ್ಸಿಗಳಿಗೇ 2024-25ನೇ ಶೈಕ್ಷಣಿಕ ವರ್ಷಕ್ಕೂ ಹೊರಗುತ್ತಿಗೆ ಶಿಕ್ಷಕರನ್ನು ಒದಗಿಸಲು ಆದೇಶ ನೀಡಲಾಗಿದೆ. ಹೊಸ ಟೆಂಡರ್ ಪ್ರಕ್ರಿಯೆ ನಡೆಸದೆ ಅಕ್ರಮವಾಗಿ ಹಿಂದಿನ ವರ್ಷದ ಗುತ್ತಿಗೆದಾರರಿಗೆ ಆದೇಶ ನೀಡಲಾಗಿದೆ.

ದಕ್ಷಿಣ ವಲಯ ಮತ್ತು ಆರ್.ಆರ್. ನಗರ ವಲಯಕ್ಕೆ ‘ಅಪ್ಪು ಡಿಟೆಕ್ಟಿವ್ ಆ್ಯಂಡ್ ಸೆಕ್ಯೂರಿಟಿ ಸರ್ವೀಸ್’, ಪೂರ್ವ ವಲಯಕ್ಕೆ ‘ಡಿಟೆಕ್ಟ್‌ವೆಲ್ ಆ್ಯಂಡ್ ಸೆಕ್ಯೂರಿಟಿ ಸರ್ವಿಸ್ ಪ್ರೈ ಲಿಮಿಟೆಡ್’ ಹಾಗೂ ಪಶ್ಚಿಮ ವಲಯಕ್ಕೆ ‘ಶಾರ್ಪ್ ವಾಚ್ ಇನ್‌ವೆಸ್ಟಿಂಗ್ ಸೆಕ್ಯೂರಿಟಿ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್’ಗಳು ಹೊರಗುತ್ತಿಗೆ ಶಿಕ್ಷಕರನ್ನು ಒದಗಿಸಲು ಬಿಬಿಎಂಪಿ ಆಯಾ ವಲಯದ ಕಾರ್ಯಪಾಲಕ ಎಂಜಿನಿಯರ್ ಕಾರ್ಯಾದೇಶ ನೀಡಿದ್ದಾರೆ.

ಈ ಏಜೆನ್ಸಿಗಳು ಶಿಕ್ಷಕರಿಗೆ ಸಂದೇಶ ಕಳುಹಿಸಿ, ದಾಖಲೆಗಳನ್ನು ಸಲ್ಲಿಸಿ, ಗುತ್ತಿಗೆ ಪ್ರಕ್ರಿಯೆಗೆ ಸಹಿ ಹಾಕಲು ಹೇಳುತ್ತಿದ್ದಾರೆ. ವೇತನ ಕಡಿಮೆ ಮಾಡಿದ್ದಾರೆ ಎಂದು ಶಿಕ್ಷಕರು ದೂರಿದ್ದಾರೆ.

‘ಬಿಬಿಎಂಪಿ ಶಾಲೆಗಳಲ್ಲಿ ಬಡವರ ಮಕ್ಕಳು ಓದುತ್ತಿದ್ದಾರೆ. ಅಲ್ಲಿನ ಶಿಕ್ಷಣ ಮಟ್ಟ ಸುಧಾರಿಸುವ ಉದ್ದೇಶದಿಂದ ಗುಣಮಟ್ಟದ, ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಲು ನಿರ್ಧರಿಸಿದ್ದೇವೆ. ಈಗಿರುವ ಶಿಕ್ಷಕರಲ್ಲಿಯೇ ಅರ್ಹರಿಗೆ ಆದ್ಯತೆ ನೀಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ ತಿಳಿಸಿದ್ದರು.

‘ಸೆಕ್ಯೂರಿಟಿ ಏಜೆನ್ಸಿಗಳಿಂದ ಶಿಕ್ಷಕರನ್ನು ನೇಮಿಸಲಾಗುತ್ತಿದೆ ಎಂಬ ದೂರು ಬಂದಿದೆ. ಬಿಬಿಎಂಪಿ ಶಾಲೆಗಳಲ್ಲಿ ಗುಣಮಟ್ಟ ಕುಸಿದಿದೆ. ಈ ಕಾರಣದಿಂದ ಪಾಲಿಕೆ ಶಾಲೆಗಳನ್ನು ಶಿಕ್ಷಣ ಇಲಾಖೆ ಅಧೀನಕ್ಕೆ ವಹಿಸಲಾಗಿದೆ. ಈ ಶಾಲೆಗಳಿಗೆ ಮೂಲಸೌಕರ್ಯ ಒದಗಿಸುವ ಕೆಲಸವನ್ನು ಮಾತ್ರ ಬಿಬಿಎಂಪಿ ಮಾಡಲಿದೆ’ ಎಂಬುದನ್ನೂ ಹೇಳಿದ್ದರು.

ಆದರೆ, ಅದೇ ಸೆಕ್ಯೂರಿಟಿ ಏಜೆನ್ಸಿಗಳು ಶಿಕ್ಷಕರನ್ನು 2024-25ನೇ ಶೈಕ್ಷಣಿಕ ವರ್ಷಕ್ಕೂ ಹೊರಗುತ್ತಿಗೆಯಲ್ಲಿ ಪೂರೈಸಲು ಆದೇಶ ಪಡೆದಿವೆ. ಮೇ 29ರಿಂದ ಶಾಲೆಗಳು ಆರಂಭ ಆಗಲಿವೆ.

ಏಜೆನ್ಸಿಗಳಿಗೆ ಮತ್ತೆ ಹೊರಗುತ್ತಿಗೆ ಶಿಕ್ಷಕರನ್ನು ಒದಗಿಸುವ ಗುತ್ತಿಗೆ ನೀಡಿರುವ ಬಗ್ಗೆ ಪ್ರತಿಕ್ರಿಯೆಗೆ ಬಿಬಿಎಂಪಿ ಮುಖ್ಯ ಆಯುಕ್ತರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಲಭ್ಯರಾಗಲಿಲ್ಲ.

ಹುಚ್ಚು, ಹಾಸ್ಯಾಸ್ಪದ ಪ್ರಯತ್ನ: ಸುರೇಶ್ ಕುಮಾರ್

‘ಡಿಟೆಕ್ಟಿವ್– ಸೆಕ್ಯೂರಿಟಿ ಏಜೆನ್ಸಿಗಳು ಹೊರಗುತ್ತಿಗೆ ಶಿಕ್ಷಕರನ್ನು ಒದಗಿಸುತ್ತಿರುವ ಬಗ್ಗೆ ಈ ಹಿಂದೆಯೂ ಉಪಮುಖ್ಯಮಂತ್ರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರ ಗಮನಕ್ಕೆ ತಂದಿದ್ದೆ. ಆಗ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಯಿತು. ಇದೀಗ ಮತ್ತೆ ಅದೇ ಹುಚ್ಚು ಅಥವಾ ಹಾಸ್ಯಾಸ್ಪದ ಪ್ರಯತ್ನ ಮಾಡುತ್ತಿದ್ದಾರೆ. ಶಿಕ್ಷಕರ ನೇಮಕಾತಿಯನ್ನು ಸೆಕ್ಯೂರಿಟಿ ಏಜೆನ್ಸಿಗೆ ಗುತ್ತಿಗೆ ನೀಡಿದರೆ ಶಿಕ್ಷಣ ಕ್ಷೇತ್ರ ಎಂತಹ ಸ್ಥಿತಿಗೆ ತಲುಪುತ್ತದೆ? ರಸ್ತೆ ಕಾಮಗಾರಿ ಮಾಡಲು ಗುತ್ತಿಗೆದಾರರಿಗೆ ನೀಡುತ್ತಾರೆ. ಆದರೆ, ಶಿಕ್ಷಕರ ಸೇವಾ ಪೂರೈಕೆ ಮಾಡಲು ಸೆಕ್ಯೂರಿಟಿ ಏಜೆನ್ಸಿ ನೀಡಲು ಯಾವ ಮಾನದಂಡ ಉಪಯೋಗಿಸಿದ್ದಾರೆ’ ಎಂದು ಶಾಸಕ ಎಸ್. ಸುರೇಶ್ ಕುಮಾರ್ ಅವರು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸಿದ್ದಾರೆ.

ಬಿಬಿಎಂಪಿ ಸುದ್ದಿ

‘ಶಸ್ತ್ರಾಸ್ತ್ರ ಕಳ್ಳಸಾಗಣೆ ಜಾಲ ಮ್ಯಾನ್ಮಾರ್ ಗಡಿಯಲ್ಲಿ ಸಕ್ರಿಯ’

ಪ್ರಜಾವಾಣಿ ವಾರ್ತೆ

ಗುವಾಹಟಿ: ನೆರೆಯ, ಸಂಘರ್ಷಪೀಡಿತ ಮ್ಯಾನ್ಮಾರ್‌ಗೆ ಹೊಂದಿಕೊಂಡಿರುವ ಗಡಿಯಲ್ಲಿ ಶಸ್ತ್ರಾಸ್ತ್ರ ಕಳ್ಳಸಾಗಣೆ ಮಾಡುವ ಜಾಲವೊಂದು ಸಕ್ರಿಯವಾಗಿದೆ. ಈ ಜಾಲವು ಮಣಿಪುರ ಮತ್ತು ಮಿಜೋರಾಂಗೆ ಶಸ್ತ್ರಾಸ್ತ್ರ ಸಾಗಿಸಿ, ಸಂಗ್ರಹಿಸುತ್ತಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹೇಳಿದೆ.

ಕಳ್ಳಸಾಗಣೆ ಮೂಲಕ ಸಾಗಿಸಲಾಗುವ ಶಸ್ತ್ರಾಸ್ತ್ರಕ್ಕೆ ಸಂಬಂಧಿಸಿ ಹವಾಲಾ ಮಾರ್ಗದ ಮೂಲಕ ಹಣ ಪಾವತಿಸಲಾಗುತ್ತಿದೆ ಎಂಬುದು ಸಹ ತನಿಖೆ ವೇಳೆ ಗೊತ್ತಾಗಿದೆ ಎಂದು ಎನ್‌ಐಎ ತಿಳಿಸಿದೆ.

ಹಾಸ್ಟೆಲ್ ನಿರ್ವಹಣೆ ಲೋಪ: ನೋಟಿಸ್

ಹಾಜರಾತಿ, ಆಹಾರ ವಿತರಣೆಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಕಲಾ ಕಾಲೇಜು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ನಿರ್ವಹಣೆಯಲ್ಲಿ ಲೋಪ ಎಸಗಿರುವ ಆರೋಪದಡಿ ಸಮಾಜ ಕಲ್ಯಾಣ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಜಂಟಿ ನಿರ್ದೇಶಕ ಲಕ್ಷ್ಮಣ್ ರೆಡ್ಡಿ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಸಹಾಯಕ ನಿರ್ದೇಶಕ ಹರೀಶ್ ರೆಡ್ಡಿ ಅವರಿಗೆ ಇಲಾಖೆ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ.

ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರು ಏಪ್ರಿಲ್ 27ರಂದು ವಿದ್ಯಾರ್ಥಿ ನಿಲಯಕ್ಕೆ ದಿಢೀರ್ ಭೇಟಿ ನೀಡಿದ್ದರು. ಆಗ, ವಿದ್ಯಾರ್ಥಿ ನಿಲಯದ ನಿರ್ವಹಣೆಯಲ್ಲಿ ವ್ಯಾಪಕ ಲೋಪಗಳಿರುವುದು ಕಂಡುಬಂದಿತ್ತು.

ವಿದ್ಯಾರ್ಥಿ ನಿಲಯದ ಮುಂಭಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸದೇ ಇರುವುದು, ಅಡುಗೆ ಸಿಬ್ಬಂದಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದಿರುವುದು, ಕೀಲಿ ಕೈಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳದಿರುವುದು, ಭದ್ರತಾ ಸಿಬ್ಬಂದಿಗೆ ವೇತನ ಪಾವತಿ ರಸೀದಿ ನೀಡದಿರುವುದು, ಸಿವಿಲ್ ಕಾಮಗಾರಿ ನಡೆಯುತ್ತಿದ್ದರೂ ಇಬ್ಬರೂ ಅಧಿಕಾರಿಗಳು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸದೇ ಇರುವುದು ಪ್ರಧಾನ ಕಾರ್ಯದರ್ಶಿ ಭೇಟಿ ವೇಳೆ ಪತ್ತೆಯಾಗಿತ್ತು.

ಈ ಸಂಬಂಧ ಲಕ್ಷ್ಮಣ್ ರೆಡ್ಡಿ ಮತ್ತು ಹರೀಶ್ ರೆಡ್ಡಿ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಕಚೇರಿಯ ಅಧಿಕಾರಿಗಳ ತಂಡವೊಂದು ಏ. 29ರಂದು ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿತ್ತು.

ಹಿಂದಿನ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದ ವಿಷಯಗಳ ಕುರಿತು ಕ್ರಮ ಕೈಗೊಳ್ಳದೇ ಇರುವುದರ ಜತೆಗೆ ಮತ್ತಷ್ಟು ಲೋಪಗಳಿರುವುದು ಅಧಿಕಾರಿಗಳ ತಂಡದ ತಪಾಸಣೆಯಲ್ಲಿ ಪತ್ತೆಯಾಗಿದೆ. ಈ ಕಾರಣದಿಂದ ಜಂಟಿ ನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತುಕ್ರಮ ಜರುಗಿಸಲು ಮುಂದಾಗಿರುವ ಇಲಾಖೆ, ಕಾರಣ ಕೇಳಿ ಇಬ್ಬರಿಗೂ ಗುರುವಾರ (ಮೇ 23) ಕಾರಣ ಕೇಳುವ ನೋಟಿಸ್ ಜಾರಿಗೊಳಿಸಿದೆ.

‘ಮೆನು ಪ್ರಕಾರ ಆಹಾರ ಸಿದ್ಧಪಡಿಸದೇ ಇರುವುದು, ಮಧ್ಯಾಹ್ನ ವಿಳಂಬವಾಗಿ ಅಡುಗೆ ಸಿದ್ಧಪಡಿಸುತ್ತಿರುವುದು, ಮಕ್ಕಳ ಹಾಜರಾತಿ ಪಡೆಯದಿರುವುದು, ಸೋಪ್ ಕಿಟ್‌ಗಳನ್ನು ವಿತರಿಸದೇ ಉಳಿಸಿಕೊಂಡಿರುವುದು ಮತ್ತು ದಾಸ್ತಾನು ವಹಿ ನಿರ್ವಹಿಸದೇ ಇರುವುದು ಸೇರಿದಂತೆ ಹಲವು ಲೋಪಗಳು ಅಧಿಕಾರಿಗಳ ತಂಡದ ತಪಾಸಣೆಯಲ್ಲಿ ಪತ್ತೆಯಾಗಿವೆ’ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಕೃಷ್ಣಾ ನೀರು ತಡೆದ ಮಹಾರಾಷ್ಟ್ರ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದಲ್ಲಿ ಮೂರ್ನಾಲ್ಕು ದಿನಗಳಿಂದ ಸುರಿದ ಮಳೆಯಿಂದಾಗಿ ತುಂಬಿರುವ ರಾಜಾಪುರ ಬ್ಯಾರೇಜ್‌ನಿಂದ ಕರ್ನಾಟಕಕ್ಕೆ ನೈಸರ್ಗಿಕವಾಗಿ ಹರಿದು ಬರುತ್ತಿದ್ದ ನೀರನ್ನು ಮಹಾರಾಷ್ಟ್ರ ಸರ್ಕಾರ ತಡೆದಿರುವುದಕ್ಕೆ ಗಡಿಯಲ್ಲಿ ಆಕ್ರೋಶ ವ್ಯಕ್ತವಾಗಿದೆ.

ರಾಜಾಪುರ ಬ್ಯಾರೇಜ್ ತುಂಬಿದ್ದರಿಂದ 2,500 ಕ್ಯುಸೆಕ್ ಹೆಚ್ಚುವರಿ ನೀರು ಕಳೆದೆರಡು ದಿನಗಳಿಂದ ಕೃಷ್ಣಾ ನದಿಗೆ ಹರಿದುಬರುತ್ತಿತ್ತು. ಭಾನುವಾರ ಈ ಬ್ಯಾರೇಜ್‌ಗೆ ಗೇಟ್ ಅಳವಡಿಸಿಕೊಳ್ಳುವ ಮೂಲಕ ರಾಜ್ಯಕ್ಕೆ ಹರಿದುಬರುತ್ತಿದ್ದ ನೀರನ್ನು ಮಹಾರಾಷ್ಟ್ರ ಸರ್ಕಾರ ತಡೆದಿದೆ. ಆದರೆ, ಕರ್ನಾಟಕಕ್ಕೆ ಬರುತ್ತಿದ್ದ ನೀರನ್ನು ಏಕೆ ತಡೆಯಲಾಗಿದೆ ಎಂದು ಅಲ್ಲಿನ ಸರ್ಕಾರ ಸ್ಪಷ್ಟಪಡಿಸಿಲ್ಲ.

ನೀರಾವರಿ ಇಲಾಖೆ, ಪೊಲೀಸ್ ಇಲಾಖೆಯ ತಲಾ ಇಬ್ಬರು ಸಿಬ್ಬಂದಿಯನ್ನು ಅಲ್ಲಿ ನಿಯೋಜಿಸಿದ ಮಹಾರಾಷ್ಟ್ರ ಸರ್ಕಾರ, ಕರ್ನಾಟಕಕ್ಕೆ ನೀರು ಹರಿಯದಂತೆ ನಿಗಾ ವಹಿಸಿದೆ.

ರಾಜಾಪುರ ಬ್ಯಾರೇಜ್ ಮೂಲಕ ಕೃಷ್ಣಾ ನದಿಗೆ ಹೆಚ್ಚುವರಿ ನೀರು ಬಿಟ್ಟಿದ್ದು ಅಥವಾ ತಡೆಹಿಡಿದ ಕುರಿತು ಅಧಿಕೃತ ಮಾಹಿತಿ ಇಲ್ಲ ಎಂದು ಚಿಕ್ಕೋಡಿಯ ಉಪವಿಭಾಗಾಧಿಕಾರಿ ಮಹೆಬೂಬಿ ಹೇಳಿದ್ದಾರೆ.

‘ಅಲ್ಲಿನ ಸರ್ಕಾರಕ್ಕೆ ರಾಜ್ಯ ಸರ್ಕಾರ ಎಚ್ಚರಿಕೆ ನೀಡಬೇಕು. ಬ್ಯಾರೇಜ್ ತುಂಬಿದ ನಂತರ ಮಳೆಗಾಲದಲ್ಲಿ ಏಕಕಾಲಕ್ಕೆ ಹೆಚ್ಚಿನ ನೀರು ಬಿಟ್ಟು, ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದರೆ ಅದಕ್ಕೆ ಮಹಾರಾಷ್ಟ್ರವೇ ನೇರ ಹೊಣೆ. ಈ ವಿಷಯವನ್ನು ಮಹಾರಾಷ್ಟ್ರ ಸರ್ಕಾರದ ಗಮನಕ್ಕೆ ತರಬೇಕು’ ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯ ಅಧ್ಯಕ್ಷ ಅಶೋಕ ಚಂದರಗಿ ಅವರು ಒತ್ತಾಯಿಸಿದ್ದಾರೆ.



ಕೊಪ್ಪಳದಲ್ಲಿ ನಡೆದ ರಾಜ್ಯಮಟ್ಟದ ಆಹ್ವಾನಿತ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾನುವಾರ ಚಾಂಪಿಯನ್ ಆದ ಬೆಂಗಳೂರಿನ ವಿಜಯನಗರ ತಂಡದ ಆಟಗಾರರು ಹಾಗೂ ಸಿಬ್ಬಂದಿ —ಪ್ರಜಾವಾಣಿ ಚಿತ್ರ

ಬಾಲ್ ಬ್ಯಾಡ್ಮಿಂಟನ್ ಟೂರ್ನಿ: ಬೆಂಗಳೂರು ತಂಡ ಚಾಂಪಿಯನ್

ಪ್ರಜಾವಾಣಿ ಚಿತ್ರ

ಕೊಪ್ಪಳ: ಕಠಿಣ ಸವಾಲು ಎದುರಾದರೂ ಪ್ರಬಲ ಹೋರಾಟ ತೋರಿದ ಬೆಂಗಳೂರಿನ ವಿಜಯನಗರ ತಂಡ ರಾಜ್ಯಮಟ್ಟದ ಆಹ್ವಾನಿತ ಪುರುಷರ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.

ಇಲ್ಲಿನ ತಾಲ್ಲೂಕಿನ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ವಿಜಯನಗರ ತಂಡ 35–31, 35–29ರಲ್ಲಿ ಬೆಂಗಳೂರಿನ ಚಿನ್ಮಯ ಕ್ಲಬ್ ಎದುರು ಜಯಭೇರಿ ಮೊಳಗಿಸಿ ₹ 25 ಸಾವಿರ ಬಹುಮಾನ ತನ್ನದಾಗಿಸಿಕೊಂಡಿತು. ರನ್ನರ್ಸ್ ಅಪ್ ತಂಡಕ್ಕೆ ₹ 20 ಸಾವಿರ ಬಹುಮಾನ ನೀಡಲಾಯಿತು. ಬೆಂಗಳೂರಿನ ಆರ್. ಆರ್. ನಗರ ತಂಡ ಮೂರನೇ ಸ್ಥಾನ ಹಾಗೂ ದಾವಣಗೆರೆಯ ತಂಡ ನಾಲ್ಕನೇ ಸ್ಥಾನ ಗಳಿಸಿತು.

ಪೊಲೀಸರಿಗೆ ಹೆದರಿ ನೀರಿಗೆ ಹಾರಿದ ವ್ಯಕ್ತಿ ಸಾವು

ಕನಕಪುರ: ಬೂದಿಗುಪ್ಪೆ ಗ್ರಾಮದಲ್ಲಿ ಭಾನುವಾರ ಪೊಲೀಸರನ್ನು ಕಂಡು ಹೆದರಿದ ವ್ಯಕ್ತಿಯೊಬ್ಬರು ಅವರಿಂದ ತಪ್ಪಿಸಿಕೊಳ್ಳುವ ಭರದಲ್ಲಿ ನೀರಿಗೆ ಹಾರಿ ಸಾವಿಗೀಡಾಗಿದ್ದಾರೆ.

ಬೂದಿಗುಪ್ಪೆ ಕಾಳಯ್ಯ (40) ಮೃತ ವ್ಯಕ್ತಿ. ಅವರಿಗೆ ಈಜು ಬರುತ್ತಿರಲಿಲ್ಲ. ಬೆಂಗಳೂರಿನ ಐಟಿಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

ಭಾನುವಾರ ರಜೆ ಕಳೆಯಲು ಕಾಳಯ್ಯ ಬರಡನಹಳ್ಳಿ ರಸ್ತೆಯ ಚಿಕ್ಕಹೊಳೆ ದಂಡೆ ಮೇಲೆ ಸ್ನೇಹಿತರೊಂದಿಗೆ ಸೇರಿದ್ದರು. ಇದೇ ಮಾರ್ಗವಾಗಿ ಬರಡನಹಳ್ಳಿಗೆ ಹೋಗುತ್ತಿದ್ದ ಪೊಲೀಸರನ್ನು ನೋಡಿದ ಕಾಳಯ್ಯ ಹಾಗೂ ನಾಲ್ವರು ಸ್ನೇಹಿತರು ಅವರಿಂದ ತಪ್ಪಿಸಿಕೊಳ್ಳಲು ಚಿಕ್ಕಹೊಳೆಗೆ ಧುಮಿಕಿದ್ದಾರೆ.

ಕಾಳಯ್ಯ ಅವರಿಗೆ ಈಜಲು ಬಾರದೆ ನೀರಿನಲ್ಲಿ ಮುಳುಗಿದ್ದಾರೆ. ಪೊಲೀಸರೇ ಅವರನ್ನು ರಕ್ಷಿಸಿ ದಯಾನಂದ ಸಾಗರ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

‘ರಸ್ತೆಗೆ ಡಾಂಬರು ಹಾಕಿಸಿ’



ಕರಿಹೋಬನಹಳ್ಳಿಯಿಂದ ಬೃಂದಾವನ ನಗರ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ

ಯಶವಂತಪುರ ಹೋಬಳಿಯ ಕರಿಹೋಬನಹಳ್ಳಿ ವಾರ್ಡ್ ಸಂಖ್ಯೆ 40ಕ್ಕೆ ಸೇರಿದ ಬೃಂದಾವನ ನಗರ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಈ ಲೇಔಟ್‌ನಲ್ಲಿ ಸುಮಾರು 70ಕ್ಕೂ ಹೆಚ್ಚು ಮನೆಗಳಿದ್ದು, ಕಳೆದ ಎರಡು ವರ್ಷಗಳಿಂದ ಇಲ್ಲಿನ ರಸ್ತೆಗೆ ಡಾಂಬರೀಕರಣ ಮಾಡಿಲ್ಲ. ಮಳೆಗಾಲ ಬಂದರೆ ರಸ್ತೆಯಲ್ಲ ಕೆಸರು ಗದ್ದೆಯಾಗುತ್ತದೆ. ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗುತ್ತಿದೆ. ಈ ಭಾಗಕ್ಕೆ ಯಾವುದೇ ಬಾಡಿಗೆ ಕಾರು ಮತ್ತು ಆಟೊ ರಿಕ್ಷಾದವರು ಬರುವುದಿಲ್ಲ. ಆದ್ದರಿಂದ, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಇಲ್ಲಿನ ರಸ್ತೆಗೆ ಡಾಂಬರೀಕರಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು.

ವಿ. ಶಿವಕುಮಾರ್, ಕರಿಹೋಬನಹಳ್ಳಿ

‘ಒಳಚರಂಡಿ ಕೊಳವೆ ತೆರವುಗೊಳಿಸಿ’

ಬಿಟಿಎಂ ಲೇಔಟ್‌ನ ಎರಡನೇ ಹಂತದ 38ನೇ ತಿರುವಿನಲ್ಲಿ ಸುಮಾರು 15 ದಿನಗಳ ಹಿಂದೆ ಒಳಚರಂಡಿಯೊಂದರ ದುರಸ್ತಿ ಕಾಮಗಾರಿ ನಡೆದಿದೆ. ತದನಂತರ ಇಲ್ಲಿ ಹಾಳಾಗಿರುವ ಕೊಳವೆಯನ್ನು ಹಾಗೆ ಬಿಡಲಾಗಿದೆ. ಇದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ಸಮಸ್ಯೆಯಾಗಿದೆ. ಆದ್ದರಿಂದ ಬಿಬಿಎಂಪಿ ಆದಷ್ಟು ಬೇಗ ಇದನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ಎಂ.ಜೆ.ಅಭಿಷೇಕ್, ಬಿಟಿಎಂ ಲೇಔಟ್



ಬಿಟಿಎಂ ಲೇಔಟ್‌ನಲ್ಲಿ ರಸ್ತೆಯಲ್ಲಿಯೇ ಇರುವ ಒಳಚರಂಡಿ ಕೊಳವೆ

‘ರಸ್ತೆ ಗುಂಡಿ ಮುಚ್ಚಿ’



ಎಂ.ಎಸ್. ರಾಮಯ್ಯ ಕಾಲೇಜಿನ ಹಿಂಭಾಗದ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳು

ಎಂ.ಎಸ್. ರಾಮಯ್ಯ ಕಾಲೇಜಿನ ಹಿಂಭಾಗದ ರಸ್ತೆಯಲ್ಲಿ (ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸಂಪರ್ಕಿಸುವ ರಸ್ತೆ) ಗುಂಡಿಗಳಾಗಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ, ವಾಹನ ಸಂಚಾರಕ್ಕೆ ಅನನಕೂಲವಾಗಿದೆ. ಮಳೆ ಬಂದಾಗ ಗುಂಡಿಯಲ್ಲಿ ನೀರು ತುಂಬಿಕೊಂಡರೆ ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ರಸ್ತೆಯಲ್ಲಿರುವ ಗುಂಡಿ ಮುಚ್ಚುವಂತೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಎಂ.ಎಸ್. ಕೃಷ್ಣಮೂರ್ತಿ, ಎಂ.ಎಸ್. ರಾಮಯ್ಯನಗರ

‘ಮಲ್ಲತ್ತಹಳ್ಳಿ: ರಸ್ತೆ ಸರಿಪಡಿಸಿ’



ಮಲ್ಲತ್ತಹಳ್ಳಿ ಮುಖ್ಯರಸ್ತೆಯಿಂದ ಬಾಲಾಜಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ

ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಮಲ್ಲತ್ತಹಳ್ಳಿ ಮುಖ್ಯರಸ್ತೆಯಿಂದ ಬಾಲಾಜಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದು ಸಂಪೂರ್ಣವಾಗಿ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆ ಹಾಳಾದ ಪರಿಣಾಮ ಸಂಚಾರ ದಟ್ಟಣೆಯ ಸಮಸ್ಯೆ ಆಗುತ್ತಿದೆ. ಜೊತೆಗೆ ಅಪಘಾತಗಳ ಸಂಖ್ಯೆ ಹೆಚ್ಚಿದ್ದು, ದೊಡ್ಡ ಅನಾಹುತಗಳು ಸಂಭವಿಸುವ ಮುನ್ನ ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಂ. ಲಿಂಗರಾಜು ಗೌಡ, ಮಲ್ಲತಹಳ್ಳಿ



ಮಡಿವಾಳ ರಸ್ತೆಯನ್ನು ಅಗೆದು ಹಾಗೆಯೇ ಬಿಟ್ಟಿರುವುದು

‘ಅಗೆದ ರಸ್ತೆ ದುರಸ್ತಿಗೊಳಿಸಿ’

ಬಿಟಿಎಂ ಬಡಾವಣೆಯ ಮಡಿವಾಳ ನ್ಯೂ ಎಕ್ಸ್‌ಟೆನ್ಷನ್‌ನ 5ನೇ ಬಿ ಕ್ರಾಸ್‌ನ ರಸ್ತೆಯನ್ನು ಕುಡಿಯುವ ನೀರಿನ ಪೈಪ್ ಹಾಕಲು ಅಗೆದು ಹಾಕಲಾಗಿದೆ. ಮಳೆಗಾಲ ಪ್ರಾರಂಭವಾಗಿರುವ ಸಂದರ್ಭದಲ್ಲಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ, ಸ್ಥಳೀಯ ನಿವಾಸಿಗಳು ತಮ್ಮ ಮನೆಗಳಿಗೆ ತೆರಳುವುದಕ್ಕೂ ಹರಸಾಹಸ ಪಡಬೇಕಾದ ಪರಿಸ್ಥಿತಿ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಅಗೆದಿರುವ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಬೇಕು.

ಜಿ.ಎ. ಅಬ್ದುಲ್ ಶವಾದ್, ಮಡಿವಾಳ

‘ಪಾದಚಾರಿಮಾರ್ಗ: ಕುಸಿದ ಕಾಂಕ್ರೀಟ್ ಸ್ಲ್ಯಾಬ್’

ಕೋಣನಕುಂಟೆ ರಸ್ತೆಯ ಪ್ರೆಸ್ಟಿಜ್ ಫಾಲ್ಕನ್ ಸಿಟಿ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ಕೈರುಚಿ ಹೋಟೆಲ್ ಕಡೆಗೆ ಹೋಗುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕುಸಿದು ಬಿದ್ದಿವೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ರಾತ್ರಿ ಸಮಯದಲ್ಲಿ ಯಾರಾದರೂ ಬಿದ್ದು ಅನಾಹುತ ಮಾಡಿಕೊಳ್ಳುವ ಮುಂಚಿತವಾಗಿ ಈ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ನಾಗರಾಜ್ ಸಿ.ಎಸ್., ಕೋಣನಕುಂಟೆ



ಕೋಣನಕುಂಟೆ ಪಾದಚಾರಿ ಮಾರ್ಗದ ಸ್ಲ್ಯಾಬ್‌ಗಳು ಕುಸಿದಿರುವುದು



ಯುವತಿಯರಿಗೆ 'ಸಾಧನಾ' ಯುವಕರಿಗೆ 'ತಪಸ್'

ರೂಪಾ ಕೆ.ಎಂ.

ಗ್ರಾಮೀಣ ಹಿನ್ನೆಲೆಯ ಬಡ ಕುಟುಂಬದ ಪ್ರತಿಭಾವಂತ ಹೆಣ್ಣುಮಕ್ಕಳಿಗೆ ವೈದ್ಯರಾಗುವ ಕನಸಿದ್ದರೆ, ಅಂಥವರಿಗೆ ನೆರವಾಗುತ್ತದೆ ರಾಷ್ಟ್ರೋತ್ಥಾನ ಪರಿಷತ್‌ನ 'ಸಾಧನಾ' ಯೋಜನೆ.

ಪಿಯು ಮತ್ತು ನೀಟ್ ಕೋಚಿಂಗ್ ಉಚಿತವಾಗಿ ನೀಡುವ ಮೂಲಕ ಎಂಬಿಬಿಎಸ್‌ಗೆ ತಯಾರು ಮಾಡುತ್ತದೆ ಈ ಯೋಜನೆ. 2017ರ ಶೈಕ್ಷಣಿಕ ವರ್ಷದಿಂದ ಆರಂಭಗೊಂಡ ಈ ಯೋಜನೆಯಲ್ಲಿ 246 ವಿದ್ಯಾರ್ಥಿನಿಯರು ಉಚಿತ ಶಿಕ್ಷಣ ಪಡೆದಿದ್ದಾರೆ. 58 ಮಕ್ಕಳಿಗೆ ಎಂಬಿಬಿಎಸ್‌ನಲ್ಲಿ ಮೆರಿಟ್ ಸೀಟು ಸಿಕ್ಕಿದೆ. ಈ ಯೋಜನೆಯ ಪ್ರಯೋಜನ ಪಡೆದು, ಎಂಬಿಬಿಎಸ್ ಯಶಸ್ವಿಯಾಗಿ ಮುಗಿಸಿದ ಮೊದಲ ಬ್ಯಾಚ್ ವಿದ್ಯಾರ್ಥಿನಿಯರು ರಾಜ್ಯದ ನಾನಾ ಭಾಗಗಳಿಗೆ ಸೇರಿದವರಾಗಿದ್ದಾರೆ.

ಅರ್ಹತೆ ಏನು?

ಎಸ್ಸೆಸ್ಸೆಲ್ಸಿಯಲ್ಲಿ ಓದುತ್ತಿರುವ ಬಡತನ ಹಿನ್ನೆಲೆಯ 9ನೇ ತರಗತಿಯಲ್ಲಿ ಶೇ 85ರಷ್ಟು ಅಂಕ ಪಡೆದ ವಿದ್ಯಾರ್ಥಿನಿಯರಾಗಿರಬೇಕು. ಅಕ್ಟೋಬರ್‌ನಲ್ಲಿ ಅರ್ಜಿ ನೀಡಲಾಗುತ್ತದೆ. ಕುಟುಂಬದ ಆದಾಯ 2 ಲಕ್ಷ ಮಿತಿಯಲ್ಲಿರಬೇಕು.

ಪ್ರಕ್ರಿಯೆ ಹೇಗಿರಲಿದೆ?

ರಾಜ್ಯದಾದ್ಯಂತ ಸುಮಾರು ಎಂಟರಿಂದ 9 ಸಾವಿರ ಅರ್ಜಿಗಳು ಸಲ್ಲಿಕೆಯಾಗುತ್ತವೆ. 50 ಕೇಂದ್ರಗಳಲ್ಲಿ ಡಿಸೆಂಬರ್ 25ರಂದು ಮೊದಲ ಹಂತದ ಪ್ರವೇಶ ಪರೀಕ್ಷೆ ನಡೆಯಲಿದ್ದು, 2ನೇ ಹಂತದ ಪ್ರವೇಶ ಪರೀಕ್ಷೆ ಜನವರಿ 26ರಂದು ಇರಲಿದೆ.

ಪರೀಕ್ಷೆ ಬರೆದು ಪಾಸಾದವರ ಮನೆ ಮನೆಗೆ ತೆರಳಿ ನೀಡಿರುವ ಮಾಹಿತಿಯನ್ನು ವೈಯಕ್ತಿಕವಾಗಿ ಪರಿಶೀಲನೆ ಮಾಡುತ್ತದೆ ಪರಿಷತ್. ನಂತರ 200 ಮಂದಿಯನ್ನು ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ. ಅವರಿಗೆ ಒಂದು ವಾರಗಳ ಕಾಲ ಮಾದರಿ ತರಗತಿ ನೀಡಿ, ಪರೀಕ್ಷೆ ನಡೆಸಲಾಗುತ್ತದೆ. ಅದರಲ್ಲಿ 40ರಿಂದ 50 ಮಂದಿಯನ್ನು ಅಂತಿಮವಾಗಿ ಆಯ್ಕೆ ಮಾಡಲಾಗುತ್ತದೆ.

ಯಾವ ಸೌಲಭ್ಯ ಸಿಗಲಿದೆ?

ಆಯ್ಕೆ ಆದವರಿಗೆ ಬೆಂಗಳೂರಿನ ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನಲ್ಲಿ ಪಿಯು ಶಿಕ್ಷಣದ ಜತೆಗೆ, ನೀಟ್, ಸಿಇಟಿ ಕೋಚಿಂಗ್ ಉಚಿತವಾಗಿ ನೀಡಲಾಗುತ್ತದೆ. ವಸತಿ ನಿಲಯದ ಸೌಲಭ್ಯವೂ ಉಚಿತವಾಗಿರುತ್ತದೆ.

ಇದರ ಜತೆಗೆ ಶಿಕ್ಷಕರಾಗಬೇಕೆಂಬ ಕನಸು ಹೊತ್ತ ವಿದ್ಯಾರ್ಥಿನಿಯರಿಗೆ ಪಿಯುಸಿ, ಬಿಎಸ್‌ಸಿ ಮತ್ತು ಇಂಟಿಗ್ರೇಟೆಡ್ ಬಿ.ಇಡಿ ಶಿಕ್ಷಣವನ್ನು ನೀಡಲಾಗುತ್ತದೆ. ಕೃಷಿ, ತಾಂತ್ರಿಕ, ಫಾರ್ಮಸಿ ಮತ್ತು ಬಯೋ ಇನ್‌ಫಾರ್ಮೇಷನ್ ಮುಂತಾದ ವಿಷಯಗಳಲ್ಲಿ ಅಧ್ಯಯನ ನಡೆಸಲು ಅವಕಾಶ ನೀಡುತ್ತದೆ.

'ತಿಪಟೂರಿನ ಮಾದಿಹಳ್ಳಿಯಂಥ ಕುಗ್ರಾಮದಿಂದ ಬಂದ ನನಗೆ ಏನು ಓದಬೇಕು ಎಂಬುದಕ್ಕೆ ಸೂಕ್ತ ಮಾರ್ಗದರ್ಶನ ಇರಲಿಲ್ಲ. ರಾಷ್ಟ್ರೋತ್ಥಾನ ನೀಡಿದ್ದು ಸುವರ್ಣ ಅವಕಾಶ. ಪರಿಷತ್ ನನ್ನನ್ನು ಕುಟುಂಬದಂತೆ ಎರಡು ವರ್ಷಗಳ ಕಾಲ ಸಲಹಿ ಉತ್ತಮ ತರಬೇತಿ ನೀಡಿತು. ಇದರಿಂದಲೇ ಈ ಹಂತಕ್ಕೆ ಬರಲು ಸಾಧ್ಯವಾಯಿತು' ಎನ್ನುತ್ತಾರೆ 'ಸಾಧನಾ' ಯೋಜನೆಯ ಫಲಾನುಭವಿ ತಿಪಟೂರಿನ ಎಂಬಿಬಿಎಸ್ ಪದವೀಧರೆ ಡಾ.ವಿದ್ಯಾಶ್ರೀ ಎಂ.ವೈ.

'ತಪಸ್'ನ ಆಶ್ರಯದಲ್ಲಿ ಯುವಕರು

2012ರಲ್ಲಿ ಪ್ರಾರಂಭಗೊಂಡ 'ತಪಸ್' ಯೋಜನೆ ಪ್ರತಿಭಾವಂತ ಗಂಡು ಮಕ್ಕಳಿಗಾಗಿ ಇದೆ. ವಸತಿಸಹಿತ ಊಟ, ಪಿಯು ಶಿಕ್ಷಣದ ಜೊತೆಗೆ ಐಐಟಿ - ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡಲಾಗುತ್ತಿದೆ. ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ ವಿಷಯಗಳ ಪಠ್ಯಗಳನ್ನು ಸಿದ್ಧಪಡಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಮಕ್ಕಳಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರತಿಷ್ಠಿತ ಬೇಸ್ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯವನ್ನು ಮಾಡಲಾಗುತ್ತಿದೆ. ಈವರೆಗೆ 366 ವಿದ್ಯಾರ್ಥಿಗಳಲ್ಲಿ 36 ಐಐಟಿ ಪ್ರವೇಶ ಪಡೆದಿದ್ದು, 92 ಮಂದಿ ಎನ್‌ಐಟಿ ಸೀಟು ಗಳಿಸಿದ್ದಾರೆ.

ಆಯ್ಕೆಯಾದ ವಿದ್ಯಾರ್ಥಿಗಳು ಬೆಂಗಳೂರಿನ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ತರಬೇತಿ ಪಡೆಯಲಿದ್ದಾರೆ.

ಹೆಚ್ಚಿನ ಮಾಹಿತಿಗೆ: 94812 01144, https://www.tapassaadhana.org/

ಎಸ್ಸೆಸ್ಸೆಲ್ಸಿ, ಪಿಯುಸಿ ನಂತರ ಮುಂದೇನು ಎಂಬ ಪ್ರಶ್ನೆ ವಿದ್ಯಾರ್ಥಿಗಳಿಗೆ ಎದುರಾದಾಗ ಕೌಶಲಾಧಾರಿತ ಶಿಕ್ಷಣ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ ಎಂಬುದನ್ನು ಮರೆಯಬಾರದು.

ಐ.ಟಿ.ಐ ನಡೆ ಉದ್ಯೋಗದ ಕಡೆ



ದಾವಣಗೆರೆಯ ಸರ್ಕಾರಿ ಐ.ಟಿ.ಐನಲ್ಲಿ ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್ ವೃತ್ತಿಯ ತರಬೇತುದಾರರು ಪ್ರಾಯೋಗಿಕಾ ಪಾಠದಲ್ಲಿ ನಿರತರಾದರು.

ಐ.ಟಿ.ಐ ಶಿಕ್ಷಣದಲ್ಲಿನ ಸೌಲಭ್ಯಗಳು

- ವಿದ್ಯಾರ್ಥಿಗಳಿಗೆ ಪುಸ್ತಕ, ಟೂಲ್-ಕಿಟ್, ಲ್ಯಾಪ್-ಟಾಪ್, ಶೂ ಇತರೆ ಸಾಮಗ್ರಿಗಳ ವಿತರಣೆ ಹಾಗೂ ಕಂಪ್ಯೂಟರ್ ಶಿಕ್ಷಣ.
- ವಿವಿಧ ಕೈಗಾರಿಕೋದ್ಯಮಗಳಿಗೆ ಭೇಟಿ/ಉದ್ಯೋಗ ಮೇಳ/ಕ್ಯಾಂಪಸ್
- ಸುರಕ್ಷಿತ ಕಾರ್ಯಕ್ರಮಗಳು ಏರ್ಪಡಿಸಲಾಗುವುದು.
- ಅಂಪ್ರೆಂಟಿಸ್/ಸಿಐಟಿಎಸ್ (ಡಿ.ಇಡಿ ಅಥವಾ ಬಿ.ಇಡಿ ಮಾದರಿಯ) ತರಬೇತಿ. ನೇರವಾಗಿ 2ನೇ ವರ್ಷಕ್ಕೆ ಡಿಪ್ಲೊಮಾ ಪ್ರವೇಶ.

ಡಾ. ಕೊಟ್ರೇಶ್ ಎಂ, ಹರಪನಹಳ್ಳಿ

ಮಕ್ಕಳು ಎಂಥದ್ದೇ ವಿದ್ಯಾಭ್ಯಾಸ ಕೈಗೊಂಡರೂ ಜೀವನಕ್ಕೆ ಹಾಗೂ ಕುಟುಂಬ ನಿರ್ವಹಣೆಗೆ ಉದ್ಯೋಗ ಮುಖ್ಯವಾಗಿರುತ್ತದೆ. ಅಲ್ಪಾವಧಿಯಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ (ಐ.ಟಿ.ಐ) ಕೌಶಲಾಧಾರಿತ ಶಿಕ್ಷಣ ಬಹುಮುಖ್ಯ ಪಾತ್ರ ವಹಿಸುತ್ತದೆ. ಐ.ಟಿ.ಐ ತರಬೇತಿಯಲ್ಲಿ ಪ್ರಾಯೋಗಿಕಾ ಪಾಠಕ್ಕೆ ಆದ್ಯತೆ ಇದ್ದು, ಕೌಶಲ ಸಾಧಿಸಲು ಹೆಚ್ಚಿನ ಗಮನ ವಹಿಸಲಾಗುತ್ತದೆ.

ನಿಪುಣತೆ ಹೊಂದಿದ ಯುವಜನತೆಗೆ ಸಾರ್ವಜನಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ತುಂಬಾ ಬೇಡಿಕೆಯಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪಾದನೆಗೆ ಪ್ರಮುಖ ಸಂಪನ್ಮೂಲಗಳಲ್ಲಿ ಮಾನವ ಸಂಪನ್ಮೂಲವೂ ಅತಿ ಮುಖ್ಯವಾದುದು.

ಭಾರತವು ಅತೀ ಹೆಚ್ಚು ಮಾನವ ಸಂಪನ್ಮೂಲ ಹೊಂದಿರುವ ರಾಷ್ಟ್ರವಾಗಿದ್ದು, ಇಲ್ಲಿನ ಕೌಶಲಯುಕ್ತ ಮಾನವ ಸಂಪನ್ಮೂಲ, ತಂತ್ರಜ್ಞಾನ ಜಗತ್ತಿನಾದ್ಯಂತ ಪ್ರಖ್ಯಾತಿಯನ್ನು ಹೊಂದಿದೆ. ಸಂಪನ್ಮೂಲ ಹಾಗೂ ಸಾಮರ್ಥ್ಯ ಒಟ್ಟುಗೂಡಿಸಲು ಹಾಗೂ ಮಹಿಳೆಯರನ್ನು ಸ್ವಾವಲಂಬಿಗೊಳಿಸಲು ಐ.ಟಿ.ಐ ಶಿಕ್ಷಣವು ಮುಖ್ಯ ಪಾತ್ರವನ್ನು ವಹಿಸುತ್ತದೆ.

ಐ.ಟಿ.ಐ ತರಬೇತಿ, ಕೌಶಲ ತರಬೇತಿ ಯೋಜನೆಯಡಿ ಎಂಜಿನಿಯರಿಂಗ್ ಮತ್ತು ಎಂಜಿನಿಯರಿಂಗೇತರ ವಿಭಾಗಗಳಲ್ಲಿ 6 ತಿಂಗಳ, 1 ಮತ್ತು 2 ವರ್ಷದ ತರಬೇತಿ ಜತೆಗೆ ಅಲ್ಪಾವಧಿ ತರಬೇತಿಗಳನ್ನು ಉದ್ಯೋಗಾವಕಾಶಕ್ಕಾಗಿ ಕಲ್ಪಿಸಲಾಗಿದೆ.

ಮಹಿಳೆಯರಿಗೆ ಪ್ರತ್ಯೇಕವಾದ ತರಬೇತಿ ಇದ್ದು (ಉದಾ: ಇ.ಎಂ, ಎ.ಎ, ಡಿ.ಎಂಸಿ. ಇತರೆ) ತರಬೇತಿ ಪಡೆದ ಮಹಿಳೆಯರು ಪ್ರತಿಷ್ಠಿತ ಕಂಪನಿಗಳಲ್ಲಿ ಉತ್ತಮ ವೇತನದೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ಪುರುಷರೂ (ಉದಾ: ಫಿಟ್ಟರ್, ಎಲೆಕ್ಟ್ರಿಷಿಯನ್, ವೆಲ್ಡರ್, ಎಂ.ಎಂ.ವಿ, ಇತರೆ) ಕೇಂದ್ರ ಸರ್ಕಾರದ ರೈಲ್ವೆ, ಮೆಟ್ರೊ, ಪೆಟ್ರೋಲಿಯಂ, ಆರ್ಡಿನನ್ಸ್ ಕಂಪನಿ ಹಾಗೂ ಸೇನೆಯಲ್ಲಿಯೂ ಕಾರ್ಯನಿರ್ಹಿಸುತ್ತಿದ್ದಾರೆ.

ವಿವಿಧ ಕೈಗಾರಿಕೋದ್ಯಮಗಳಲ್ಲಿ ಅಂಪ್ರೆಂಟಿಸ್ ತರಬೇತಿ, ಡಿಪ್ಲೊಮಾ, ಜಿ.ಟಿ.ಟಿ.ಸಿ ಹಾಗೂ ಪದವಿ ಶಿಕ್ಷಣ ಪಡೆದು ಕಂಪನಿಗಳಲ್ಲಿ ಜನರಲ್ ಮ್ಯಾನೇಜರ್ ಹುದ್ದೆಗಳನ್ನು ಅಲಂಕರಿಸಿರುವ ಉದಾಹರಣೆಗಳಿವೆ.

ಸಿ.ಐ.ಟಿ.ಎಸ್ ತರಬೇತಿ ಪಡೆದು ತಾಂತ್ರಿಕ ಸಂಸ್ಥೆಗಳಲ್ಲಿ ಭೋಧಕರಾಗುವ ಅವಕಾಶವಿದೆ.

ಐಟಿಐ ಶಿಕ್ಷಣವು ಇತರೆ ತರಬೇತಿಗಳಿಗೆ ಹೋಲಿಸಿದಾಗ ಕಡಿಮೆ ಶುಲ್ಕವಿದ್ದು, ನಿತ್ಯ ಬಳಕೆ ವಸ್ತುಗಳ ದುರಸ್ತಿ ಹಾಗೂ ಸ್ವಯಂ ಉದ್ಯೋಗವನ್ನೂ ಕೈಗೊಳ್ಳಬಹುದಾಗಿದೆ.

ರಾಜ್ಯದಲ್ಲಿ ಸರ್ಕಾರಿ/ಖಾಸಗಿ ಸಂಸ್ಥೆಗಳಿದ್ದು, 270 ಸರ್ಕಾರಿ ಅದರಲ್ಲಿ 150 ಸಂಸ್ಥೆಗಳನ್ನು ಟಾಟಾ- ಟೆಕ್ನಾಲಾಜೀಸ್ ಲಿಮಿಟೆಡ್ ಜೊತೆ ಒಡಂಬಡಿಕೆ ಮಾಡಿಕೊಂಡು ಉನ್ನತಿಕರಿಸಲಾಗಿದೆ.


'ಉದ್ಯೋಗ' ಯೋಜನೆಯಡಿ 'ಇಂಡಸ್ಟ್ರೀ-4.0' ತರಬೇತಿ ಈ ಸಂಸ್ಥೆಗಳಲ್ಲಿ ನೀಡಲಾಗುತ್ತಿದೆ. ಪಠ್ಯಕ್ರಮ ಕೈಗಾರಿಕೆಗಳಿಗೆ ಪೂರಕವಾಗಿದ್ದು, ವಿಪುಲ ಉದ್ಯೋಗಾವಕಾಶಗಳಿಗೆ ದಾರಿಮಾಡಿ ಕೊಟ್ಟಿವೆ. ತರಬೇತಿಯು ಕೇಂದ್ರ ಸರ್ಕಾರದ ಕೌಶಲಾಭಿವೃದ್ಧಿ ಇಲಾಖೆಯ ತರಬೇತಿ ನಿರ್ದೇಶನಾಲಯದ ಕುಶಲ ತರಬೇತಿ ಯೋಜನೆಯಡಿ ಮಾನ್ಯತೆ ಹೊಂದಿದ್ದು, ಎನ್.ಎಸ್.ಕ್ಯೂ.ಎಫ್ ಜತೆ ಒಡಂಬಡಿಕೆ ಮಾಡಿಕೊಂಡಿದೆ. ಹಾಗಾಗಿ ಪ್ರಮಾಣಪತ್ರವು ಜಗತ್ತಿನಾದ್ಯಂತ ಮಾನ್ಯತೆಯನ್ನು ಹೊಂದಿದೆ.

ಪ್ರತಿವರ್ಷ ಆಗಸ್ಟ್‌ನಲ್ಲಿ ತರಬೇತಿ ಪ್ರಾರಂಭಿಸಿ ಜುಲೈನಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆಗಳು ತುಂಬಾ ಸರಳವಾಗಿದ್ದು, ಆನ್-ಲೈನ್ ಹಾಗೂ ಆಫ್-ಲೈನ್ ಪದ್ಧತಿಯಲ್ಲಿವೆ. ಪ್ರವೇಶ ಬಯಸುವ ಮಕ್ಕಳು ಮೇ ಹಾಗೂ ಜೂನ್‌ನಲ್ಲಿ ಸಮೀಪದ ಐ.ಟಿ.ಐ ಸಂಸ್ಥೆಗಳನ್ನು ಸಂಪರ್ಕಿಸಬಹುದು.

ಸಹಾಯಕ ನಿರ್ದೇಶಕರು (ತರಬೇತಿ) ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

ಫಾರೆಸ್ಟ್ರಿಗೆ ಉದ್ಯೋಗಾವಕಾಶಗಳು ಹೇಗಿವೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

• ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಮಾಡುತ್ತಿದ್ದು, ಬಿ.ಎಸ್ಸಿ (ಫಾರೆಸ್ಟ್ರಿ) ಕೋರ್ಸ್ ಮಾಡುವ ಆಸಕ್ತಿಯಿದೆ. ಆದರೆ, ಉದ್ಯೋಗಾವಕಾಶಗಳು ಹೇಗಿವೆ?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ (ವಿಜ್ಞಾನ) ನಂತರ, ಇತ್ತೀಚಿನ ವರ್ಷಗಳಲ್ಲಿ ಮುನ್ನೆಲೆಗೆ ಬಂದಿರುವ ನಾಲ್ಕು ವರ್ಷದ ಬಿ.ಎಸ್ಸಿ (ಅರಣ್ಯ ಶಾಸ್ತ್ರ) ಕೋರ್ಸ್ ಮುಖಾಂತರ ಆಕರ್ಷಕವಾದ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬಹುದು. ಜಾಗತಿಕ ತಾಪಮಾನದ ಏರಿಕೆ ಮತ್ತು ಪರಿಸರ ವ್ಯವಸ್ಥೆಯ ಬಗ್ಗೆ ಕಾಳಜಿ, ವನ್ಯಜೀವಿಗಳ ಮೂಲಭೂತ ಅಂಶಗಳು, ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ, ಜಲವಿಜ್ಞಾನ, ಮಣ್ಣು ಮತ್ತು ನೀರಿನ ಸಮಸ್ಯೆ, ತೋಟಗಾರಿಕೆ ಇಂತಹ ವಿಷಯಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು, ಈ ಕೋರ್ಸ್ ಮಾಡಬಹುದು. ಸಿರ್ಸಿ ಮತ್ತು ಕೊಡಗಿನ ಪೊನ್ನಂಪೇಟೆಯಲ್ಲಿರುವ ಎರಡು ಸರ್ಕಾರಿ ಕಾಲೇಜುಗಳಿಗೆ ಸಿಇಟಿ ಪರೀಕ್ಷೆಯ ಮೂಲಕ ಸೀಟ್ ಹಂಚಿಕೆಯಾಗುತ್ತದೆ.

ಈ ಕೋರ್ಸ್ ನಂತರ ಸರ್ಕಾರದ ಅರಣ್ಯ ಇಲಾಖೆ ಮತ್ತು ಖಾಸಗಿ ವಲಯದ ಕೃಷಿ ವ್ಯಾಪಾರೋದ್ಯಮ ಕಂಪನಿಗಳಲ್ಲಿ ಉದ್ಯೋಗವನ್ನು ಅರಸಬಹುದು. ಹೆಚ್ಚಿನ ಮಾಹಿತಿಗಾಗಿ ಎಂ.ಎಸ್ಸಿ/ಪಿ.ಎಚ್‌ಡಿ ಮಾಡಬಹುದು. ಈ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://youtu.be/JlMo33YxTiA

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಜೀವ ಕ್ರಿಯೆಗಳು

11) ಮಾನವನ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ಬರೆಯಿರಿ

ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಸಣ್ಣಕರುಳಿನಲ್ಲಿ ಕಂಡುಬರುವ ಕೊಬ್ಬುಗಳು ದೊಡ್ಡ ದೊಡ್ಡ ದುಂಡುಕಣಗಳ(globule) ರೂಪದಲ್ಲಿದ್ದು, ಕಿಣ್ವಗಳಿಗೆ ಅದರ ಮೇಲೆ ವರ್ತಿಸಲು ಕಷ್ಟವಾಗುತ್ತದೆ. ಪಿತ್ತರಸದ ಲವಣಗಳು ಅವುಗಳನ್ನು ಚಿಕ್ಕ ಚಿಕ್ಕ ದುಂಡು ಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.


ಮೇದೋಜೀರಕವು ಮೇದೋಜೀರಕ ರಸವನ್ನು ಸ್ರವಿಸುತ್ತದೆ. ಅದು ಪ್ರೋಟೀನನ್ನು ಜೀರ್ಣಿಸಲು ಟ್ರಿಪ್ಸಿನ್ ಮತ್ತು ಎಮಲ್ಸೀಕರಣಗೊಂಡ ಕೊಬ್ಬುಗಳನ್ನು ವಿಭಜಿಸಲು ಲೈಪೇಸ್‌ನಂತಹ ಕಿಣ್ವಗಳನ್ನು ಹೊಂದಿದೆ.

ಸಣ್ಣಕರುಳಿನ ಭಿತ್ತಿಯು ಗ್ರಂಥಿಗಳನ್ನು ಹೊಂದಿದ್ದು ಅವು ಕರುಳಿನ ರಸವನ್ನು ಸ್ರವಿಸುತ್ತವೆ. ಇದರಲ್ಲಿರುವ ಕಿಣ್ವಗಳು ಅಂತಿಮವಾಗಿ ಪ್ರೋಟಿನ್‌ಗಳನ್ನು ಅಮೈನೋ ಆಮ್ಲಗಳಾಗಿ, ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್ ಆಗಿ ಹಾಗೂ ಕೊಬ್ಬುಗಳನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

ಜೀರ್ಣವಾದ ಆಹಾರವು ಕರುಳಿನ ಗೋಡೆಗಳಿಂದ ಹೀರಲ್ಪಡುತ್ತದೆ. ಹೀರಿಕೆಯಾಗದ ಆಹಾರವು ದೊಡ್ಡ ಕರುಳಿಗೆ ಕಳಿಸಲ್ಪಡುತ್ತದೆ. ಅಲ್ಲಿ ಅದರ ಗೋಡೆಯು ಈ ಪದಾರ್ಥಗಳಿಂದ ಹೆಚ್ಚಿನ ನೀರನ್ನು ಹೀರಿಕೊಳ್ಳುತ್ತದೆ. ಉಳಿದ ಪದಾರ್ಥಗಳನ್ನು ಗುದದ್ವಾರದ ಮೂಲಕ ದೇಹದಿಂದ ಹೊರಹಾಕಲಾಗುತ್ತದೆ

15) ಮಾನವನ ಜೀರ್ಣಾಂಗವ್ಯೂಹದ ಚಿತ್ರಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



16) ಬಿಟ್ಟ ಸ್ಥಳ ತುಂಬಿ

1) ಆರೋಗ್ಯ ವ್ಯಕ್ತಿಯ ರಕ್ತದ ಒತ್ತಡ ....

ಉತ್ತರ:– 120/80 mm/hg

2) ಅಮಿಬಾ ಆಹಾರವನ್ನು ಸೆರೆಹಿಡಿಯಲು ಬಳಸುವ ವ್ಯವಸ್ಥೆ...................... ..

ಉತ್ತರ:– ಮಿಥ್ಯಾಪಾದ

3) ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ .... ಬಿಡುಗಡೆ ಮಾಡುತ್ತದೆ

ಉತ್ತರ:– ಸಕ್ಕರೆ.

4) ರಕ್ತದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ............................. ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

5) ದ್ಯುತಿ ಸಂಶ್ಲೇಷಣಾ ಕ್ರಿಯೆಗೆ ಬೇಕಾದ ಕಚ್ಚಾಪದಾರ್ಥಗಳು.................. ಮತ್ತು ....

ಉತ್ತರ:– ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು

6) ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಬೇಕಾದ ಅಂಶಗಳು .... ಮತ್ತು....................

ಉತ್ತರ:– ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್

7) ಬೆಳಗಿನ ಹೊತ್ತಿನಲ್ಲಿ ಸಸ್ಯಗಳು .... ಬಳಸಿಕೊಳ್ಳುವ ಕಾರಣ ಅದೂ ಬಿಡುಗಡೆ ಮಾಡುವುದಿಲ್ಲ

ಉತ್ತರ:– ಕಾರ್ಬನ್ ಡೈ ಆಕ್ಸೈಡ್

8) ನಮ್ಮ ದೇಹದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ .... ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

9) ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ಅದೂ ನಮ್ಮ .... ದೊಡ್ಡದಿದೆ


ಉತ್ತರ:– ಮುಷ್ಟಿಯಷ್ಟು

10) ....ಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥಹ ನೈಟ್ರೋಜನ್ ಯುಕ್ತ ತ್ಯಾಜ್ಯಗಳನ್ನು ತೆಗೆದುಹಾಕುತ್ತದೆ.

ಉತ್ತರ:– ಮೂತ್ರಪಿಂಡ

17) ಮಾನವ ಹೃದಯದ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



18) ಮೀನುಗಳು ಆಕ್ಸಿಜನ್ ಅನ್ನು ಹೇಗೆ ಪಡೆದುಕೊಳ್ಳುತ್ತವೆ.?

ಉತ್ತರ:– ಮೀನುಗಳು ತಮ್ಮ ಬಾಯಿಯ ಮೂಲಕ ನೀರನ್ನು ಒಳತೆಗೆದುಕೊಂಡು ಕಿವಿರುಗಳ ಕಡೇಗೆ ಬಲವಾಗಿ ತಳ್ಳುತ್ತವೆ. ಅಲ್ಲಿ ಕರಗಿರುವ ಆಕ್ಸಿ ಜನ್ ರಕ್ತದಿಂದ ಪಡೆದುಕೊಳ್ಳುತ್ತವೆ.

19) ಮಾನವನ ಶ್ವಾಸಕೋಶ ಚಿತ್ರ ಬರೆದು, ಅದರ ರಚನೆ ಮತ್ತು ಕಾರ್ಯ ನಿರ್ವಹಣೆಯನ್ನು ವಿವರಿಸಿ *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

DIFFERENTIABILITY

3. Find $\frac{d}{dx}\log\left[e^x\left(\frac{x-2}{x+2}\right)^{3/4}\right]$.

Soln:– Let $y=\log e^x\left(\frac{x-2}{x+2}\right)^{3/4}$

$$\Rightarrow y=\log e^x+\log\left(\frac{x-2}{x+2}\right)^{3/4}$$

$$= x\log e+\frac{3}{4}\log\frac{x-2}{x+2}$$

$$=x(1)+\frac{3}{4}\{\log(x-2)-\log(x+2)\}$$

$$=x+\frac{3}{4}\log(x-2)-\frac{3}{4}\log(x+2)$$

$$\therefore \frac{d}{dx}y=\frac{d}{dx}x+\frac{d}{dx}\frac{3}{4}\log(x-2)-\frac{d}{dx}\frac{3}{4}\log(x+2)$$

$$=1+\frac{3}{4}.\frac{1}{x-2}.\frac{d}{dx}(x-2)-\frac{3}{4}.\frac{1}{x+2}.\frac{d}{dx}(x+2)$$

$$=1+\frac{3}{4}.\frac{1}{x-2}.(1-0)-\frac{3}{4}.\frac{1}{x+2}.(1+0)$$

$$=1+\frac{3}{4}\left\{\frac{1}{x-2}-\frac{1}{x+2}\right\}$$

$$=1+\frac{3}{4}\left\{\frac{x+2-x+2}{(x-2)(x+2)}\right\}$$

$$=1+\frac{3}{x^2-4}=\frac{x^2-4+3}{x^2-4}=\frac{x^2-1}{x^2-4}$$

4. Differentiate the following functions w.r.t. x: (i) $x(\sin x)e^x$ (ii) $\frac{e^x\log x}{x^2}$

Soln:–(i) $\frac{d}{dx}x(\sin x)e^x$

$$=(\sin x)e^x\frac{d}{dx}x+xe^x\frac{d}{dx}\sin x+x\sin x\frac{d}{dx}e^x$$

$$=(\sin x)e^x(1)+xe^x\cos x+(x\sin x)e^x$$

$$=(\sin x+x\cos x+x\sin x)e^x.$$

(ii) $\frac{d}{dx}\frac{e^x\log x}{x^2}$ using Quotient Rule, we have

$$=\frac{x^2\frac{d}{dx}e^x\log x-e^x\log x\frac{d}{dx}x^2}{x^4}$$

$$=\frac{x^2\left\{e^x.\frac{1}{x}+(\log x)(e^x)\right\}-(e^x\log x)(2x)}{x^4}$$

$$=\frac{xe^x\{1+x\log x\}-2xe^x\log x}{x^4}$$

$$=\frac{xe^x\{1+x\log x-2\log x\}}{x^4}$$

$$=\frac{e^x\{1+x\log x-2\log x\}}{x^3}$$

5. Differentiate $\frac{\sec x}{\operatorname{cosec} x}$

Given that $\frac{\sec x}{\operatorname{cosec} x}=\tan x$ and $\frac{d}{dx}\tan x=\sec^2 x$ by Quotient Rule.

$$\text{Soln:- }\frac{d}{dx}\left(\frac{\sec x}{\operatorname{cosec} x}\right)=\frac{\left(\operatorname{cosec} x\frac{d}{dx}(\sec x)-\sec x\frac{d}{dx}(\operatorname{cosec} x)\right)}{\operatorname{cosec}^2 x}$$

$$=\frac{\left(\operatorname{cosec} x(\sec x\tan x)-\sec x(-\operatorname{cosec} x\cot x)\right)}{\operatorname{cosec}^2 x}$$

$$=\frac{\sec x\operatorname{cosec} x(\tan x+\cot x)}{\operatorname{cosec}^2 x}$$

$$=\frac{\sec x(\tan x+\cot x)}{\operatorname{cosec} x}$$

$$=\frac{\sin x}{\cos x}\left\{\frac{\sin x}{\cos x}+\frac{\cos x}{\sin x}\right\}$$

$$=\frac{\sin x}{\cos x}\left\{\frac{\sin^2 x+\cos^2 x}{\sin x\cos x}\right\}$$

$$=\frac{1}{\cos^2 x}$$

$$=\sec^2 x.$$

6. Differentiate the following functions w.r.t.x:

(i) $(ax+b)^n$

(ii) $\frac{1}{\sqrt{a^2-x^2}}$

(iii) $\sqrt{ax^2+bx+c}$

Soln:- (i) Let $y=(ax+b)^n$

Put $ax+b=u$, $\therefore y=u^n$ and $u=ax+b$

Now $y=u^n$	$u=ax+b$
$\Rightarrow\frac{d}{du}y=\frac{d}{du}u^n$	$\Rightarrow\frac{d}{dx}u=\frac{d}{dx}(ax+b)$
$\Rightarrow\frac{dy}{du}=nu^n-1$	$\Rightarrow\frac{du}{dx}=a.1+0=a$

$$\therefore\frac{dy}{dx}=\frac{dy}{du}.\frac{du}{dx}=nu^{n-1}.a$$

$$\Rightarrow\frac{d}{dx}(ax+b)^n=n(ax+b)^{n-1}.a$$

(ii) $\frac{d}{dx}\left(\frac{1}{\sqrt{a^2-x^2}}\right)$

$$\Rightarrow\frac{d}{dx}(a^2-x^2)^{-1/2}$$

$$=-\frac{1}{2}(a^2-x^2)^{-3/2}\frac{d}{dx}(a^2-x^2)$$

$$\Rightarrow\left(\frac{-1}{2}\right)\frac{1}{(a^2-x^2)^{3/2}}.(0-2x)$$

$$\Rightarrow\frac{x}{(a^2-x^2)^{3/2}}$$

ಒಗ್ಗಟ್ಟು ಪ್ರದರ್ಶನಕ್ಕೆ ಜೆಡಿಎಸ್–ಬಿಜೆಪಿ ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಧಾರ

ಅ. ದೇವೇಗೌಡ ಗೆಲುವಿಗೆ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅ. ದೇವೇಗೌಡ ಪರ ಪ್ರಚಾರದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಹೊಂದಾಣಿಕೆ ಕೊರತೆ ಉದ್ಭವಿಸದಂತೆ ಎಚ್ಚರಿಕೆಯ ಹೆಜ್ಜೆ ಇರಿಸಲು ಉಭಯ ಪಕ್ಷಗಳ ನಾಯಕರು ನಿರ್ಧರಿಸಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಕಚೇರಿಯಲ್ಲಿ ಬಿಜೆಪಿ–ಜೆಡಿಎಸ್ ಜಂಟಿ ಸಮನ್ವಯ ಸಮಿತಿ ಸಭೆ ಭಾನುವಾರ ನಡೆಯಿತು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬೆಂಗಳೂರು ಪದವೀಧರರ ಕ್ಷೇತ್ರದ ವ್ಯಾಪ್ತಿಯ ಎರಡೂ ಪಕ್ಷಗಳ ಪ್ರಮುಖ ಮುಖಂಡರು ಪಾಲ್ಗೊಂಡಿದ್ದರು.

'ಮೈತ್ರಿಕೂಟ ನಿರ್ಧಾರದಂತೆ ಈ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಬಿಜೆಪಿ ಅಭ್ಯರ್ಥಿಯಾಗಿರುವ ಅ. ದೇವೇಗೌಡ ಜೆಡಿಎಸ್ ಅಭ್ಯರ್ಥಿ ಎಂದೇ ಭಾವಿಸಿ ಅವರ ಗೆಲುವಿಗೆ ಶ್ರಮಿಸಬೇಕು. ಒಗ್ಗಟ್ಟಿನ ಹೋರಾಟದ ಮೂಲಕ ಎನ್‌ಡಿಎ ಮೈತ್ರಿಕೂಟ ಈ ಚುನಾವಣೆಯಲ್ಲೂ ಗೆಲುವು ಸಾಧಿಸುವಂತೆ ಮಾಡಬೇಕು' ಎಂದು ಕುಮಾರಸ್ವಾಮಿ ತಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸೂಚಿಸಿದರು.

'ಕಾಂಗ್ರೆಸ್ ಅಭ್ಯರ್ಥಿ ಹಣ, ಉಡುಗೊರೆ ಹಂಚಿ ಮತದಾರರಿಗೆ ಆಮಿಷ ಒಡ್ಡುತ್ತಿದ್ದಾರೆ. ಈಗಾಗಲೇ ಹಲವೆಡೆ ಉಡುಗೊರೆಗಳನ್ನು ವಶಕ್ಕೆ ಪಡೆಯಲಾಗಿದೆ. ಎರಡೂ ಪಕ್ಷಗಳ ಕಾರ್ಯಕರ್ತರು ಮತದಾರರಿಗೆ ಆಮಿಷ ಒಡ್ಡುವ ಪ್ರಯತ್ನಗಳ ಮೇಲೆ ನಿಗಾ ಇರಿಸಬೇಕು' ಎಂದು ಹೇಳಿದರು.

'ಒಂದು ವರ್ಷದಿಂದ ಬೆಂಗಳೂರು ನಗರದ ಅಭಿವೃದ್ಧಿ ಕುಂಠಿತವಾಗಿದೆ. 'ಬ್ರ್ಯಾಂಡ್ ಬೆಂಗಳೂರು' ಬದಲಿಗೆ 'ಲೂಟಿ ಬೆಂಗಳೂರು' ನಿರ್ಮಾಣವಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಉಂಟಾಗಿರುವ ದುಸ್ಥಿತಿಯನ್ನು ಪದವೀಧರರ ಗಮನಕ್ಕೆ ತರಬೇಕು' ಎಂದರು.

ಒಗ್ಗಟ್ಟು ನೋಡಿ ಹೆದರಿಕೆ: 'ಬಿಜೆಪಿ–ಜೆಡಿಎಸ್ ಒಟ್ಟಾಗಿದ್ದರೆ ಮುಂದೆ ನಮಗೆ ಉಳಿಗಾಲವಿಲ್ಲ ಎಂಬ ಹೆದರಿಕೆ ಕಾಂಗ್ರೆಸ್ ನಾಯಕರನ್ನು ಕಾಡುತ್ತಿದೆ. ಆ ಕಾರಣದಿಂದ ಒಗ್ಗಟ್ಟು ಮುರಿಯಲು ಅವರು ಪ್ರಯತ್ನಿಸುತ್ತಾರೆ. ನಮ್ಮ ಎರಡೂ ಪಕ್ಷಗಳ ಮುಖಂಡರು, ಕಾರ್ಯಕರ್ತರು ಎಚ್ಚರಿಕೆಯಿಂದ ಕೆಲಸ ಮಾಡಬೇಕು' ಎಂದು ಅಶೋಕ ಸಲಹೆ ನೀಡಿದರು.



ಬೆಂಗಳೂರು ಪದವೀಧರರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೆಡಿಎಸ್ ಕಚೇರಿಯಲ್ಲಿ ಭಾನುವಾರ ನಡೆದ ಬಿಜೆಪಿ–ಜೆಡಿಎಸ್ ಜಂಟಿ ಸಮನ್ವಯ ಸಮಿತಿ ಸಭೆಯಲ್ಲಿ ಶಾಸಕ ಮುನಿರತ್ನ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಶಾಸಕ ಸಿ.ಎನ್.ಅಶ್ವತ್ಥ್ ನಾರಾಯಣ, ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅ.ದೇವೇಗೌಡ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕ ಕೆ. ಗೋಪಾಲಯ್ಯ, ವಿಧಾನ ಪರಿಷತ್ ಸದಸ್ಯ ಟಿ. ಎ. ಶರವಣ ಕೈ ಎತ್ತುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

'ಪುಟ್ಟಸ್ವಾಮಿ ವಿರುದ್ಧ ಕ್ರಮ'

'ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿರುವ ಎಂ. ಪುಟ್ಟಸ್ವಾಮಿ ಅವರಿಗೂ ನಮ್ಮ ಪಕ್ಷಕ್ಕೂ ಸಂಬಂಧವಿಲ್ಲ. ಅವರು ನನ್ನ ಮತ್ತು ಎಚ್.ಡಿ. ದೇವೇಗೌಡರ ಭಾವಚಿತ್ರ ಬಳಸಿ ಮತ ಯಾಚಿಸುತ್ತಿರುವುದು ಗಮನಕ್ಕೆ ಬಂದಿದೆ. ಅವರು ನಮ್ಮ ಭಾವಚಿತ್ರ ಬಳಸುವುದನ್ನು ನಿಲ್ಲಿಸದಿದ್ದರೆ ಕಾನೂನು ಕ್ರಮ ಜರುಗಿಸುತ್ತೇವೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.


ಬೃಹತ್ ಬಂಡೆಗಲ್ಲು ಶಾಸನ ಪತ್ತೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಬಳ್ಳಾರಿ ನಗರದ ಸಿರುಗುಪ್ಪ ರಸ್ತೆಯ ಗಾಯತ್ರಿ ನಗರದ ಈಶ್ವರ ದೇವಸ್ಥಾನದ ಪಕ್ಕದ ಗುಡ್ಡದ ಬಳಿ ಬ್ರಿಟಿಷ್ ಕಾಲದ ಬೃಹತ್ ಬಂಡೆಗಲ್ಲು ಶಾಸನವನ್ನು ವಿಜಯನಗರ ತಿರುಗಾಟ ಸಂಶೋಧನಾ ತಂಡ ಶೋಧಿಸಿದ್ದು, ಇದು ಇಂಗ್ಲಿಷ್ ಮತ್ತು ತೆಲುಗು ಲಿಪಿಯಲ್ಲಿದೆ.

ಈ ಬೃಹತ್ ಬಂಡೆಗಲ್ಲು ಶಾಸನವು ಉತ್ತರಾಭಿಮುಖವಾಗಿದ್ದು, 25 ಅಡಿ ಎತ್ತರ ಮತ್ತು 20 ಅಡಿ ಅಗಲವಾಗಿದೆ. ಬಂಡೆಯ ಮೇಲುತುದಿಯಲ್ಲಿ ಇಂಗ್ಲಿಷ್ ಲಿಪಿಯ ಎಂಟು ಸಾಲುಗಳಿದ್ದರೆ, ಕೆಳಗೆ ಆರು ಸಾಲಿನ ತೆಲುಗು ಲಿಪಿ ಇದೆ.

ಬಂಡೆ ಇರುವ ಸ್ಥಳದಿಂದ ಸಿರುಗುಪ್ಪ ರಸ್ತೆಯ ಮೂಲಕ ಕಾಲುವೆಯನ್ನು ನಿರ್ಮಿಸಿದ ಮಾಹಿತಿ ಈ ಶಾಸನದಲ್ಲಿದೆ. ಮ್ಯಾಥ್ಯೂ ಅವರ ಮಗ ಡೇನಿಯಲ್ ಅಬ್ರಹಾಂ ಅವರು ಜನರ ಬಳಕೆಗಾಗಿ ನೀರು ಹರಿಸಲು ಕಾಲುವೆ ಕಾಮಗಾರಿ ಮಾಡಿಸಿದ ಎಂಬ ಮಾಹಿತಿ ಇದರಲ್ಲಿದೆ. 1842ರಲ್ಲಿ ಡೇನಿಯಲ್ ಅಬ್ರಹಾಂ ನಿಧನರಾದರು ಎಂಬ ಮಾಹಿತಿಯೂ ಇದೆ. ಈ ಕಾಲುವೆಯ ಕಾಮಗಾರಿ 1872ರಲ್ಲಿ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಜೆ.ಎಚ್.ಮಾಸ್ಟರ್ ಅವರ ಅವಧಿಯಲ್ಲಿ ಪೂರ್ಣಗೊಂಡಿರಬೇಕು ಎಂಬ ಮಾಹಿತಿಯೂ ಶಾಸನದ ಕೊನೆಯಲ್ಲಿ ಸಿಗುತ್ತದೆ.



ಬಳ್ಳಾರಿ ನಗರದಲ್ಲಿ ಪತ್ತೆಯಾದ ಬ್ರಿಟಿಷ್ ಕಾಲದ ಬಂಡೆ ಶಾಸನದ ದೂರದ ನೋಟ

ಆದರೆ ಸದ್ಯ ಈ ಕಾಲುವೆಯ ಸುಳಿವೇ ಇಲ್ಲಿ ಇಲ್ಲ. ಬಹುಶಃ ನೀರು ಹರಿಯದ ಕಾರಣ ಕ್ರಮೇಣ ಒತ್ತುವರಿಗೊಂಡು ಕಾಲುವೆ ಕಣ್ಮರೆಯಾಗಿರಬೇಕು ಎಂದು ಸಂಶೋಧಕರು ಶಂಕಿಸಿದ್ದಾರೆ.

ರಕ್ಷಣೆಗೆ ಮೊರೆ: 'ಬೃಹತ್ ಬಂಡೆಗಲ್ಲು ಶಾಸನದ ಸುತ್ತಲೂ ಜಿಲ್ಲಾಡಳಿತವು ರಕ್ಷಣೆ ಮಾಡಿ, ದಾಖಲೆಯನ್ನು ಉಳಿಸಬೇಕಾಗಿದೆ. ಏಕೆಂದರೆ ಪಡಿಯಚ್ಚು ತೆಗೆಯುವಾಗ ಅಲ್ಲಿನ ಸ್ಥಳೀಯ ನಿವಾಸಿಯೊಬ್ಬ ಇದೇ ತರಹದ ಲಿಪಿಯ ಬಂಡೆಗಲ್ಲು ಶಾಸನವಿತ್ತು, ಅದನ್ನು ಒಡೆದು ಹಾಕಿದ್ದಾರೆ ಎಂಬ ಮಾಹಿತಿ ನೀಡಿದ್ದಾರೆ' ಎಂದು ಇತಿಹಾಸಕಾರರು ಹಾಗೂ ತಂಡದ ಸದಸ್ಯರು ತಿಳಿಸಿದ್ದಾರೆ.

ಇತಿಹಾಸ ಸಂಶೋಧಕರಾದ ಟಿ.ಎಚ್.ಎಂ. ಬಸವರಾಜ ಮತ್ತು ವೈ.ಹನುಮಂತ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ವಿಜಯನಗರ ತಿರುಗಾಟ ಸಂಶೋಧನಾ ತಂಡದ ಸದಸ್ಯರಾದ ಬಳ್ಳಾರಿ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕ ತಿಪ್ಪೇಸ್ವಾಮಿ ಎಚ್., ಸಂಶೋಧನಾಕಾರರಾದ ವೀರಾಂಜನೇಯ, ರವಿಕುಮಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಗೋವಿಂದ, ಕೃಷ್ಣಗೌಡ, ಗೋವರ್ಧನ್ ಅವರು ಶಾಸನವನ್ನು ಪತ್ತೆಹಚ್ಚಿದ್ದಾರೆ.

ನಾಸಿಕ್: ಆಭರಣ ಕಂಪನಿ ಮೇಲೆ ಐಟಿ ದಾಳಿ

ನಾಸಿಕ್ (ಪಿಟಿಐ): ಮಹಾರಾಷ್ಟ್ರದ ನಾಸಿಕ್ ಮೂಲದ ಆಭರಣ ಕಂಪನಿಯೊಂದರ ಮೇಲೆ ದಾಳಿ ನಡೆಸಿದ ಆದಾಯ ತೆರಿಗೆ ಅಧಿಕಾರಿಗಳು ಸುಮಾರು ₹ 26 ಕೋಟಿ ನಗದನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ಎಚ್.ಡಿ. ಕೋಟೆ: ಮಹಿಳೆ ಎಳೆದೊಯ್ದು ಕೊಂದ ಹುಲಿ

ಪ್ರಜಾವಾಣಿ ವಾರ್ತೆ

ಎಚ್.ಡಿ. ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಮೂರ್ಬಾಂದ್ ಬೆಟ್ಟದ ಬಳಿ ಮೇಕೆಗಳನ್ನು ಮೇಯಿಸುತ್ತಿದ್ದ ಆದಿವಾಸಿ ಮಹಿಳೆಯನ್ನು ಹುಲಿಯೊಂದು ಶನಿವಾರ ಸಂಜೆ ಕೊಂದು ಹಾಕಿದ್ದು, ಮೃತದೇಹ ಭಾನುವಾರ ಪತ್ತೆಯಾಗಿದೆ.

ತಾಲ್ಲೂಕಿನ ಎನ್.ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಳದಹಾಡಿಯ ಚಿಕ್ಕಮ್ಮ (48) ಮೃತರು.

ಮಹಿಳೆಯ ಮೇಲೆ ದಾಳಿ ಮಾಡಿದ ಹುಲಿಯು, ಮೃತದೇಹವನ್ನು ಸುಮಾರು 200 ಮೀಟರ್‌ವರೆಗೆ ಎಳೆದೊಯ್ದಿದೆ. ಅರಣ್ಯ ವೀಕ್ಷಣೆಯ ಟವರ್ ಬಳಿ ಒಂದು ಕಾಲನ್ನು ತಿಂದು ಉಳಿದ ಭಾಗವನ್ನು ಬಿಟ್ಟು ಹೋಗಿದೆ. ಮಹಿಳೆಯೊಂದಿಗೆ ಕುರಿ ಮೇಯಿಸುತ್ತಿದ್ದ ಮತ್ತೊಬ್ಬರು ಗ್ರಾಮಕ್ಕೆ ತೆರಳಿ ಮಾಹಿತಿ ನೀಡಿದಾಗ ಘಟನೆ ನಡೆದಿರುವುದು ಗೊತ್ತಾಗಿದೆ.



ಚಿಕ್ಕಮ್ಮ

ಶನಿವಾರ ಮೃತದೇಹಕ್ಕಾಗಿ ಹುಡುಕಾಟ ನಡೆಸಿದ್ದರಾದರೂ ಕತ್ತಲು ಆವರಿಸಿದ್ದರಿಂದ ಸಿಕ್ಕಿರಲಿಲ್ಲ. ಭಾನುವಾರ ಬೆಳಿಗ್ಗೆ ಪತ್ತೆ ಕಾರ್ಯ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದರು. ಮೃತರಿಗೆ ಪುತ್ರ ಹಾಗೂ ಇಬ್ಬರು ಪುತ್ರಿಯರಿದ್ದಾರೆ.

ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಡಿಸಿಎಫ್ ಪ್ರಭಾಕರನ್, ಎಸಿಎಫ್ ರವೀಂದ್ರ, ಆರ್‌ಎಫ್‌ಒ ಮಂಜುನಾಥ್ ಬಾಗೇವಾಡಿ ಸ್ಥಳಕ್ಕೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ, ₹ 5 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

'3 ತಿಂಗಳಿಂದ ಹಣ ಪಾವತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಸೋಲು ಖಚಿತ ಎಂಬುದು ಗೊತ್ತಾದ ಕಾರಣ ರಾಜ್ಯದಲ್ಲಿ ಐದು ಗ್ಯಾರಂಟಿಗಳಿಗೆ ಸಂಚಕಾರ ಬಂದಿದೆ. ಕಳೆದ ಮೂರು ತಿಂಗಳಿಂದ ಅಕ್ಕಿ ಬದಲಿಗೆ ಕೊಡುತ್ತಿದ್ದ ಹಣದ ಪಾವತಿಯನ್ನು ಸರ್ಕಾರ ನಿಲ್ಲಿಸಿದೆ ಎಂದು ಬಿಜೆಪಿ ದೂರಿದೆ.

'ರಾಜ್ಯದ ಜನತೆಗೆ 10 ಕೆ.ಜಿ ಅಕ್ಕಿ ಬೇಕೋ ಬೇಡ್ವೋ ಎಂದು ಕಿವಿ ಮೇಲೆ ಹೂವಿಟ್ಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈಗ ಜನತೆಯ ತಲೆ ಮೇಲೆ ಹೂವಿನ ಕುಂಡವನ್ನೇ ಇಟ್ಟಿದ್ದಾರೆ' ಎಂದು 'ಎಕ್ಸ್'ನಲ್ಲಿ ಕುಟುಕಿದೆ.

'10 ಕೆ.ಜಿ ಅಕ್ಕಿಯೂ ಇಲ್ಲ, ಅಕ್ಕಿ ಬದಲು ದುಡ್ಡೂ ಇಲ್ಲ. ಇದೊಂದು ರೀತಿ ಉಂಡು ಹೋದ ಕೊಂಡೂ ಹೋದ ಅಪರಾವತಾರ. ಸಿದ್ದರಾಮಯ್ಯ ಅವರೇ, ಮೂರು ತಿಂಗಳಿನಿಂದ ಅಕ್ಕಿ ದುಡ್ಡು ಬಂದಿಲ್ಲ, ದುಡ್ಡು ಕೊಡ್ತೀರೋ ಇಲ್ವೋ ಅನ್ನೂದನ್ನು ಹೇಳಿ' ಎಂದು ಪ್ರಶ್ನಿಸಿದೆ.

ಕರಾವಳಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಭಾಗದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇ 27 ಹಾಗೂ 28 ರಂದು ಈ ಎರಡು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಸೂಚನೆ ನೀಡಲಾಗಿದೆ.

ಉಳಿದಂತೆ, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ಯಾದಗಿರಿ, ವಿಜಯಪುರ ಜಿಲ್ಲೆಗಳಲ್ಲಿ ಅಲ್ಲಲ್ಲಿ ಸಾಧಾರಣ ಮಳೆ ಆಗಲಿದೆ ಎಂದು ತಿಳಿಸಿದೆ.

ದಕ್ಷಿಣ ಒಳನಾಡು, ಉತ್ತರ ಒಳನಾಡು ಭಾಗದ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಸಾಧ್ಯತೆಯಿದೆ.

ಸೂಲಿಬೆಲೆಗೆ 'ಸಾವರ್ಕರ್ ಸಮ್ಮಾನ್'

ಪ್ರಜಾವಾಣಿ ವಾರ್ತೆ

ಮೈಸೂರು: 'ನಗರದ ಸಾವರ್ಕರ್ ಪ್ರತಿಷ್ಠಾನದಿಂದ ಮೇ 28ರಂದು ಸಂಜೆ 5.30ಕ್ಕೆ ಇಲ್ಲಿನ ಕಲಾಮಂದಿರದಲ್ಲಿ 'ವೀರ ಸಾವರ್ಕರ್ ಸಮ್ಮಾನ್-2024' ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಪ್ರತಿಷ್ಠಾನದ ಸದಸ್ಯ ರಾಕೇಶ್ ಭಟ್ ತಿಳಿಸಿದರು.

'ಸಾವರ್ಕರ್ ಅವರ 141ನೇ ಜಯಂತಿ ಪ್ರಯುಕ್ತ ಯುವ ಬ್ರಿಗೇಡ್ ಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರಿಗೆ ಸಮ್ಮಾನ್ ಪ್ರದಾನ ಮಾಡಲಾಗುವುದು. ಇದು ₹1 ಲಕ್ಷ ನಗದು, ಸಾವರ್ಕರ್ ಪುತ್ಥಳಿ ಹಾಗೂ ಫಲಕ ಹೊಂದಿದೆ. ಕಾದಂಬರಿಕಾರ ಎಸ್.ಎಲ್.ಭೈರಪ್ಪ, ಪತ್ರಕರ್ತ ಅಜಿತ್ ಹನುಮಕ್ಕನವರ್ ಪಾಲ್ಗೊಳ್ಳಲಿದ್ದಾರೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಪತಿ ನೆನಪಿಗಾಗಿ ಗ್ರಂಥಾಲಯ ಅಭಿವೃದ್ಧಿ

ಒಂದನೇ ಪುಟದಿಂದ

ಅದೇ ಕೊಠಡಿಯಲ್ಲಿ ವಿದ್ಯಾ ಗ್ರಂಥಾಲಯ ಅಭಿವೃದ್ಧಿಪಡಿಸಿದ್ದಾರೆ. ಮಕ್ಕಳು, ಶಿಕ್ಷಕರಿಗೆ ಕುಳಿತುಕೊಳ್ಳಲು 40 ಕುರ್ಚಿ, ಎರಡು ರೀಡಿಂಗ್ ಟೇಬಲ್, ನಾಲ್ಕು ರ್‍ಯಾಕ್, ಐದು ತಿಜೋರಿ ಕೊಡಿಸಿದ್ದಾರೆ. ಕೊಠಡಿಗೆ ಕರ್ಟನ್ ವ್ಯವಸ್ಥೆ ಮಾಡುವ ಜತೆಗೆ, ಅಗತ್ಯ ಮೂಲಸೌಕರ್ಯ ಕಲ್ಪಿಸಿದ್ದಾರೆ. ಹಲವು ಪುಸ್ತಕ ನೀಡಿದ್ದಾರೆ. 2024ರ ಮಾರ್ಚ್‌ನಿಂದ ಗ್ರಂಥಾಲಯ ಕಾರ್ಯಾರಂಭ ಮಾಡಿದೆ.

ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ನಿಯಮಿತವಾಗಿ ಗ್ರಂಥಾಲಯ ಬಳಸಿಕೊಳ್ಳುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳು ಬೇಸಿಗೆ ರಜೆಯಲ್ಲೂ ಪುಸ್ತಕ ಪಡೆದು ಓದಿದ್ದಾರೆ.

ಪತಿಯ ಆಸೆಯಿತ್ತು: 'ನನ್ನ ಪತಿ ಪುರುಷೋತ್ತಮ ಅರಳಿಕಟ್ಟಿ ಇದೇ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿ. ತಾವು ಕಲಿತ ಶಾಲೆಗೆ ಏನಾದರೂ ಕೊಡುಗೆ ನೀಡಬೇಕೆಂಬ ತುಡಿತ ಅವರದ್ದಾಗಿತ್ತು. ನನ್ನ ಹತ್ತಿರವೂ ಇದನ್ನು ಹೇಳಿಕೊಂಡಿದ್ದರು. ಅವರ ಸವಿನೆನಪಿಗಾಗಿ ಗ್ರಂಥಾಲಯ ಅಭಿವೃದ್ಧಿಪಡಿಸಿ, ಅಳಿಲುಸೇವೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಅದಕ್ಕೆ ಇನ್ನಷ್ಟು ಸೌಕರ್ಯ ಕಲ್ಪಿಸುವೆ' ಎಂದು ಡಾ.ವಿದ್ಯಾ ಅರಳಿಕಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮಲ್ಲಿ ವಿದ್ಯಾರ್ಥಿಗಳ ಅಧ್ಯಯನಕ್ಕೆ ಪೂರಕವಾಗಿ ಎಲ್ಲ ಪ್ರಕಾರಗಳ ಪುಸ್ತಕಗಳಿವೆ. ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆ ತರಿಸುತ್ತಿದ್ದೇವೆ. ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಕಲಿಕೆಗೆ ಪೂರಕವಾದ ವಾರಪತ್ರಿಕೆ, ಮಾಸಪತ್ರಿಕೆಯನ್ನು ಜೂನ್‌ನಿಂದ ತರಿಸಲಿದ್ದೇವೆ' ಎನ್ನುತ್ತಾರೆ ಮುಖ್ಯಶಿಕ್ಷಕ ಶಿವಶಂಕರ ಹಾದಿಮನಿ.

ಗಡಿ ಗುರುತಿಲ್ಲದೇ ಗಣಿ ಸರ್ವೆ ಆರಂಭ

ಒಂದನೇ ಪುಟದಿಂದ

ಹೀಗಾಗಿ, ಕೇಂದ್ರದ ಉನ್ನತಾಧಿಕಾರ ಸಮಿತಿಯ (ಸಿಇಸಿ) ಸದಸ್ಯರ ಅಧ್ಯಕ್ಷತೆಯಲ್ಲಿ ಮೇ 21ರಂದು ಸಭೆ ನಡೆದಿದೆ. ಏಳು ಗಣಿಗಳ ಜಂಟಿ ಸರ್ವೆ ನಡೆಸಲು ಈ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸರ್ವೆಯನ್ನು ಸುರತ್ಕಲ್‌ನ ಎನ್‌ಐಟಿಕೆ, ಅರಣ್ಯ, ಕಂದಾಯ, ಭೂ ದಾಖಲೆಗಳು ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳ ತಾಂತ್ರಿಕ ತಂಡದ ಮೂಲಕ ನಡೆಸಲು ನಿರ್ಧರಿಸಲಾಗಿದೆ.

ಮೇ 29ರಂದು ಮಹಬೂಬ್ ಟ್ರಾನ್ಸ್‌ಪೋರ್ಟ್ ಕಂಪನಿಯ ಗಣಿ ಸರ್ವೆ ನಡೆಯಲಿದೆ. 30ರಂದು ಹಿಂದ್ ಟ್ರೇಡರ್ಸ್, 31ರಂದು ಎನ್. ರತ್ನಯ್ಯ, ಜೂ. 1ರಂದು ಟಿ. ನಾರಾಯಣ ರೆಡ್ಡಿ, 2ರಿಂದ 4ರ ವರೆಗೆ ವಿಭೂತಿಗುಡ್ಡ ಮೈನ್ಸ್ ಪ್ರೈ. ಲಿ., 5ರಂದು ಸುಗ್ಗುಲಮ್ಮ ಗುಡ್ಡ ಮೈನಿಂಗ್ ಅ್ಯಂಡ್ ಕಂಪನಿ, 6ರಂದು ಬಳ್ಳಾರಿ ಮೈನಿಂಗ್ ಕಾರ್ಪೊರೇಷನ್‌ಗಳ ಗಣಿ ಸರ್ವೆ ನಡೆಯಲಿದೆ.

ಇನ್ನೂ ಅಂತಿಮವಾಗಿಲ್ಲ ಗಡಿ ಬಿ–1 ವರ್ಗದ ಗಣಿಗಳ ಜಂಟಿ ಸರ್ವೆಗೆ ಸುಪ್ರೀಂ ಕೋರ್ಟ್ 2022ರಲ್ಲೂ ಆದೇಶಿಸಿತ್ತು. ಆದರೆ, ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ಅಂತರರಾಜ್ಯ ಗಡಿ ಗುರುತುಗಳನ್ನು ಮರುಸ್ಥಾಪಿಸುವವರೆಗೆ ಜಂಟಿ ಸರ್ವೆ ಮುಂದೂಡಬೇಕು ಎಂದು ಸುಪ್ರೀಂ ಕೋರ್ಟ್ ತನ್ನ ಮತ್ತೊಂದು ಆದೇಶದಲ್ಲಿ ಹೇಳಿತ್ತು. ಈ ಮಧ್ಯೆ, ಎರಡೂ ರಾಜ್ಯಗಳ ಗಡಿ ಗುರುತು ಕಾರ್ಯ ಪೂರ್ಣಗೊಂಡಿದೆ ಎಂದು ಕರ್ನಾಟಕ ಸರ್ಕಾರ 2023ರ ಜ.1ರಂದು ಸಿಇಸಿಗೆ ತಿಳಿಸಿತ್ತು ಎನ್ನಲಾಗಿದೆ. ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್ ಗಣಿಗಳ ಜಂಟಿ ಸರ್ವೆಗೆ ಮಾರ್ಚ್ 14ರಂದು ಆದೇಶಿಸಿತ್ತು.

ಕರ್ನಾಟಕ-ಆಂಧ್ರ ಪ್ರದೇಶ ನಡುವಿನ ಗಡಿ ಗುರುತಿಗಾಗಿ 'ಸರ್ವೆ ಆಫ್ ಇಂಡಿಯಾ'ದಿಂದ ನಡೆದಿರುವ ಸರ್ವೆಗೆ ಆಕ್ಷೇಪಗಳು ವ್ಯಕ್ತವಾಗಿದ್ದು, ಇದರ ಪರಾಮರ್ಶೆಗೆ ತಜ್ಞರ ಸಮಿತಿ ರಚಿಸುವುದಾಗಿ 2023ರ ಬೆಳಗಾವಿ ಅಧಿವೇಶನದಲ್ಲಿ ಕಂದಾಯ ಸಚಿವರು ತಿಳಿಸಿದ್ದರು. ಆದರೆ, ಈ ವರೆಗೆ ಸಮಿತಿ ರಚನೆಯಾಗಿಲ್ಲ. ಹೀಗಾಗಿ ಗಣಿ ಸರ್ವೆ ಅಪೂರ್ಣವಾಗಿಯೇ ಉಳಿದಿದೆ.

ಇನ್ನೊಂದೆಡೆ, ಗಣಿ ಉದ್ಯಮಿ ಟಪಾಲ್ ಗಣೇಶ್ 2024ರ ಮಾರ್ಚ್ 18ರಂದು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಹೊಸ ಸರ್ವೆ ಗಡಿ ನಕ್ಷೆಯನ್ನು ಪಡೆದುಕೊಂಡಿದ್ದು, ಅದರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸರ್ವೆ ನಡೆಸಿದ ಕ್ಯಾಂಪ್ ಅಧಿಕಾರಿ ಸಹಿ ಹಾಕದೇ ಇರುವುದು ಬಯಲಾಗಿದೆ. 'ಸರ್ಕಾರದ ಅಂಕಿತವೇ ಇಲ್ಲದೇ ಗಡಿ ಸರ್ವೆ ಪೂರ್ಣವಾಗುವುದು ಹೇಗೆ' ಎಂದು ಟಪಾಲ್ ಗಣೇಶ್ ಪ್ರಶ್ನೆ ಮಾಡಿದ್ದಾರೆ.

ಮನೆಯಲ್ಲಿಯೇ ಫಿಸಿಯೋಥೆರಪಿ ಸಾಧ್ಯ: ಐಐಐಟಿಬಿ ಸಾಧನ ಅಭಿವೃದ್ಧಿ

ಪಾರ್ಶ್ವವಾಯು ಪೀಡಿತರಿಗೆ 'ವಿಶೇಷ ಗಾಲಿ ಕುರ್ಚಿ'

• ವರುಣ ಹೆಗಡೆ

ಬೆಂಗಳೂರು: ಪಾರ್ಶ್ವವಾಯು ಪೀಡಿತರ ಪುನರ್ವಸತಿಗೆ ಸಂಬಂಧಿಸಿದಂತೆ ಇಲ್ಲಿನ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿಬಿ) ವಿಶೇಷ ಗಾಲಿ ಕುರ್ಚಿ ಅಭಿವೃದ್ಧಿಪಡಿಸಿದೆ. ಈ ಗಾಲಿ ಕುರ್ಚಿಯ ನೆರವಿನಿಂದ ರೋಗಿಗಳು ಮನೆಯಲ್ಲಿಯೇ ಫಿಸಿಯೋಥೆರಪಿ ಮಾಡಿಕೊಳ್ಳಲು ಸಾಧ್ಯವಾಗಲಿದೆ.

'ಇಂಟರ್‌ನೆಟ್ ಆಫ್ ಥಿಂಗ್ಸ್' ತಂತ್ರಜ್ಞಾನ ಆಧಾರಿತ 'ಕ್ಯೂರಿಹ್ಯಾಬ್' ಎಂಬ ಸಾಧನವನ್ನು ಐಐಐಟಿಬಿಯ ಸೆಂಟರ್ ಫಾರ್ ಇಂಟರ್‌ನೆಟ್ ಆಫ್ ಎಥಿಕಲ್ ಥಿಂಗ್ಸ್‌ನಲ್ಲಿ (ಸಿಐಇಟಿ) ಅಭಿವೃದ್ಧಿಪಡಿಸಲಾಗಿದೆ. ರೊಬೊಟಿಕ್ ತಂತ್ರಜ್ಞಾನವನ್ನೂ ಅಳವಡಿಸಿಕೊಳ್ಳಲಾಗಿದ್ದು, ಇದಕ್ಕೆ ಐಟಿ ಬಿಟಿ ಇಲಾಖೆಯೂ ಬೆಂಬಲ ನೀಡಿದೆ.

ಎರಡು ವರ್ಷಗಳ ಅವಧಿಯಲ್ಲಿ ಈ ಸಾಧನ ಆವಿಷ್ಕರಿಸಿ, ಗಾಲಿ ಕುರ್ಚಿಗೆ ಅಳವಡಿಸಲಾಗಿದೆ. 4.8 ಅಡಿಯಿಂದ 5.8 ಅಡಿ ಎತ್ತರ ಹಾಗೂ 75 ಕೆ.ಜಿ. ವರೆಗಿನ ತೂಕದ ವಿವಿಧ ವ್ಯಕ್ತಿಗಳ ಮೇಲೆ ಪ್ರಯೋಗ ನಡೆಸಲಾಗಿದೆ. ಇದು ಉತ್ತಮ ಫಲಿತಾಂಶ ನೀಡಿದ್ದರಿಂದ ಈ ಕುರಿತ ವರದಿಯನ್ನು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿಯೂ ಸಂಸ್ಥೆ ಪ್ರಕಟಿಸಿದೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಪ್ರಕಾರ ರಾಜ್ಯದಲ್ಲಿ ಪ್ರತಿವರ್ಷ 70 ಸಾವಿರದಿಂದ 80 ಸಾವಿರ ಜನರು ಪಾರ್ಶ್ವವಾಯು ಪೀಡಿತರಾಗುತ್ತಿದ್ದಾರೆ.



'ಕ್ಯೂರಿಹ್ಯಾಬ್' ಸಾಧನ ಅಳವಡಿಸಿದ ವಿಶೇಷ ಗಾಲಿ ಕುರ್ಚಿಯಲ್ಲಿ ವ್ಯಕ್ತಿಯೊಬ್ಬರು ಫಿಸಿಯೋಥೆರಪಿ ಪಡೆಯುತ್ತಿದ್ದರು

ಸದ್ಯ 6 ಲಕ್ಷ ಮಂದಿ ಪಾರ್ಶ್ವವಾಯು ಪೀಡಿತರು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ವಾರ್ಷಿಕ ಒಂದು ಲಕ್ಷ ಪಾರ್ಶ್ವವಾಯು ರೋಗಿಗಳ ಪೈಕಿ 73 ಜನರು ಮರಣ ಹೊಂದುತ್ತಿದ್ದಾರೆ. ನಿಮ್ಹಾನ್ಸ್‌ನಲ್ಲಿ ತುರ್ತು ಚಿಕಿತ್ಸೆಗೆ ದಾಖಲಾಗುವ ರೋಗಿಗಳಲ್ಲಿ ಶೇ 25 ರಷ್ಟು ರೋಗಿಗಳು ಪಾರ್ಶ್ವವಾಯು ಪೀಡಿತರಾಗಿದ್ದಾರೆ. ತಿಂಗಳಿಗೆ 200 ರಿಂದ 250 ರೋಗಿಗಳು ಈ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಸಂಸ್ಥೆಗೆ ಬರುತ್ತಿದ್ದಾರೆ. ಪಾರ್ಶ್ವವಾಯುವಿನಿಂದ ಅಂಗಾಂಗ ವೈಫಲ್ಯ ಹಾಗೂ ಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಪಾರ್ಶ್ವವಾಯು ಪೀಡಿತರ ಆಸ್ಪತ್ರೆ ಅವಧಿ ಕಡಿತಕ್ಕೆ ಈ ಸಾಧನ ಸಹಕಾರಿಯಾಗಲಿದೆ.

ಫಿಸಿಯೋಥೆರಪಿ ಸುಲಭ: 'ಕ್ಯೂರಿಹ್ಯಾಬ್' ಸಾಧನವನ್ನು ಒಳಗೊಂಡ ವಿಶೇಷ ಗಾಲಿ ಕುರ್ಚಿಯು ಶಸ್ತ್ರಚಿಕಿತ್ಸೆಗೆ ಒಳಗಾದ ಪಾರ್ಶ್ವವಾಯು ರೋಗಿಗಳಿಗೆ ಫಿಸಿಯೋಥೆರಪಿಗೆ ಸಹಕಾರಿಯಾಗಲಿದೆ. ಶಸ್ತ್ರಚಿಕಿತ್ಸೆಯ ಬಳಿಕ ರೋಗಿಗಳು ಫಿಸಿಯೋಥೆರಪಿಗೆ ಒಳಗಾಗಬೇಕಾಗುತ್ತದೆ. ಆದರೆ, ರಾಜ್ಯದ ಆಸ್ಪತ್ರೆಗಳಲ್ಲಿ ಸೀಮಿತ ಸಂಖ್ಯೆಯಲ್ಲಿ ಫಿಸಿಯೋಥೆರಪಿಸ್ಟ್ ಇದ್ದಾರೆ. ಇದರಿಂದಾಗಿ ನಿಯಮಿತವಾಗಿ ಆಸ್ಪತ್ರೆಗಳಿಗೆ ತೆರಳಿ, ಫಿಸಿಯೋಥೆರಪಿ ಪಡೆಯುವುದು ಸವಾಲಾಗಿದೆ. ಆದ್ದರಿಂದ ಐಐಐಟಿಬಿಯ ಸಿಐಇಟಿ ಕೇಂದ್ರದ ಸಂಶೋಧಕರು ಈ ವಿಶೇಷ ಗಾಲಿ ಕುರ್ಚಿ ಅಭಿವೃದ್ಧಿಪಡಿಸಿದ್ದಾರೆ.

'ನಿಮ್ಹಾನ್ಸ್‌ನ ನರರೋಗ ಚಿಕಿತ್ಸಕರೊಬ್ಬರು ಮನೆಯಲ್ಲಿಯೇ ರೋಗಿಗಳು ಸುಲಭವಾಗಿ ಫಿಸಿಯೋಥೆರಪಿ ಮಾಡಿಕೊಳ್ಳುವಂತಹ, ಒಂದೆಡೆಯಿಂದ ಇನ್ನೊಂದೆಡೆ ಕೊಂಡೊಯ್ಯಬಹುದಾದ ಸಾಧನವನ್ನು ಅಭಿವೃದ್ಧಿಪಡಿಸುವಂತೆ ಸೂಚಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿ ಈ ಆವಿಷ್ಕಾರ ಮಾಡಿದೆವು' ಎಂದು ಸಿಐಇಟಿ ಸಂಚಾಲಕ ಮಾಧವ್ ರಾವ್ ತಿಳಿಸಿದರು.

ಯುವಜನರಿಗೂ ಪಾರ್ಶ್ವವಾಯು

'ಧೂಮಪಾನ, ಮದ್ಯಪಾನ, ಡ್ರಗ್ ವ್ಯಸನದಿಂದ ಯುವಜನರೂ ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಶ್ವವಾಯುವಿಗೆ ಒಳಗಾಗುತ್ತಿದ್ದಾರೆ. ಪಾರ್ಶ್ವವಾಯು ಆದಾಗ ಸಮಯಪ್ರಜ್ಞೆ ಬಹಳ ಮುಖ್ಯ. ಆರೈಕೆ ಹಾಗೂ ಸರಿಯಾದ ಸಮಯಕ್ಕೆ, ಸಮರ್ಪಕವಾದ ಚಿಕಿತ್ಸೆ ಸಿಕ್ಕರೆ ವ್ಯಕ್ತಿ ಬೇಗ ಗುಣಮುಖವಾಗಲು ಸಾಧ್ಯ' ಎಂದು ನಿಮ್ಹಾನ್ಸ್ ವೈದ್ಯರೊಬ್ಬರು ತಿಳಿಸಿದರು.

'ಮಧುಮೇಹ, ಧೂಮಪಾನ, ಮದ್ಯಪಾನ, ಕಳಪೆ ಆಹಾರ ಪದ್ಧತಿ, ಕಡಿಮೆ ದೈಹಿಕ ಚಟುವಟಿಕೆ, ಒತ್ತಡ, ಖಿನ್ನತೆ ವಿವಿಧ ಕಾರಣಗಳಿಂದ ಪಾರ್ಶ್ವವಾಯು ಸಂಭವಿಸುತ್ತದೆ. ತೋಳಿನ ದೌರ್ಬಲ್ಯ, ಮಾತು ತೊದಲುವಿಕೆ ಸೇರಿ ವಿವಿಧ ಲಕ್ಷಣಗಳು ಕಾಣಿಸಿಕೊಂಡಾಗ ತುರ್ತುಚಿಕಿತ್ಸೆ ಒದಗಿಸಬೇಕು. ಸಂಸ್ಥೆಯಲ್ಲಿ ಪಾರ್ಶ್ವವಾಯು ಪೀಡಿತರ ಆರೈಕೆಗೆ 24 ಹಾಸಿಗೆಗಳನ್ನು ಮೀಸಲಿಡಲಾಗಿದೆ'

ರೋಗಿಯ ಚೇತರಿಕೆ ವಿಶ್ಲೇಷಣೆ

'ಈ ಸಾಧನವು ರೋಗಿಯ ಸ್ನಾಯುಗಳ ನಡವಳಿಕೆ ಮತ್ತು ಚೇತರಿಕೆಯ ವಿಶ್ಲೇಷಣೆಗೂ ಸಹಾಯ ಮಾಡುತ್ತದೆ. ಇದರಿಂದಾಗಿ ವೈದ್ಯರ ನಿರಂತರ ಮೇಲ್ವಿಚಾರಣೆ ತಪ್ಪಲಿದೆ. ಸಾಧನ ಅಳವಡಿಸಿದ ಗಾಲಿ ಕುರ್ಚಿಯನ್ನು ಸ್ಟ್ರೆಚರ್ ರೂಪದಲ್ಲಿಯೂ ಬಳಸುವ ಅವಕಾಶ ನೀಡಲಾಗಿದೆ. ಐಒಟಿ ತಂತ್ರಜ್ಞಾನ ಬಳಕೆಯಿಂದಾಗಿ ವ್ಯಕ್ತಿಯ ಸ್ಥಿತಿಗತಿಯ ಮಾಹಿತಿಯನ್ನು ಸೆರೆಹಿಡಿದು, ವೈದ್ಯರಿಗೆ ರವಾನಿಸುವ ವ್ಯವಸ್ಥೆಯೂ ಇದೆ. ಇದರಿಂದ ವೈದ್ಯರು ಅಗತ್ಯ ಔಷಧ ಮತ್ತು ಚಿಕಿತ್ಸಾ ವಿವರಗಳನ್ನು ವ್ಯಕ್ತಿ ಇರುವಲ್ಲಿಯೇ ಒದಗಿಸಲು ಸಾಧ್ಯ' ಎಂದು ಸಿಐಇಟಿ ಪ್ರಾಜೆಕ್ಟ್ ಸದಸ್ಯ ಜಗನ್ ಪಿ. ತಿಳಿಸಿದರು.

ಸದ್ಯ ಈ ಸಾಧನವನ್ನು ಆಸ್ಪತ್ರೆಗಳಿಗೆ ₹ 85 ಸಾವಿರದಿಂದ ₹ 90 ಸಾವಿರಕ್ಕೆ ಪೂರೈಸಲು ಸಂಸ್ಥೆ ನಿರ್ಧರಿಸಿದೆ. ಆಸ್ಪತ್ರೆಗಳು ಬಾಡಿಗೆ ಆಧಾರದಲ್ಲಿ ರೋಗಿಗಳಿಗೆ ಒದಗಿಸಬಹುದಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಈ ಜಗತ್ತು ನಾವು ನಮ್ಮ ಬಗ್ಗೆ ಹೇಳುವ ಸತ್ಯಕ್ಕಿಂತ ಇತರರು ನಮ್ಮ ಕುರಿತು ಹೇಳುವ ಸುಳ್ಳನ್ನೇ ಹೆಚ್ಚಾಗಿ ನಂಬುತ್ತದೆ.
-ಎ.ಪಿ.ಜೆ. ಅಬ್ದುಲ್ ಕಲಾಂ

ಪೊಲೀಸ್ ಸಿಬ್ಬಂದಿಯಲ್ಲಿ ಬೊಜ್ಜು ವೃತ್ತಿ-ಬದುಕಿನಲ್ಲಿ ಬೇಕು ಸಮತೋಲನ

‘ಪೊಲೀಸ್’ ಎಂಬ ಪದವನ್ನು ಕೇಳಿದಾಕ್ಷಣ ಜನರ ಮನಸ್ಸಿನಲ್ಲಿ ‘ಸಮವಸ್ತ್ರ ಧರಿಸಿರುವ ಹಾಗೂ ದೃಢಕಾಯರಾಗಿರುವ’ ವ್ಯಕ್ತಿಗಳ ಚಿತ್ರಣವೊಂದು ಸಾಮಾನ್ಯವಾಗಿ ಮೂಡುವುದಿದೆ. ಪೊಲೀಸರು ಮಾಡಬೇಕಿರುವ ಕೆಲಸಗಳು, ನಿರ್ವಹಿಸಬೇಕಿರುವ ಹೊಣೆ ಆ ರೀತಿಯ ಚಿತ್ರಣವನ್ನು ಮೂಡಿಸುತ್ತವೆ. ಆದರೆ ಬೆಂಗಳೂರಿನ ಪೊಲೀಸರು ದೈಹಿಕವಾಗಿ ಎಷ್ಟು ದೃಢವಾಗಿದ್ದಾರೆ ಎಂಬ ಬಗ್ಗೆ ನಡೆಸಿದ ಪರೀಕ್ಷೆಯೊಂದರಲ್ಲಿ, ಶೇಕಡ 87ರಷ್ಟು ಮಂದಿ ಒಂದೋ ಅತಿಯಾದ ತೂಕ ಹೊಂದಿದ್ದಾರೆ ಅಥವಾ ಕಡಿಮೆ ತೂಕದ ಸಮಸ್ಯೆ ಎದುರಿಸುತ್ತಿದ್ದಾರೆ ಎಂಬ ಅಂಶ ಪತ್ತೆಯಾಗಿದೆ. ನಗರದ 18,665 ಪೊಲೀಸರನ್ನು ಈ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈ ಪೈಕಿ 7,500 ಮಂದಿ ಪೊಲೀಸರು ಬೊಜ್ಜಿನ ಸಮಸ್ಯೆ ಎದುರಿಸುತ್ತಿರುವುದು ಗೊತ್ತಾಗಿದೆ. 3,746 ಮಂದಿ ಅತಿಯಾದ ತೂಕ ಹೊಂದಿದ್ದಾರೆ, ಸರಿಸುಮಾರು ಐದು ಸಾವಿರ ಮಂದಿ ಕಡಿಮೆ ತೂಕ ಹೊಂದಿದ್ದಾರೆ. ಅಂದರೆ, 2,369 ಮಂದಿ ಪೊಲೀಸರು ಮಾತ್ರ ದೈಹಿಕವಾಗಿ ಸದೃಢರಾಗಿದ್ದಾರೆ. ಇವರ ಪ್ರಮಾಣವು ಬೆಂಗಳೂರು ನಗರದ ಒಟ್ಟು ಪೊಲೀಸರಲ್ಲಿ ಶೇಕಡ 13ರಷ್ಟು ಮಾತ್ರ. ಬೆಂಗಳೂರಿನ ಜನಸಂಖ್ಯೆ, ವಾಹನಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಹೀಗಿರುವಾಗ, ಪೊಲೀಸರು ದೈಹಿಕವಾಗಿ ಸದೃಢರಾಗಿ ಇರದೇ ಇದ್ದರೆ, ಅವರು ತಮ್ಮ ಕೆಲಸವನ್ನು ಹೇಗೆ ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲರು ಎಂಬ ಪ್ರಶ್ನೆ ಮೂಡುತ್ತದೆ. ಕೆಲಸದ ಅವಧಿಯಲ್ಲಿನ ಅನಿಶ್ಚಿತತೆ, ಪೊಲೀಸರು ಆಹಾರ ಸೇವಿಸುವುದರಲ್ಲಿ ಶಿಸ್ತು ಇಲ್ಲದಿರುವುದು, ಅತಿಯಾದ ಒತ್ತಡ ಹಾಗೂ ಜೀವನಶೈಲಿ ಉತ್ತಮವಾಗಿ ಇಲ್ಲದೇ ಇರುವುದು ಈ ರೀತಿ ಆಗಿರುವುದಕ್ಕೆ ಕಾರಣ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ ಹೇಳಿದ್ದಾರೆ. ಅಲ್ಲದೆ, ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಅಗತ್ಯ ಸಂಖ್ಯೆಯಲ್ಲಿ ಸಿಬ್ಬಂದಿ ಇಲ್ಲ. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪಾಲನೆ ವಿಭಾಗದಲ್ಲಿಯೇ ಸಿಬ್ಬಂದಿ ಕೊರತೆಯು ಶೇಕಡ 15ರಿಂದ ಶೇ 20ರಷ್ಟು ಇದೆ. ಇದು ಈಗಿರುವ ಸಿಬ್ಬಂದಿಯ ಮೇಲಿನ ಕಾರ್ಯಭಾರವನ್ನು ಹೆಚ್ಚು ಮಾಡುತ್ತದೆ. ಪೊಲೀಸರು ಒತ್ತಡದಲ್ಲಿ ಕೆಲಸ ಮಾಡುವುದು ಹಾಗೂ ಕೆಲಸ ಮತ್ತು ವೈಯಕ್ತಿಕ ಜೀವನದ ನಡುವಿನ ಸಮತೋಲನದ ಕೊರತೆಯು ಮಾನಸಿಕವಾಗಿಯೂ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಇದು ಪೊಲೀಸರ ದೇಹದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಕೆಲಸದ ವೇಳೆ ನಿಶ್ಚಿತವಾಗಿ ಇಲ್ಲದೇ ಇರುವಾಗ, ಸಿಬ್ಬಂದಿಗೆ ಆಹಾರ ಸೇವನೆಯಲ್ಲಿ ಶಿಸ್ತು ಮೂಡಿಸಿಕೊಳ್ಳುವುದು ಕಷ್ಟ ಆಗುತ್ತದೆ. ಅವರಿಗೆ ಸರಿಯಾಗಿ ನಿದ್ರೆಯೂ ಇರುವುದಿಲ್ಲ. ಅಪರಾಧ ಪ್ರಕರಣಗಳ ತನಿಖೆಯು ಪೊಲೀಸ್ ಸಿಬ್ಬಂದಿಯ ಮಾನಸಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆಯಾದರೂ, ಅವರಲ್ಲಿ ಹೆಚ್ಚಿನವರು ಕೌನ್ಸೆಲಿಂಗ್‌ಗೆ ಮುಂದಾಗುವುದಿಲ್ಲ. ಪೊಲೀಸರ ಪಾಲಿಗೆ ಕರ್ತವ್ಯದ ಕರೆಯು ಆಹಾರ, ನಿದ್ದೆ ಮತ್ತು ವ್ಯಾಯಾಮದ ವಿಚಾರದಲ್ಲಿ ಶಿಸ್ತಿನ ಜೀವನ ನಡೆಸಲು ಅವಕಾಶ ಕಲ್ಪಿಸುವುದಿಲ್ಲ. ಇನ್ನೊಂದೆಡೆ, ಕೆಲಸಕ್ಕೆ ಸಂಬಂಧಿಸಿದ ಒತ್ತಡಗಳು ಅವರು ಧೂಮಪಾನ, ಮದ್ಯ ಸೇವನೆಯ ಮೊರೆಹೋಗುವಂತೆ ಮಾಡುವ ಅಪಾಯ ಇರುತ್ತದೆ. ಅದು ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ.



ಪೊಲೀಸ್ ಸಿಬ್ಬಂದಿಯ ಕೆಲಸದ ಸ್ಥಿತಿಯನ್ನು ಸುಧಾರಿಸಲು ಹಲವು ಉಪಕ್ರಮಗಳ ಅಗತ್ಯ ಇದೆ

ಪೊಲೀಸರ ದೈಹಿಕ ಸಾಮರ್ಥ್ಯದ ಬಗೆಗಿನ ಚರ್ಚೆಯು ದೇಶದಾದ್ಯಂತ ದಶಕಗಳಿಂದಲೂ ನಡೆದಿದೆ. ಆದರೆ, ಸಮಸ್ಯೆಯನ್ನು ಪರಿಹರಿಸಲು ಗಂಭೀರವಾಗಿ ಯಾವ ಉಪಕ್ರಮವನ್ನೂ ಕೈಗೊಂಡಂತೆ ಕಾಣುತ್ತಿಲ್ಲ. ಕಳೆದ ವರ್ಷ ಅಸ್ಸಾಂ ಸರ್ಕಾರವು ಒಂದು ಆದೇಶ ಹೊರಡಿಸಿ, ಆರು ತಿಂಗಳಲ್ಲಿ ದೈಹಿಕ ಕ್ಷಮತೆಯ ಮಟ್ಟವನ್ನು ತಲುಪಲು ಸಾಧ್ಯವಾಗದೇ ಇದ್ದರೆ ಬೊಜ್ಜು ಇರುವ ಪೊಲೀಸರು ಕಡ್ಡಾಯ ನಿವೃತ್ತಿ ಪಡೆಯಬೇಕಾಗುತ್ತದೆ ಎಂದು ಹೇಳಿತ್ತು. ಈ ರೀತಿಯಲ್ಲಿ ಶಿಕ್ಷೆಯ ಮೂಲಕ ಸುಧಾರಣೆಯನ್ನು ತರುವ ನಡೆಯು ಅಸೂಕ್ಷ್ಮ ಕ್ರಮವಾಗುತ್ತದೆ. ಏಕೆಂದರೆ, ಸ್ಥೂಲಕಾಯದಂತಹ ಸಮಸ್ಯೆಗಳು ಪೊಲೀಸ್ ಕೆಲಸದ ಕಠಿಣ ಸ್ವರೂಪದಿಂದಾಗಿಯೂ ಬರುತ್ತವೆ.

ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯು (ಕೆಎಸ್‌ಆರ್‌ಪಿ) 2021ರಲ್ಲಿ ವಿನೂತನವಾದ ಕ್ರಮವೊಂದನ್ನು ಕೈಗೊಂಡಿತ್ತು. ವ್ಯಾಯಾಮ ಹಾಗೂ ಆಹಾರಕ್ಕೆ ಸಂಬಂಧಿಸಿದ ಕ್ರಮ ಇದಾಗಿತ್ತು. ಈ ಕ್ರಮದ ಪರಿಣಾಮವಾಗಿ, ಸ್ಥೂಲಕಾಯ ಹೊಂದಿದ್ದ 1,000 ಮಂದಿ ಪೊಲೀಸ್ ಸಿಬ್ಬಂದಿ ಎರಡು ತಿಂಗಳ ಅವಧಿಯಲ್ಲಿ ದೈಹಿಕ ದೃಢತೆಯನ್ನು ಸಾಧಿಸಿದ್ದರು. ಈ ಮಾದರಿಯನ್ನು ಬೆಂಗಳೂರು ನಗರ ಪೊಲೀಸರು ಪರಿಶೀಲಿಸಬಹುದು ಹಾಗೂ ಬಹುಶಃ ಇದನ್ನು ಅನುಕರಿಸಲೂಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ, ಈಗ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದ ಹಾಗೂ ಪೊಲೀಸ್ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕಾದ ಅಗತ್ಯ ಇದೆ. ಬೆಂಗಳೂರು ಬೆಳೆಯುತ್ತಿರುವುದನ್ನು ಕಂಡಾಗ ಈ ಅಗತ್ಯದ ಅರಿವು ಆಗುತ್ತದೆ. ಹಾಗೆ ಮಾಡಿದಾಗ ಪೊಲೀಸರಿಗೆ ಕರ್ತವ್ಯ ಹಾಗೂ ವೈಯಕ್ತಿಕ ಜೀವನದ ನಡುವೆ ಉತ್ತಮ ಸಮತೋಲನವನ್ನು ಸಾಧಿಸಲು ಸಾಧ್ಯವಾಗುತ್ತದೆ. ಪೊಲೀಸ್ ಸಿಬ್ಬಂದಿಯ ಕೆಲಸದ ಸ್ಥಿತಿಯನ್ನು ಸುಧಾರಿಸಲು ಹಲವು ಉಪಕ್ರಮಗಳ ಅಗತ್ಯ ಇದೆ.

ಸಂತ್ರಸ್ತೆಯರ ಮುಂದಿನ ಬದುಕು ಹೇಗೆ ಎಂಬ ಪ್ರಶ್ನೆಯು ಸರ್ಕಾರ, ಸಮಾಜವನ್ನು ಕಾಡಬೇಕು

ಸ್ತ್ರೀ ಸಂಕಟ: ತಾತ್ವಿಕ ಹೋರಾಟ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಹಾಸನದ ಪೆನ್‌ಡ್ರೈವ್ ಪ್ರಕರಣವು ಈಗ ದೇಶದಾದ್ಯಂತ ಹರಡಿದ ಸುದ್ದಿಯಾಗಿದೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಈ ಪ್ರಕರಣಕ್ಕೆ ಅಂಟಿಕೊಂಡ ಅನೇಕ ಆಯಾಮಗಳು ಅನಾವರಣಗೊಳ್ಳುತ್ತಿವೆ. ಸರಳತೆಗೆ ಜಟಿಲತೆಯನ್ನು ತರುವ, ಸ್ಪಷ್ಟತೆಗೆ ಅಸ್ಪಷ್ಟತೆಯ ಹುಳ ಬಿಡುವ ಪ್ರಯತ್ನಗಳು ನಡೆಯುತ್ತಿವೆ. ಇವು ಪ್ರಜ್ಞಾಪೂರ್ವಕ ಪ್ರಯತ್ನಗಳು. ಹೀಗಾಗಿ, ಮಹಿಳಾ ದೌರ್ಜನ್ಯದ ಪ್ರಕರಣವು ಪಕ್ಷ ರಾಜಕೀಯ, ವ್ಯಕ್ತಿ ರಾಜಕೀಯ, ಕುಟುಂಬ ರಾಜಕೀಯ ಹಾಗೂ ಜಾತಿ ನಾಯಕತ್ವದ ಆರೋಪ- ಪ್ರತ್ಯಾರೋಪದ ಆಯಾಮಗಳನ್ನು ಪಡೆದುಕೊಂಡಿದೆ.

ಮಹಿಳೆಯರನ್ನು ಬಳಸಿಕೊಂಡು ವಿಡಿಯೊ ಮಾಡಿಕೊಂಡ ಪ್ರಕರಣಕ್ಕಿಂತ ಮಿಗಿಲಾಗಿ ಕೆಲವರ ನಡುವೆ ನಡೆದ ಮಾತುಕತೆಯ ಆಡಿಯೊಗಳು ಸದ್ದು ಮಾಡುತ್ತಿವೆ. ಆಡಿಯೊಗಳಿಗೆ ವಿಡಿಯೊಗಳನ್ನು ಹತ್ತಿಕ್ಕುವ ಶಕ್ತಿ ಬಂದು, ಇಡೀ ಪ್ರಕರಣದ ಕೇಂದ್ರ ಕಾಳಜಿ ಕಳೆದುಹೋಗದಂತೆ ನೋಡಿಕೊಳ್ಳುವುದು ಈಗ ಮುಖ್ಯವಾಗಿದೆ.

ತನಿಖೆಯ ಕುರಿತು ಕೂಡ ರಾಜಕೀಯ ವರಸೆಯೇ ವ್ಯಕ್ತವಾಗುತ್ತಿದೆ. ನಮ್ಮ ‘ವಿಶೇಷ ತನಿಖಾ ತಂಡ’ವೇ ಸಮರ್ಥವಾಗಿದೆ ಎಂದು ಆಡಳಿತ ಪಕ್ಷವು ಸಮರ್ಥಿಸಿಕೊಂಡರೆ, ವಿರೋಧ ಪಕ್ಷಗಳು ಸಿಬಿಐಗೆ ಒಪ್ಪಿಸಿ ಎಂದು ಒತ್ತಾಯಿಸುತ್ತಿವೆ. ರಾಜ್ಯ ಸರ್ಕಾರಕ್ಕೆ ವಿಶೇಷ ತನಿಖಾ ತಂಡದ ಮೂಲಕ ಕೆಲವರನ್ನು ಪ್ರಕರಣದಲ್ಲಿ ಸಿಕ್ಕಿಸುವ ಹುನ್ನಾರವಿದೆಯೆಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ. ಸಿಬಿಐಗೆ ವಹಿಸಿದರೆ ಕೇಂದ್ರ ಸರ್ಕಾರದ ನೆರವಿನಿಂದ ಪ್ರಕರಣವನ್ನು ಮುಚ್ಚಿಹಾಕುವಂತೆ ಮಾಡಲಾಗುತ್ತದೆ ಎಂಬ ಆರೋಪವು ಆಡಳಿತ ಪಕ್ಷ ಹಾಗೂ ಸರ್ಕಾರದ್ದಾಗಿದೆ.

ಈ ಆರೋಪ- ಪ್ರತ್ಯಾರೋಪಗಳಲ್ಲಿ ಯಾರು ಪೆನ್‌ಡ್ರೈವ್ ಮಾಡಿಸಿದರು ಮತ್ತು ಹಂಚಿಸಿದರು ಎಂಬ ವಿಷಯವು ಮುಖ್ಯವಾಗುತ್ತಿದೆ. ಹೀಗೆ ಜಿದ್ದಿನ ಜಗಳಕ್ಕೆ ಬಿದ್ದವರ ಮಾತುಗಳಲ್ಲಿ ಮೂಲತಃ ಮುಖ್ಯವಾದ ಮಹಿಳಾ ದೌರ್ಜನ್ಯದ ವಿಷಯ ಅನಿವಾರ್ಯವಾಗಿ ಅಲ್ಲಲ್ಲೇ ಪ್ರಸ್ತಾಪವಾಗುತ್ತದೆಯಾದರೂ ಸರಳ ಗುರಿಯನ್ನು ಪಡೆಯಬೇಕಾಗಿದ್ದ ಪ್ರಕರಣವು ಜಟಿಲ ಜೇಡರ ಬಲೆಯಾಗಿ ಕಾಣುತ್ತಿದೆ. ನೇರ ಗುರಿಯ ಹಾದಿಯಲ್ಲಿ ಕಲ್ಲುಮುಳ್ಳುಗಳು ಕೆಣಕುತ್ತಿವೆ.

ಹಾಗಾದರೆ ಪೆನ್‌ಡ್ರೈವ್ ಮಾಡಿಸಿದವರು ಮತ್ತು ಹಂಚಿದವರು ಯಾರೆಂದು ಪತ್ತೆ ಹಚ್ಚಬಾರದೇ ಎಂದು ಕೆಲವರು ಪ್ರಶ್ನಿಸಬಹುದು. ನಿಜ, ಮಹಿಳೆಯರ ಮುಖಗಳನ್ನು ಬಯಲು ಮಾಡಿದವರನ್ನು ಪತ್ತೆ ಹಚ್ಚುವುದೂ ತನಿಖೆಯ ಒಂದು ಭಾಗವಾಗಲಿ. ಆದರೆ ಈಗ ಒಂದು ಆದ್ಯತೆಯಾಗಬೇಕಾದದ್ದು ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯದ ದೂರುಗಳನ್ನು ಆಧರಿಸಿದ ತನಿಖೆ. ಈ ತನಿಖೆಯು ತನಗೆ ಎದುರಾಗುತ್ತಿರುವ ಅನ್ಯ ವಿವಾದಗಳನ್ನು ಮೀರಿ ತಾರ್ಕಿಕ ಅಂತ್ಯ ಕಾಣಬೇಕಾಗಿದೆ.

ಹಾಸನದ ಈ ಪ್ರಕರಣದ ಮೂಲಕ ನಾವು ಒಂದು ತಾತ್ವಿಕ ಆಯಾಮವನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ದೌರ್ಜನ್ಯವೆಸಗಿ ಚಿತ್ರೀಕರಿಸಿಕೊಂಡ ವ್ಯಕ್ತಿಯೂ ಪುರುಷ, ಪೆನ್‌ಡ್ರೈವ್ ರೂವಾರಿಗಳೂ ಪುರುಷರು. ಪೆನ್‌ಡ್ರೈವ್ ಕುರಿತು ಆಡಿಯೊ ಹೊರಬಿಟ್ಟು ಆರೋಪ- ಪ್ರತ್ಯಾರೋಪಗಳಲ್ಲಿ ತೊಡಗಿದವರೂ ಪುರುಷರು. ಹೀಗಾಗಿ ‘ಪೆನ್‌ಡ್ರೈವ್’ ಎನ್ನುವುದು ಪುರುಷಾಧಿಕಾರದ ಒಂದು ಪ್ರತೀಕವಾಗಿದೆ. ನಮ್ಮ ಸಾಮಾಜಿಕ ಸಂರಚನೆಯಲ್ಲಿ ಆರ್ಥಿಕ ನಿಯಂತ್ರಣ ಸಾಧಿಸಿದ ‘ಪುರುಷ’ನು ಮಹಿಳೆಯರನ್ನು ಅಧೀನ ಆಟಿಕೆಯಾಗಿ ಬಳಸಿಕೊಳ್ಳುವ ಅಧಿಕಾರ ಮತ್ತು ಅಹಂಕಾರವನ್ನು ಪಡೆಯುತ್ತಾ ಬಂದಿದ್ದಾನೆ. ಮಹಿಳಾ ವಿಮೋಚನೆಗಾಗಿ ನಡೆದ ಚಳವಳಿಗಳು ಮತ್ತು ಸುಧಾರಣೆಗಳ ಫಲವಾಗಿ ಪುರುಷಾಧಿಕಾರ ಒಂದಷ್ಟು ಕಡಿಮೆಯಾಗಿದ್ದರೂ ಪೂರ್ಣ ಬದಲಾವಣೆಯಾಗಿಲ್ಲ. ಜೊತೆಗೆ ಆಸ್ತಿ, ಅಂತಸ್ತು, ಅಧಿಕಾರವನ್ನು ಪಡೆದಿದ್ದ ಫ್ಯೂಡಲ್ ಪದ್ಧತಿ ಸಡಿಲಗೊಂಡಿದ್ದರೂ ಪೂರ್ಣ ನಾಶವಾಗಿಲ್ಲ. ನಮ್ಮ ಪ್ರಜಾಪ್ರಭುತ್ವ ಪದ್ಧತಿಯ ಒಳಗೇ ಫ್ಯೂಡಲ್ ಪ್ರವೃತ್ತಿಗಳು ಜಾಗೃತವಾಗಿವೆ. ಹೀಗಾಗಿ, ಪೆನ್‌ಡ್ರೈವ್ ಪ್ರಕರಣವು ವಿಕೃತ ಕಾಮತೃಷೆ ಮಾತ್ರವಾದುದಲ್ಲ. ಬೇಕಾಬಿಟ್ಟಿ ಲೈಂಗಿಕ ದೌರ್ಜನ್ಯಕ್ಕೆ ಕಾರಣವಾದ ಮನೋಭೂಮಿಕೆಯಲ್ಲಿ ಗಂಡಾಳಿಕೆಯ ಪುರುಷಪ್ರಧಾನ ಅಹಂಕಾರ ಮತ್ತು ಪಳೆಯುಳಿಕೆಯ ಫ್ಯೂಡಲ್ ಅಧಿಕಾರದ ಅಂಶಗಳು ಅಂತರ್ಗತವಾಗಿವೆ. ಇಡೀ ಪ್ರಕರಣವು ಪುರುಷ ಪ್ರಾಧಾನ್ಯ ದೌರ್ಜನ್ಯವಾಗಿದ್ದು, ಅದರ ಪ್ರತೀಕವಾಗಿ ವಿಡಿಯೊ, ಆಡಿಯೊ, ಆರೋಪ- ಪ್ರತ್ಯಾರೋಪಗಳೆಲ್ಲವನ್ನೂ ಮನಗಾಣಬಹುದಾಗಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ಗುರಿಗೊಂದು ಸ್ಪಷ್ಟತೆ ಮತ್ತು ತಾತ್ವಿಕತೆ ಅಗತ್ಯ. ಈ ಪೆನ್‌ಡ್ರೈವ್ ಪ್ರಕರಣದಲ್ಲಿ ಮಹಿಳಾ ದೌರ್ಜನ್ಯದ ವಿರುದ್ಧ ಒಡ್ಡುವ ಪ್ರತಿರೋಧಕ್ಕೆ ಹಾಸನ ಪ್ರಕರಣವೇ ಈಗಿನ ಮುಖ್ಯ ಗುರಿಯೆನ್ನುವುದು ನಿಜ. ಆದರೆ ಇದು ಒಬ್ಬ ವ್ಯಕ್ತಿಗೆ ಒಡ್ಡುವ ಪ್ರತಿರೋಧ ಮಾತ್ರವಲ್ಲ, ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ ಮತ್ತು ಫ್ಯೂಡಲಿಸಂ (ಊಳಿಗಮಾನ್ಯ ಪದ್ಧತಿ) ವಿರುದ್ಧದ ಪ್ರಜಾಸತ್ತಾತ್ಮಕ ತಾತ್ವಿಕ ಹೋರಾಟವೂ ಹೌದು.



ಇದೇ ಸಂದರ್ಭದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಇತರ ಕೆಲವು ಪ್ರಕರಣಗಳಲ್ಲಾದ ಬೆಳವಣಿಗೆಯನ್ನು ಗಮನಿಸಬಹುದು. ಹುಬ್ಬಳ್ಳಿಯ ನೇಹಾ ಎಂಬ ಹೆಣ್ಣುಮಗಳನ್ನು ಅಮಾನುಷವಾಗಿ ಹತ್ಯೆ ಮಾಡಿದಾಗ ಆಕೆ ಕೊಲೆಗಾರನ ಜೊತೆಗಿದ್ದ ಫೋಟೊಗಳನ್ನು ಬಹಿರಂಗಗೊಳಿಸುವ ‘ರಾಜಕೀಯ’ ಮಾಡಲಾಯಿತು. ನೇಹಾ ಮನೆಗೆ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಸ್ಪರ್ಧೆಗೆ ಬಿದ್ದವರಂತೆ ಭೇಟಿ ಕೊಡುವುದೂ ಒಂದು ರಾಜಕೀಯವೆಂಬ ಅನುಮಾನ ಬಂತು. ಯಾಕೆಂದರೆ ಚುನಾವಣೆ ಸಂದರ್ಭದಲ್ಲಿ ಈ ಹತ್ಯೆ ನಡೆದಿತ್ತು. ಇಲ್ಲಿ ಕೊಲೆಗಾರನ ಜಾತಿ-ಧರ್ಮವನ್ನು ಲೆಕ್ಕಿಸದೆ ಅತ್ಯಂತ ಶೀಘ್ರವಾಗಿ ಶಿಕ್ಷೆ ಕೊಡುವಂತೆ ಮಾಡುವುದು ಆದ್ಯತೆ ಆಗಬೇಕಿತ್ತು. ಇದೇ ಸಂದರ್ಭದ ಆಸುಪಾಸಿನಲ್ಲಿ ರುಕ್ಸಾನ ಎಂಬ ಹೆಣ್ಣುಮಗಳ ಹತ್ಯೆಯಾದದ್ದು ಮುನ್ನೆಲೆಗೆ ಬರದೆ ಮಸುಕಾಯಿತು. ಇದು ನಮ್ಮ ಕಾಲದ ರಾಜಕೀಯ ವಿಪರ್ಯಾಸಕ್ಕೊಂದು ಉದಾಹರಣೆ. ಆನಂತರ ಹುಬ್ಬಳ್ಳಿಯಲ್ಲಿ ಅಂಜಲಿ ಎಂಬ ಹೆಣ್ಣುಮಗಳ ಕೊಲೆಯಾಯಿತು. ಈ ಕುರಿತು ಮೌಖಿಕವಾಗಿ ದೂರು ನೀಡಿದ್ದರೂ ಪೊಲೀಸರು ಎಚ್ಚರ ವಹಿಸಲಿಲ್ಲ. ಅದಕ್ಕಾಗಿ ಕೆಲವರನ್ನು ಅಮಾನತು ಮಾಡಲಾಯಿತು. ಇಬ್ಬರ ಹತ್ಯೆ ಸಂಬಂಧವಾಗಿ ಆರೋಪಿಗಳನ್ನು ಶೀಘ್ರವಾಗಿ ಬಂಧಿಸಲಾಯಿತು. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಪ್ರಬುಧ್ಧಾ ಎಂಬ ಯುವತಿಯ ಅನುಮಾನಾಸ್ಪದ ಸಾವಿನ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ.ಇದೆಲ್ಲವನ್ನು ಮೆಚ್ಚೋಣ. ಆದರೆ, ತನಿಖೆಯೂ ಬೇಗ ಮುಗಿಯಬೇಕಲ್ಲವೆ? ಶೀಘ್ರ ಶಿಕ್ಷೆಯಾಗಬೇಕಲ್ಲವೆ? ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕೊನೆಯಿಲ್ಲವೆ? ಇಂಥ ಸತ್ಯಮೂಲ ಪ್ರಶ್ನೆಗಳನ್ನು ಹಾಸನದ ಪೆನ್‌ಡ್ರೈವ್ ಪ್ರಕರಣದಲ್ಲೂ ಕೇಳಬೇಕಾಗಿದೆ.

ಈ ಪ್ರಕರಣದಲ್ಲಿ ಅತ್ಯಂತ ಸಂಕಟಕರವಾದ ಒಂದು ಪ್ರಮುಖ ಆಯಾಮವಿದ್ದು, ಅದು ಲೈಂಗಿಕ ದೌರ್ಜನ್ಯ ಕ್ಕೊಳಗಾಗಿ ಗಾಸಿಗೊಂಡ ಮಹಿಳೆಯರ ಸ್ಥಿತಿಗತಿಗೆ ಸಂಬಂಧಿಸಿದೆ. ಈ ಪೆನ್‌ಡ್ರೈವ್‌ನಲ್ಲಿ ಅನೇಕ ಮಹಿಳೆಯರನ್ನು ಬಯಲಿಗೆ ತರಲಾಗಿದೆ. ಅಂಥವರು ಎದುರಿಸುತ್ತಿರುವ ಮಾನಸಿಕ ಸಂಕಷ್ಟಗಳು ಅಕ್ಷರಕ್ಕೆ ನಿಲುಕದ ನೋವುಗಳಾಗಿವೆ. ಈ ಮಹಿಳೆಯರು ಸಂತ್ರಸ್ತೆಯರಾಗುವುದಕ್ಕೆ ಪ್ರೇರಣೆಗಳು, ಕಾರಣಗಳು ಏನೇ ಇರಲಿ, ಅವರು ಅವಮಾನ, ಪಾಪಪ್ರಜ್ಞೆ, ಪರಕೀಯ ಪ್ರಜ್ಞೆಯ ಸಂಕಟಕ್ಕೆ ಈಡಾಗಿದ್ದಾರೆ. ಗಂಡಸು ಆರೋಪ ಎದುರಿಸುವುದಕ್ಕೂ ಹೆಣ್ಣು ಅವಮಾನಿತವಾಗುವುದಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಈ ಮಹಿಳೆಯರ ಮುಂದಿನ ಬದುಕು ಹೇಗೆ ಎಂಬ ಪ್ರಶ್ನೆ ಸರ್ಕಾರವನ್ನೂ ಕಾಡಬೇಕು, ಸಮಾಜವನ್ನೂ ಕಾಡಬೇಕು.

ಲೈಂಗಿಕ ದೌರ್ಜನ್ಯದ ವಿರುದ್ಧ ನಡೆಸುವ ನಮ್ಮ ಹೋರಾಟವು ಈ ಮಹಿಳೆಯರ ಸಮಸ್ಯೆಗೆ ಪರಿಹಾರ ಹುಡುಕುವ ಒಂದು ಜವಾಬ್ದಾರಿಯೂ ಆಗಬೇಕು. ಸೂಕ್ತ ಚಿಂತನೆಯ ಮೂಲಕ ಸರ್ಕಾರಕ್ಕೆ ಸಲಹೆಯನ್ನು ಕೊಡಬೇಕು. ಯಾಕೆಂದರೆ ಲೈಂಗಿಕ ದೌರ್ಜನ್ಯದ ವಿರುದ್ಧದ ಹೋರಾಟವು ಪ್ರಧಾನವಾಗಿ ಗಾಸಿಗೊಂಡ ಮಹಿಳೆಯರ ಪರವಾದ ಹೋರಾಟವೇ ಆಗಿದೆ. ತನ್ಮೂಲಕ ಎಲ್ಲ ದಮನಿತ ಮಹಿಳೆಯರ ಪರವಾದ ದನಿಯೂ ಆಗಿರುತ್ತದೆ. ಪುರುಷ ಪ್ರಣೀತ ಫ್ಯೂಡಲ್ ಪಳೆಯುಳಿಕೆಗೂ ಪ್ರತಿರೋಧ ಒಡ್ಡುತ್ತದೆ. ಇಂಥ ತಾತ್ವಿಕತೆಯನ್ನು ಒಳಗೊಂಡ ಹೋರಾಟ ಸದಾ ಅರ್ಥಪೂರ್ಣವಾಗಿರುತ್ತದೆ.

ಚುರುಮುರಿ



ಎಲ್ಲ ದೇವರಿಚ್ಛೆ!

• ಬಿ.ಎನ್.ಮಲ್ಲೇಶ್

ಮಧ್ಯರಾತ್ರಿ ಮಂತ್ರಿಗಳ ಮನೆ ಹತ್ತಿರ ಕುಡಿದು ಗಲಾಟೆ ಮಾಡುತ್ತಿದ್ದ ಎಂಬ ಕಾರಣಕ್ಕೆ ತೆಪರೇಸಿಯನ್ನು ಪೊಲೀಸ್ ಠಾಣೆಗೆ ಕರೆತಂದಿದ್ದರು.

ಇನ್‌ಸ್ಪೆಕ್ಟರು ಸಿನಿಮಾ ಸ್ಟೈಲಲ್ಲಿ ಲಾಠಿ ತಿರುಗಿಸುತ್ತ ಕೇಳಿದರು ‘ಏನಯ್ಯಾ ನಿನ್ ಹೆಸರು? ಇಷ್ಟೊತ್ತಲ್ಲಿ ಮಿನಿಸ್ಟರ್ ಮನೆ ಹತ್ರ ಯಾಕೋಗಿದ್ದೆ?’

‘ನಾನು ತೆಪರೇಸಿ ಅಂತ. ಮಿನಿಸ್ಟರ್ ಮನೆಗೆ ಹೋಗಿದ್ನಾ? ಗೊತ್ತಿಲ್ಲ ಸಾ, ಎಲ್ಲ ದೇವರ ಆಟ’.

‘ಏನು? ದೇವರ ಆಟನಾ? ತಗುದು ಬುಟ್ರಾ ಅಂದ್ರೆ ತೋಪ್ ನಿಕಾಲ್ ಆಗ್ಬಿಡಬೇಕು. ಸರಿಯಾಗಿ ಮಾತಾಡು’.

‘ಗೊತ್ತಿಲ್ಲ ಸಾ... ನೆನಪಿಲ್ಲ, ದೇವರೇ ಆ ದಾರಿ ತೋರಿಸಿರ್ಬೇಕು’.

‘ಈ ನಾಟಕ ಎಲ್ಲ ಬ್ಯಾಡ, ಸರಿಯಾಗಿ ಮಾತಾಡು. ಇಲ್ಲಾಂದ್ರೆ ಏರೋಪ್ಲೇನ್ ಹತ್ತಿಸ್ತೀನಿ ಅಷ್ಟೆ’.

‘ಆಟೊ ಹತ್ತಿದ್ದಕ್ಕೇ ಪೊಲೀಸ್ ಸ್ಟೇಷನ್‌ಗೆ ಬಂದಿದೀನಿ, ಏರೋಪ್ಲೇನ್ ಹತ್ತಿದ್ರೆ ಇನ್ನೆಲ್ಲಿಗೆ ಹೋಗ್ತೀನೋ. ಇನ್ನೇನ್ಮಾಡೋದು, ದೇವರು ಎಲ್ಲಿಗೆ ಕಳಿಸ್ತಾನೆ ಅಲ್ಲಿಗೆ ಹೋಗೋದು’.

‘ಏಯ್, ಎಲ್ಲದ್ಕೂ ದೇವರು ದೇವರು ಅಂತೀಯ? ಒದ್ದು ಒಳಗಾಕ್ತೀನಿ ನೋಡೀಗ’.

‘ಹಾಕಿ ಸಾ... ದೇವರಿಚ್ಛೆ ಇದ್ರೆ ಅದೂ ಆಗ್ಲಿ. ಅಲ್ಲ ಸಾ, ದೊಡ್ ದೊಡ್ಡೋರು ‘ದೇವರೇ ನನ್ನ ಇಲ್ಲಿಗೆ ಕಳಿಸಿದಾನೆ’ ಅಂದ್ರೆ ನಂಬ್ತೀರಿ, ಜುಜುಬಿ ನಮ್ಮಂತೋರು ಹೇಳಿದ್ರೆ ಯಾಕ್ಸಾ ನಂಬಲ್ಲ?’

ಇನ್‌ಸ್ಪೆಕ್ಟರಿಗೆ ತಲೆ ಕೆಟ್ಟುಹೋಯಿತು ‘ಪುಣ್ಯಾತ್ಮ, ನೀನು ಎಲ್ಲಿಗೆ ಹೋಗಬೇಕಾಗಿತ್ತು ಅದ್ನಾದ್ರೂ ಹೇಳು’.

‘ಮಾವನ ಮನೆಗೆ... ಆಟೋದವನಿಗೆ ಹೇಳಿದ್ದೆ, ಅವ್ನು ಮಿನಿಸ್ಟರ್ ಮನಿ ಹತ್ರ ಬಿಟ್ಟು ಹೋದ್ರೆ ನಾನೇನ್ ಮಾಡ್ಲಿ?’

‘ನಿಂಗೆ ಮಾವನ ಮನೆ ಅಡ್ರೆಸ್ ಗೊತ್ತಿರಲಿಲ್ವಾ?’

‘ಗೊತ್ತಿತ್ತು, ಫುಲ್ ಟೈಟಾಗಿದ್ನಲ್ಲ, ಗೂಗಲ್ ಮ್ಯಾಪ್ ಹಾಕಿಕೊಟ್ಟಿದ್ದೆ. ಮಂತ್ರಿ ಮಾಲ್ ಕ್ರಾಸ್ ಹತ್ರ ಮಾವನ ಮನೆ ಅಂತಾನೂ ಹೇಳಿದ್ದೆ, ಗೂಗಲ್ಲು ಮಂತ್ರಿ ಮಾಲ್ ತೋರ್ಸೋ ಬದ್ಲು ಮಂತ್ರಿ ಮನೆ ತೋರ್ಸಿದ್ರೆ ನಾನೇನ್ ಮಾಡ್ಲಿ? ಎಲ್ಲ ದೇವರಿಚ್ಛೆ...’ ತೆಪರೇಸಿ ತೊದಲಿದ. ಇನ್‌ಸ್ಪೆಕ್ಟರು ಲಾಠಿ ಬಿಸಾಕಿ ಎದ್ದು ಹೊರನಡೆದರು.

ದಿನದ ಟ್ವೀಟ್

ಅಪಘಾತ ತಪ್ಪಿಸುವ ಹೊಣೆ ಎಲ್ಲರದು



ಹಾಸನದಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ 6 ಮಂದಿ ಮೃತಪಟ್ಟಿದ್ದಾರೆ. ಕಳೆದ 24 ಗಂಟೆಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ 51 ಮಂದಿ ಜೀವ ಕಳೆದುಕೊಂಡಿದ್ದು, ಇದು ಇತ್ತೀಚಿನ ದಿನಗಳಲ್ಲಿ ನಡೆದ ರಸ್ತೆ ಅಪಘಾತಗಳಲ್ಲಿ ಸಂಭವಿಸಿರುವ ಅತಿ ಹೆಚ್ಚಿನ ಜೀವಹಾನಿಯಾಗಿದೆ. ಇವುಗಳಲ್ಲಿ ಹೆಚ್ಚಿನವುಗಳಿಗೆ ಅತಿವೇಗ ಮತ್ತು ಅಜಾಗರೂಕ ಚಾಲನೆಯೇ ಕಾರಣ. ರಸ್ತೆ ಸುರಕ್ಷತೆ ಕಾಯ್ದುಕೊಳ್ಳಬೇಕಾದರೆ ಸಂಬಂಧಪಟ್ಟ ಎಲ್ಲರೂ ಜವಾಬ್ದಾರಿಯಿಂದ ವರ್ತಿಸಬೇಕು.

ಅಲೋಕ್ ಕುಮಾರ್, ಎಡಿಜಿಪಿ, ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ

ಕಿಡಿನುಡಿ



ಇಂತಹ ಮೂರ್ಖ ನೀತಿಗಳನ್ನು ರೂಪಿಸುವವರ ಮಕ್ಕಳು ಎಲ್ಲಿ ಓದುತ್ತಿದ್ದಾರೆ ಮತ್ತು ಯಾವ ಭಾಷೆಯನ್ನು ಕಲಿಯುತ್ತಿದ್ದಾರೆ ಎಂಬುದನ್ನು ದಯಮಾಡಿ ಪರಿಶೀಲಿಸಿ!

(ಪುಣೆಯಲ್ಲಿ 11 ಮತ್ತು 12ನೇ ತರಗತಿ ಮಕ್ಕಳು ಇಂಗ್ಲಿಷ್ ವಿಷಯವನ್ನು ಕಡ್ಡಾಯವಾಗಿ ಕಲಿಯುವ ಬದಲು, ಒಂದು ಭಾರತೀಯ ಭಾಷೆ, ಮತ್ತೊಂದು ಭಾರತೀಯ ಅಥವಾ ವಿದೇಶಿ ಭಾಷೆಗಳಲ್ಲಿ ಒಂದನ್ನು ಆರಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದಕ್ಕೆ ಪ್ರತಿಕ್ರಿಯೆ)

ಮೆಲ್ವಿನ್ ಲೂಯಿಸ್

25 ವರ್ಷಗಳ ಹಿಂದೆ

ಗುರುವಾರ, 27-5-1999

• ಕಾರ್ಗಿಲ್: ಉಗ್ರರ ನೆಲೆ ಮೇಲೆ ವಾಯುದಾಳಿ

ನವದೆಹಲಿ, ಮೇ 26 (ಯುಎನ್‌ಐ, ಪಿಟಿಐ)– ಪಾಕಿಸ್ತಾನ ಬೆಂಬಲಿತ ಉಗ್ರರು ಗಣನೀಯ ಸಂಖ್ಯೆಯಲ್ಲಿರುವ ಜಮ್ಮು–ಕಾಶ್ಮೀರದ ಕಾರ್ಗಿಲ್ ವಲಯದಲ್ಲಿ ಭಾರತದ ವಾಯುಪಡೆಗಳು ಇಂದು ನಸುಕಿನಲ್ಲಿ ವ್ಯಾಪಕ ದಾಳಿ ನಡೆಸಿದವು. ಭಾರತದ ಸಂಯುಕ್ತ ಪಡೆಗಳು ಈ ವಲಯವನ್ನು ಸುತ್ತುವರಿದು ನುಸುಳಿ ಬಂದಿರುವ ಉಗ್ರರನ್ನು ಹೊರಹಾಕುವವರೆಗೂ ಯುದ್ಧ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳು ಅವ್ಯಾಹತವಾಗಿ ದಾಳಿ ಮುಂದುವರಿಸಲಿವೆ.

ದಾಳಿಗೆ 160 ಮಂದಿ ಪಾಕ್ ಬೆಂಬಲಿತ ಉಗ್ರಗಾಮಿಗಳು ಬಲಿಯಾಗಿದ್ದಾರೆ. 17 ಭಾರತೀಯ ಯೋಧರು ಮೃತಪಟ್ಟಿದ್ದು, 14 ಮಂದಿ ಕಣ್ಮರೆಯಾಗಿದ್ದಾರೆ.

ಭಾರತ ಮತ್ತು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಯ ಪ್ರಧಾನ ನಿರ್ದೇಶಕರು ಇಂದು ದೂರವಾಣಿ ಮೂಲಕ ಸಂಪರ್ಕ ಕಲ್ಪಿಸಿಕೊಂಡು ಕಾರ್ಗಿಲ್ ವಲಯದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದರು.

50 ವರ್ಷಗಳ ಹಿಂದೆ

ಸೋಮವಾರ, 27-5-1974

• ಕ್ಯಾನ್ಸರ್ ವಿರುದ್ಧ ಬದಲಿ ಅಂಗಾಂಶ ಜೋಡಣೆ

ಜೈಪುರ, ಮೇ 26– ರೋಗಿಯೊಬ್ಬರ ಕತ್ತಿನಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿದ್ದ ಭಾಗ ವನ್ನು ತೆಗೆದುಹಾಕಿ, ಆಕೆಯ ದೇಹದ ಬೇರೆಡೆಗಳಿಂದ ತೆಗೆದ ಅಂಗಾಂಶಗಳನ್ನು ಅಲ್ಲಿಗೆ ಜೋಡಿಸುವ ಯಶಸ್ವಿ ಶಸ್ತ್ರಕ್ರಿಯೆಯೊಂದು ಭಾರತದಲ್ಲೇ ಪ್ರಥಮ ಬಾರಿಗೆ ನಡೆಯಿತು.

ಸವಾಯಿ ಮಾನ್‌ಸಿಂಗ್ ಆಸ್ಪತ್ರೆಯ ವೈದ್ಯ ಡಾ. ಬಿ.ಎಸ್. ಚಾಂದೋಲಿಯಾ ಅವರು ಈ ಶಸ್ತ್ರಕ್ರಿಯೆ ಪೂರೈಸಲಾಯಿತೆಂದು ಇಂದು ತಿಳಿಸಿದರು.

ಗಲ್ಲ ಮತ್ತು ಗಂಟಲುಗಳಲ್ಲಿ ಕಾಣಿಸಿಕೊಂಡಿದ್ದ ಕ್ಯಾನ್ಸರ್ ಹಿಡಿದ ಅಂಗಾಂಶಗಳನ್ನು ತೆಗೆದುಹಾಕಿ ಹಣೆ, ಭುಜ ಮತ್ತು ಎದೆ ಭಾಗಗಳಿಂದ ಕೊಯ್ದು ತೆಗೆದ ಚರ್ಮ ಮತ್ತು ಅಂಗಾಂಶಗಳನ್ನು ಅಲ್ಲಿಗೆ ಜೋಡಿಸಲಾಯಿತು.

• ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ ಪೂರ್ಣ

ಬೆಂಗಳೂರು, ಮೇ 26– ಈ ತಿಂಗಳ 31ರಿಂದ ಮೂರು ದಿನಗಳ ಕಾಲ ನಡೆಯುವ 48ನೆಯ ಸಾಹಿತ್ಯ ಸಮ್ಮೇಳನಕ್ಕಾಗಿ ಹೊರಗಡೆಯಿಂದ ಬರುವ 2 ಸಾವಿರ ಜನಪ್ರತಿನಿಧಿಗಳು ಇಳಿದುಕೊಳ್ಳಲು ವಸತಿ ಸೌಲಭ್ಯ ಕಲ್ಪಿಸಲಾಗಿದೆ.

ಮಂಡ್ಯದ ಕೆಲವು ಮಹನೀಯರು ಪ್ರತಿನಿಧಿಗಳಿಗಾಗಿ ತಮ್ಮ ಮನೆ ಬಿಟ್ಟುಕೊಡಲು ಮುಂದೆ ಬಂದಿದ್ದಾರೆ. ಸಮ್ಮೇಳನಕ್ಕೆ ಬರುವ ಮಹಿಳಾ ಪ್ರತಿನಿಧಿಗಳನ್ನು ಸೇಂಟ್ ಜೋಸೆಫ್ ಕಾನ್ವೆಂಟ್‌ನಲ್ಲಿ ಇಳಿಸಲು ವ್ಯವಸ್ಥೆ ಮಾಡಲಾಗಿದೆ.

ಸಂಗತ

ಹೊರಗುತ್ತಿಗೆ ಮತ್ತು ಅತಂತ್ರ ಸ್ಥಿತಿ

ಈ ವ್ಯವಸ್ಥೆಯನ್ನು ಸರ್ಕಾರವೇ ಮುಂದುವರಿಸುತ್ತಿರುವುದು ಅಪಾಯಕಾರಿ ಬೆಳವಣಿಗೆ

• ಮಲ್ಲಿಕಾರ್ಜುನ ಹೆಗ್ಗಳಗಿ

ವಿವಿಧ ಇಲಾಖೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಳ್ಳುವಾಗ ಮೀಸಲಾತಿ ನೀತಿಯನ್ನು ಕಡ್ಡಾಯವಾಗಿ ಪಾಲಿಸಬೇಕು, ಅದರ ಅನ್ವಯ ಮಹಿಳೆಯರಿಗೆ ಶೇಕಡ 33ರಷ್ಟು ಸ್ಥಾನಗಳನ್ನು ಮೀಸಲಿಡಬೇಕು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಸರ್ಕಾರದ ಈ ನಿರ್ಧಾರದಿಂದ ದುರ್ಬಲ ವರ್ಗಗಳಿಗೆ ಅನುಕೂಲ ಆಗುತ್ತದೆ ಎಂದು ಅರ್ಥೈಸಲಾಗಿದೆ. ಅವಕಾಶ ಕಲ್ಪಿಸುವ ವಿಚಾರಕ್ಕೆ ಸೀಮಿತವಾಗಿ ಹೇಳುವುದಾದರೆ ಈ ವಾದದಲ್ಲಿ ಹುರುಳಿದೆ. ಆದರೆ ಹೊರಗುತ್ತಿಗೆ ನೌಕರಿ ಎಂಬುದು ದುಡಿಯುವ ವರ್ಗದ ಶೋಷಣೆಗಾಗಿಯೇ ರೂಪುಗೊಂಡ ವ್ಯವಸ್ಥೆ ಎಂಬಂತೆ ಇದೆ. ಅಂತಹ ವ್ಯವಸ್ಥೆಯನ್ನು ಸರ್ಕಾರವೇ ಉಳಿಸಿ, ಮುಂದುವರಿಸಿಕೊಂಡು ಹೋಗುತ್ತಿರುವುದು ಎಷ್ಟು ಸರಿ? ಈ ಪ್ರಶ್ನೆ ಚರ್ಚೆಗೆ ಒಳಗಾಗಬೇಕಾದ ಅಗತ್ಯ ಇದೆ.

ಅರ್ಹ ನೌಕರರನ್ನು ನೇಮಿಸಿಕೊಂಡು ಅವರಿಗೆ ಸೂಕ್ತ ಸಂಬಳ, ಸೌಲಭ್ಯಗಳನ್ನು ಕೊಟ್ಟು ಗುಣಮಟ್ಟದ ಸೇವೆ ಪಡೆಯುವುದು ಸರ್ಕಾರದ ಹೊಣೆಗಾರಿಕೆ ಆಗಿದೆ. ಉದ್ಯೋಗ ಸೃಷ್ಟಿ, ದುಡಿಯುವ ಕೈಗಳಿಗೆ ಕೆಲಸ ಕೊಡುವುದು ಸರ್ಕಾರದ ಕರ್ತವ್ಯ. ಸಂಬಳದ ಹಣ ಉಳಿಸುವ ಕಾರಣಕ್ಕೆ ಯುವಕರನ್ನು ಹೊರಗುತ್ತಿಗೆಯ ಆಧಾರದಲ್ಲಿ ಕೆಲಸದಲ್ಲಿ ತೊಡಗಿಸುವುದು ಯಾವ ಸರ್ಕಾರಕ್ಕೂ ಭೂಷಣವಲ್ಲ.


ಹೊರಗುತ್ತಿಗೆ ಉದ್ಯೋಗಿಗಳ ಬದುಕು ಅತಂತ್ರ ಸ್ಥಿತಿಯಲ್ಲೇ ಇರುತ್ತದೆ. ಸರ್ಕಾರ ಟೆಂಡರ್ ಕರೆದು ಕೆಲಸಗಾರರನ್ನು ಪೂರೈಸುವ ಏಜೆನ್ಸಿಗಳನ್ನು ಗೊತ್ತುಪಡಿಸುತ್ತದೆ. ಟೆಂಡರ್ ಪಡೆಯುವಾಗಲೇ ವ್ಯಾವಹಾರಿಕವಾಗಿ ಪೈಪೋಟಿಗಳು ನಡೆಯುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ಏಜೆನ್ಸಿಗಳು ನೌಕರರಿಗೆ ಸರಿಯಾಗಿ ಸಂಬಳ ಕೊಡುವುದಿಲ್ಲ. ಕೈಗೆ ಬಂದ ಸಂಬಳದಲ್ಲಿ ಏಜೆನ್ಸಿಗಳಿಗೆ ಪ್ರತಿ ತಿಂಗಳು ನಿಗದಿತ ಹಣ ಕೊಡಬೇಕು, ಸರ್ಕಾರಿ ನೌಕರರು ಮತ್ತು ಅವರಿಗೆ ಸಮಾನವಾಗಿ ಕೆಲಸ ಮಾಡುವ ಗುತ್ತಿಗೆ ನೌಕರರ ಸಂಬಳದ ನಡುವೆ ದೊಡ್ಡ ಪ್ರಮಾಣದ ವ್ಯತ್ಯಾಸ ಇರುತ್ತದೆ. ಇದು, ಗುತ್ತಿಗೆ ನೌಕರರನ್ನು ಕೀಳರಿಮೆಯಾಗಿ ಕಾಡುತ್ತದೆ. ಉದ್ಯೋಗ ಭದ್ರತೆ ಇಲ್ಲ. ಪ್ರತಿವರ್ಷ ನವೀಕರಿಸಬೇಕು. ಏಜೆನ್ಸಿಗಳ ಬಳಿ ಅಂಗಲಾಚಿ ಪುನಃ ಕೆಲಸ ಪಡೆದುಕೊಳ್ಳಬೇಕು. ಟೆಂಡರ್ ಪ್ರಕ್ರಿಯೆಯಲ್ಲಿ ಏಜೆನ್ಸಿಗಳು ಬದಲಾದರೆ ಕೆಲಸಕ್ಕೆ ಕುತ್ತು. ಇದು ನಾಡಿನ ಉದ್ದಗಲಕ್ಕೂ ಹರಡಿರುವ ಹೊರಗುತ್ತಿಗೆ ನೌಕರರ ಕಣ್ಣೀರಿನ ಕಥೆ.

ಹೊರಗುತ್ತಿಗೆ ನೌಕರರನ್ನು ಕಾಯಂ ನೌಕರಿಗೆ ಪರಿಗಣಿಸುವಂತಿಲ್ಲ ಎಂದು ಮೀಸಲಾತಿ ನಿಗದಿಪಡಿಸಿದ ಆದೇಶದಲ್ಲಿಯೇ ಸರ್ಕಾರ ಸ್ಪಷ್ಟಪಡಿಸಿದೆ. ಹೊರಗುತ್ತಿಗೆ ನೌಕರರು ಸಂಘಟಿತರಾಗಿ, ಸಂಬಳ ಹೆಚ್ಚಿಸುವುದಕ್ಕೆ, ಕೆಲಸ ಕಾಯಂಗೊಳಿಸುವುದಕ್ಕೆ ಹೋರಾಟ ಮಾಡುವುದನ್ನು ತಡೆಯುವ ಉದ್ದೇಶ ಕೂಡ ಈ ಆದೇಶದಲ್ಲಿ ಅಡಗಿದೆ. ಇದು ಹೊರಗುತ್ತಿಗೆ ನೌಕರರನ್ನು ಇನ್ನಷ್ಟು ದುರ್ಬಲಗೊಳಿಸುತ್ತದೆ.

ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಕ ಮಾಡಿಕೊಳ್ಳುವ ವಿಧಾನವನ್ನು ರದ್ದು ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರ ‘ಗುತ್ತಿಗೆ ಪದ್ಧತಿಯ ನಿಯಂತ್ರಣ ಮತ್ತು ರದ್ದತಿ’ ಕಾನೂನನ್ನು 1970ರಲ್ಲಿ ರೂಪಿಸಿದೆ. ಗುತ್ತಿಗೆ ನೇಮಕ ಪದ್ಧತಿಯನ್ನು ಪೂರ್ಣವಾಗಿ ತೊಡೆದುಹಾಕುವುದು ಈ ಕಾನೂನಿನ ಮಹತ್ವದ ಆಶಯವಾಗಿದೆ. ‘ಸಮಾನ ಕೆಲಸಕ್ಕೆ ಸಮಾನ ವೇತನ’ ನೀಡುವ ಹಾಗೂ ‘ಕನಿಷ್ಠ ವೇತನ’ ಒದಗಿಸುವ ಮತ್ತು ‘ವೇತನದಲ್ಲಿ ಅನಧಿಕೃತ ಕಡಿತ’ ತಡೆಯುವ ಕಾನೂನುಗಳು ಜಾರಿಯಲ್ಲಿವೆ. ಹೊರಗುತ್ತಿಗೆ ಸಿಬ್ಬಂದಿ ಈ ಎಲ್ಲ ಕಾನೂನುಗಳಿಂದಲೂ ವಂಚಿತರಾಗಿದ್ದಾರೆ.

‘ಸರ್ಕಾರವೇ ಏಜೆನ್ಸಿಗಳನ್ನು ನೇಮಿಸುತ್ತದೆ. ಅವುಗಳ ಮೂಲಕವೇ ನೌಕರರ ಸಂಬಳ ಬಿಡುಗಡೆ ಮಾಡುತ್ತದೆ. ಜಿಎಸ್‌ಟಿಯನ್ನು ಕೂಡ ಸರ್ಕಾರ ಕಟ್ಟುತ್ತದೆ. ಸರ್ಕಾರವೇ ಪ್ರಧಾನ ಉದ್ಯೋಗದಾತ. ಕಾನೂನಾತ್ಮಕವಾಗಿ ಸರ್ಕಾರವೇ ಗುತ್ತಿಗೆ ನೌಕರರಿಗೂ ನ್ಯಾಯಸಮ್ಮತ ವೇತನ ಒದಗಿಸಬೇಕು. ಇದು ಸರ್ಕಾರದ ನೈತಿಕ ಮತ್ತು ಕಾನೂನಾತ್ಮಕ ಜವಾಬ್ದಾರಿಯಾಗಿದೆ’ ಎಂದು ರಾಜ್ಯ ದಿನಗೂಲಿ ನೌಕರರ ಮಹಾಮಂಡಳದ ಅಧ್ಯಕ್ಷ ಕೆ.ಎಸ್.ಶರ್ಮಾ ಅವರು ಹೇಳುವ ಮಾತು ಸಮರ್ಪಕವಾಗಿದೆ.



ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿ ನಿಗದಿ ಮಾಡಿ ಸಾಮಾಜಿಕ ನ್ಯಾಯ ಒದಗಿಸಲಾಗಿದೆ ಎಂದು ಹೇಳುವ ಸರ್ಕಾರ, ಸಂಬಳ ಕೊಡುವುದಕ್ಕೆ ಸಾಮಾಜಿಕ ನ್ಯಾಯ ಪಾಲಿಸುವುದಿಲ್ಲ. ಸಾಮಾಜಿಕ ನ್ಯಾಯ ಎಂಬುದು ಪೂರ್ಣ ಪ್ರಮಾಣದಲ್ಲಿ ಇರುತ್ತದೆ. ಅದು ವಿಭಜನೆಗೊಂಡು ಭಾಗಶಃ ಇರುವುದಿಲ್ಲ.

ಕೌಟುಂಬಿಕ ರಕ್ಷಣೆ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ನ್ಯಾಯಸಮ್ಮತ ವೇತನ ಪಾವತಿ ಮಹತ್ವದ ಪಾತ್ರ ವಹಿಸುತ್ತದೆ. ಸಂಬಳ ಒಂದು ಬಹುದೊಡ್ಡ ಆಕರ್ಷಣೆ. ಕೆಲಸಗಾರ ತನ್ನ ವೈಯಕ್ತಿಕ ಸಂತೋಷದ ಚಟುವಟಿಕೆಗಳನ್ನು ಬದಿಗಿಟ್ಟು, ಬೇಗನೆ ಎದ್ದು, ಎಷ್ಟೋ ಬಾರಿ ಸರಿಯಾಗಿ ಊಟ, ಉಪಾಹಾರವನ್ನೂ ಸೇವಿಸದೆ ಓಡಿಬಂದು ಕೆಲಸಕ್ಕೆ ಹಾಜರಾಗುತ್ತಾನೆ. ಸಂಬಳಕ್ಕಾಗಿ ಅವನು ಇಷ್ಟೆಲ್ಲ ಹೆಣಗುತ್ತಾನೆ ಎಂಬುದನ್ನು ದುಡಿಸಿಕೊಳ್ಳುವವರು ತೆರೆದ ಮನಸ್ಸಿನಿಂದ ಅರಿತುಕೊಳ್ಳಬೇಕು. ಕೂಲಿಯವನ ದುಡಿಮೆಯ ಬೆವರು ಆರುವ ಮೊದಲೇ ಅವನ ಹೊಟ್ಟೆ ತುಂಬುವಷ್ಟು ಕೂಲಿ ಕೊಡಬೇಕು ಎಂದು ಕುರಾನ್ ಹೇಳುತ್ತದೆ. ದುಡಿಸಿಕೊಳ್ಳುವವರೆಲ್ಲರೂ ಈ ನೀತಿ ಮಾತನ್ನು ಪಾಲಿಸುವುದು ಅವಶ್ಯ.

ವಾಚಕರ ವಾಣಿ

ಕಠಿಣ ನಿರ್ಬಂಧವೊಂದೇ ಸಾಲದು

ಐವರು ಹೆಣ್ಣುಮಕ್ಕಳಿದ್ದರೂ ಗಂಡು ಮಗುವಿಗಾಗಿ ಹಂಬಲಿಸುತ್ತಿದ್ದ ಲಖನೌನ ವ್ಯಕ್ತಿಯೊಬ್ಬ, ಆರನೇ ಮಗುವಿನ ಲಿಂಗ ತಿಳಿಯುವ ಸಲುವಾಗಿ, ತನ್ನ ಎಂಟು ತಿಂಗಳ ಗರ್ಭಿಣಿ ಪತ್ನಿಯ ಹೊಟ್ಟೆಯನ್ನು ಹರಿತವಾದ ಆಯುಧದಿಂದ ಸೀಳಿ, ಆಕೆ ಸಾವು ಬದುಕಿನ ನಡುವೆ ಹೋರಾಡುವಂತೆ ಮಾಡಿರುವ ಭಯಂಕರ ಸುದ್ದಿ ಓದಿ ಮೈ ನಡುಗಿತು. ಈಗಲೂ ಕೆಲವರಿಗೆ ಗಂಡುಮಕ್ಕಳ ಬಗೆಗಿನ ವ್ಯಾಮೋಹ ಕಡಿಮೆಯಾಗದಿರುವುದು ದುರ್ದೈವ ಮತ್ತು ಆತಂಕಕಾರಿ. ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಗಂಡಿಗೆ ಸಮಾನವಾಗಿ ಹೆಣ್ಣುಮಕ್ಕಳು ಬೆಳೆಯುತ್ತಿದ್ದಾರೆ. ಬಹುತೇಕ ಕುಟುಂಬಗಳು ಯಾವ ಮಗುವಾದರೇನು ಎಂಬ ವಿಶಾಲ ಮನೋಭಾವ ಹೊಂದಿವೆ. ವಿಶೇಷವಾಗಿ, ಕುಟುಂಬ ನಿರ್ವಹಣೆಯಲ್ಲಿ ಹೆಣ್ಣು ಸಮರ್ಥಳಾಗಿದ್ದಾಳೆ.

ಅಷ್ಟಾದರೂ ಯಾವ ಪುರುಷಾರ್ಥಕ್ಕಾಗಿ ಇಂತಹ ಆಲೋಚನೆಗಳನ್ನು ಜನ ಹೊಂದಿದ್ದಾರೋ ತಿಳಿಯದು. ಗಂಡುಮಕ್ಕಳಾದರೆ ಮಾತ್ರ ಮೋಕ್ಷ ಎಂಬ ಮೌಢ್ಯವನ್ನು ತೊಲಗಿಸಿ, ಹೆಣ್ಣುಸಂತಾನ ಬೆಳೆಯಲು ಅವಕಾಶ ಮಾಡಿಕೊಡಬೇಕು. ಸರ್ಕಾರ ಎಷ್ಟೇ ಕಠಿಣ ನಿರ್ಬಂಧಗಳನ್ನು ವಿಧಿಸಿದರೂ ವ್ಯಕ್ತಿ ತಾನಾಗಿಯೇ ಅರಿಯದ ವಿನಾ ಇಂತಹ ಹೀನ ಕೃತ್ಯಗಳು ನಡೆಯುತ್ತಲೇ ಇರುತ್ತವೆ.

ಎಚ್.ತುಕಾರಾಂ, ಬೆಂಗಳೂರು

ಪ್ರಧಾನಿ ಹೇಳಿಕೆ: ಗೊಂದಲಕ್ಕೆ ಆಸ್ಪದ

‘ನನ್ನ ತಾಯಿ ಸ್ವರ್ಗಸ್ಥರಾಗುವವರೆಗೂ ನಾನು ನನ್ನ ತಾಯಿಯ ಹೊಟ್ಟೆಯಲ್ಲಿ ಜನಿಸಿದ ನಂಬಿಕೆ ಇತ್ತು. ನಂತರ ಇತ್ತೀಚೆಗಿನ ದಿನಗಳಲ್ಲಿ ನನಗೆ ಅನ್ನಿಸುತ್ತಿದೆ, ಭಗವಂತ ನೇರವಾಗಿ ನನ್ನನ್ನು ಭೂಮಿಗೆ ಕಳಿಸಿದ್ದಾನೆ ಎಂದು’ ಎಂಬ ಹೇಳಿಕೆಯನ್ನು ನಮ್ಮ ದೇಶದಲ್ಲಿ ಜನಸಾಮಾನ್ಯರು ಕೊಟ್ಟರೆ ಅದಕ್ಕೆ ಬೆಲೆಯಿಲ್ಲ. ಆದರೆ ಪ್ರಪಂಚದ ಅತಿ ದೊಡ್ಡ ಪ್ರಜಾಸತ್ತೆಯಾದ ಭಾರತ ದೇಶದ ಚುಕ್ಕಾಣಿ ಹಿಡಿದಿರುವ, ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರಧಾನಿ ಹೀಗೆ ಸಾರ್ವಜನಿಕವಾಗಿ ಹೇಳಿರುವುದು ಅತ್ಯಂತ ಅಪಾಯಕಾರಿ ಮತ್ತು ವಿಸ್ಮಯಕಾರಿ ಸಂಗತಿ.

ಇಪ್ಪತ್ತೊಂದನೇ ಶತಮಾನದ ಕಂಪ್ಯೂಟರ್ ಯುಗದಲ್ಲಿ, ಎ.ಐ. ತಂತ್ರಜ್ಞಾನದ ಕಾಲದಲ್ಲಿ ಪ್ರಧಾನಿಯವರ ಇಂತಹ ಹೇಳಿಕೆ ದೇಶದ ನಾಗರಿಕರಲ್ಲಿ ಗೊಂದಲ ಉಂಟುಮಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಶಾಂತಕುಮಾರ್, ಸರ್ಜಾಪುರ

ಐದು ದಶಕದ ಸಂಗೀತ ಸೇವೆ

ಇತ್ತೀಚೆಗೆ ನಮ್ಮನ್ನು ಅಗಲಿದ ಹುಬ್ಬಳ್ಳಿ- ಧಾರವಾಡದ ಒಬ್ಬ ಅದ್ಭುತ ಸಂಗೀತಪ್ರೇಮಿ ಅನಂತ ಹರಿಹರ, 50 ವರ್ಷಗಳಿಂದಲೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಪೋಷಿಸಿ ಬೆಳೆಸಿದವರು. ಜೀವ ವಿಮಾ ನಿಗಮದಲ್ಲಿ ಸೇವೆ ಸಲ್ಲಿಸುತ್ತಿದ್ದ ಅವರು, ಸಿತಾರ್ ರತ್ನ ರಹಮತ್ ಖಾನ್ ಅವರ ಪುಣ್ಯತಿಥಿಯನ್ನು ಆಚರಿಸುವ ಮೂಲಕ 1972ರಲ್ಲಿ ಧಾರವಾಡದಲ್ಲಿ ಸಂಗೀತ ಪರಂಪರೆಗೆ ನಾಂದಿ ಹಾಡಿದವರು. ಭೀಮಸೇನ್ ಜೋಶಿ, ಹರಿಪ್ರಸಾದ್ ಚೌರಾಸಿಯ ಅವರಂತಹ ಸಂಗೀತ ಕ್ಷೇತ್ರದ ಅನೇಕ ದಿಗ್ಗಜರನ್ನು ರಹಮತ್ ಖಾನ್ ಅವರ ಪುಣ್ಯತಿಥಿಗೆ ಆಹ್ವಾನಿಸಿ ಸಂಗೀತಕ್ಕೆ ಭದ್ರ ಬುನಾದಿ ಹಾಕಿದರು. ಉತ್ತರ ಕರ್ನಾಟಕದ ಸಾವಿರಾರು ಸಂಗೀತಪ್ರೇಮಿಗಳಿಗೆ ಸಂಗೀತದ ರಸದೌತಣ ಉಣಬಡಿಸಿದರು.

ಪ್ರತಿವರ್ಷ ಡಿಸೆಂಬರ್ ಮೊದಲ ವಾರ ನಮಗೆಲ್ಲ ಹಬ್ಬದ ಸಂಭ್ರಮ. ಮೂರು ದಿನಗಳ ಕಾಲ ಸಂಗೀತ ಸಂಜೆ. ಎರಡು ವರ್ಷಗಳ ಹಿಂದೆ ಭೀಮಸೇನ್ ಜೋಶಿ ಅವರ ಸ್ಮರಣಾರ್ಥ ‘ಭೀಮಪಲಾಸ್’ ಎಂಬ ಹೆಸರಿನಲ್ಲಿ ರಾಜ್ಯದಾದ್ಯಂತ ಇಡೀ ವರ್ಷ ಸಂಗೀತ ಕಛೇರಿಗಳನ್ನು ಆಯೋಜಿಸಿ ದೇಶದ ಎಲ್ಲ ಪ್ರಮುಖ ಸಂಗೀತಗಾರರನ್ನೂ ಆಹ್ವಾನಿಸಿದ್ದು ಒಂದು ಸಾರ್ವಕಾಲಿಕ ದಾಖಲೆಯೇ ಸರಿ! ಅಲ್ಲದೆ ಯುವ ಸಂಗೀತಗಾರರಿಗೂ ಪ್ರೋತ್ಸಾಹ ನೀಡಿ ಅವರನ್ನು ಬೆಳಕಿಗೆ ತಂದ ಸಹೃದಯಿ ಅವರು. ಹೀಗೆ ಐದು ದಶಕಗಳ ಕಾಲ ತಮ್ಮ ಇಡೀ ಜೀವನವನ್ನೇ ಸಂಗೀತಕ್ಕೆ ಮುಡಿಪಾಗಿಟ್ಟಿದ್ದ ಅನಂತ, ವಿರಳವಾದ ವ್ಯಕ್ತಿಯೇ ಹೌದು.

ಮುರುಗೇಶ ಹನಗೋಡಿಮಠ, ಹುಬ್ಬಳ್ಳಿ

ಜಾಣತಂತ್ರಕ್ಕೂ ಹೋರಾಟಕ್ಕೂ ವ್ಯತ್ಯಾಸವಿದೆ

‘ಗೌತಮ ಬುದ್ಧ: ಎಲ್ಲ ಕಾಲದ ವೈದ್ಯ’ ಎಂಬ ಎಸ್.ಸೂರ್ಯಪ್ರಕಾಶ ಪಂಡಿತ್ ಅವರ ಲೇಖನ (ಪ್ರ.ವಾ., ಮೇ 23) ಸಮುಚಿತವಾಗಿದೆ. ಆದರೆ, ‘ಎಲ್ಲ ಮಹಾತ್ಮರ ವಿಷಯದಲ್ಲಿ ಆಗುವಂತೆ ಬುದ್ಧ ಭಗವಂತನ ವಿಷಯದಲ್ಲೂ ನಮ್ಮ ಗ್ರಹಿಕೆ ಸಂಕುಚಿತವಾಗಿದೆ. ಇದು ನಮ್ಮ ಸಮಾಜದ ದುರಂತವೇ ಸರಿ. ‘ಬುದ್ಧ’ ಎಂಬ ಮಹಾತತ್ವವೂ ಇಂದು ನಮ್ಮ ದೇಶದಲ್ಲಿ ರಾಜಕೀಯಕ್ಕೆ ವಸ್ತುವಾಗಿದೆ; ನಮ್ಮ ರಾಗ- ದ್ವೇಷಗಳ ಸಮರ್ಥನೆಯ ದಾಳವಾಗಿದೆ’ ಎಂಬ ಅವರ ಮಾತುಗಳ ಇಂಗಿತವನ್ನು ಪೂರ್ತಿಯಾಗಿ ಒಪ್ಪುವುದು ಕಷ್ಟ. ಏಕೆಂದರೆ, ಇಂದು ನಮ್ಮ ದೇಶದಲ್ಲಿ ರಾಮ, ಕೃಷ್ಣ, ಹನುಮಾನ್ ಅಲ್ಲದೆ ‘ಭಾರತಮಾತೆ’ ಕೂಡ ಪ್ರಾಬಲ್ಯದ ರಾಜಕೀಯಕ್ಕೆ ಯಾಮಾರಿಸುವ ತಂತ್ರಗಳಾಗಿ ದುರ್ಬಳಕೆಗೆ ವಸ್ತುಗಳಾಗಿವೆ. ಆದರೆ, ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ಹಾಗೂ ತದ್ವಿರುದ್ಧವಾಗಿ ಬುದ್ಧ, ಅಂಬೇಡ್ಕರ್, ಬಸವಣ್ಣ, ನಾರಾಯಣ ಗುರು, ಕುವೆಂಪು ಅವರು ಬಹುಸಂಖ್ಯಾತರ ಮೇಲೆ ನಡೆಯುತ್ತಿರುವ ಸಣ್ಣಸಂಖ್ಯಾತರ ದೌರ್ಜನ್ಯದಿಂದ ಪಾರಾಗಲು ಮತ್ತು ಅದನ್ನು ಸಶಕ್ತವಾಗಿ ಎದುರಿಸಲು ಸದ್ಬಳಕೆಯಾಗುತ್ತಿರುವ ಅಸ್ತ್ರಗಳೆಂದು ಪರಿಗಣಿಸಬಹುದು ಎನಿಸುತ್ತದೆ.

ಶೋಷಕರ ಹಿಂಸಾತ್ಮಕ ಜಾಣತಂತ್ರಗಳಿಗೂ ಶೋಷಿತರ ಉಳಿವಿಗಾಗಿನ ಆಕ್ರೋಶಭರಿತ ಮಿಡುಕಾಟದ ಹೋರಾಟಗಳಿಗೂ ಅಗಾಧವಾದ ವ್ಯತ್ಯಾಸವಿದೆ. ಉದ್ದೇಶಗಳ ನಡುವಿನ ಸತ್ಯಾಸತ್ಯಗಳ ಸೂಕ್ಷ್ಮವನ್ನು ಮರೆಮಾಚುವುದು ತರವೆ?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಮಸಾಲೆ ಪದಾರ್ಥ: ಮಾನದಂಡ ಪಾಲನೆಯಾಗಲಿ

ಭಾರತದಿಂದ ರಫ್ತಾಗುವ ಕೆಲವು ಮಸಾಲೆ ಪದಾರ್ಥಗಳ ಮೇಲೆ ಆಸ್ಟ್ರೇಲಿಯಾ, ಹಾಂಗ್‌ಕಾಂಗ್ ಮತ್ತು ಸಿಂಗಪುರ ನಿಷೇಧ ಹೇರಿವೆ. ಅವುಗಳಲ್ಲಿ ಕ್ಯಾನ್ಸರ್‌ಕಾರಕ ರಾಸಾಯನಿಕದ ಪ್ರಮಾಣ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ವರದಿಯಾಗಿದೆ. ಜನರ ಆರೋಗ್ಯಕ್ಕೆ ಮಾರಕವಾಗುವ ಇಂತಹ ಮಸಾಲೆ ಪದಾರ್ಥಗಳ ಉತ್ಪಾದನೆ ಮತ್ತು ಬಳಕೆಯನ್ನು ನಮ್ಮ ದೇಶದಲ್ಲೂ ತಡೆಗಟ್ಟಬೇಕಾದ ಅವಶ್ಯಕತೆ ಇದೆ. ಅಂತರರಾಷ್ಟ್ರೀಯ ಮಟ್ಟದ ಮಾನದಂಡಗಳನ್ನು ಪಾಲಿಸಿದರೆ ವಿದೇಶಗಳಲ್ಲಿಯೂ ನಮ್ಮ ದೇಶದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ದೇಶದ ಪ್ರತಿಷ್ಠೆ ಉತ್ತುಂಗಕ್ಕೆ ಏರುತ್ತದೆ.

ಚನ್ನಕೇಶವ ಜಿ.ಕೆ., ತರೀಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

FESTIVAL DE CANNES

ಕಾನ್ ಚಿತ್ರೋತ್ಸವದಲ್ಲಿ ಭಾರತೀಯರ ಮೆರುಗು

ಜಗತ್ತಿನ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಕಾನ್ ಚಿತ್ರೋತ್ಸವವೂ ಒಂದು. ಫ್ರಾನ್ಸ್‌ನ ಕಡಲತೀರದ ಹಳ್ಳಿ ಕಾನ್‌ನಲ್ಲಿ ಈ ಚಿತ್ರೋತ್ಸವದ ಮೊದಲ ಆವೃತ್ತಿ 1946ರಲ್ಲಿ ನಡೆದಿತ್ತು. ಈಗ ಕಾನ್ ಒಂದು ಹಳ್ಳಿಯಾಗಿ ಉಳಿದಿಲ್ಲ, ಬದಲಿಗೆ ಜಗತ್ತಿನ ಅತ್ಯಂತ ಐಷಾರಾಮಿ ನಗರಗಳಲ್ಲಿ ಒಂದಾಗಿದೆ. ಚಿತ್ರೋತ್ಸವವೂ ವಿಶ್ವದ ಐದು ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಒಂದೆನಿಸಿದೆ. ಮೊದಲ ಆವೃತ್ತಿಯಲ್ಲಿ ಅತ್ಯುತ್ತಮ ಚಿತ್ರ (ಗ್ರ್ಯಾಂಡ್ ಪ್ರಿಕ್ಸ್) ಪ್ರಶಸ್ತಿ ಪಡೆದುಕೊಂಡಿದ್ದು ಭಾರತೀಯ ಚಿತ್ರ. ಸುಮಾರು 78 ವರ್ಷಗಳ ನಂತರ ಮತ್ತೊಂದು ಭಾರತೀಯ ಚಿತ್ರ ಇದೇ ಪ್ರಶಸ್ತಿ ಗೆದ್ದುಕೊಂಡಿದೆ. ಇನ್ನೂ ಎರಡು ವರ್ಗಗಳಲ್ಲಿ ಭಾರತೀಯ ಚಿತ್ರ, ನಟಿಗೆ ಪ್ರಶಸ್ತಿ ಸಂದಿವೆ

ಪ್ರಜಾವಾಣಿ ವಾರ್ತೆ

ಪ್ರತಿ ವರ್ಷ ಕಾನ್ ಚಿತ್ರೋತ್ಸವ ನಡೆದಾಗ, ಅದರಲ್ಲಿ ಭಾರತೀಯ ನಟರು–ನಟಿಯರು ಭಾಗಿಯಾಗುವ ಚಿತ್ರಗಳೇ ಮಾಧ್ಯಮಗಳಲ್ಲಿ ತುಂಬಿರುತ್ತಿದ್ದವು. ಅಲ್ಲಿ ನಮ್ಮ ನಟರು–ನಟಿಯರು ತೊಟ್ಟ ಉಡುಗೆ, ಹಾವಭಾವಗಳ ಬಗ್ಗೆ ದಿನಗಟ್ಟಲೆ ಚರ್ಚೆಯಾಗುತ್ತಿತ್ತು. ಈ ಬಾರಿಯೂ ಚಿತ್ರೋತ್ಸವದ ಪ್ರಶಸ್ತಿ ಪಟ್ಟಿ ಬಹಿರಂಗವಾಗುವರೆಗೂ ಇದೇ ಸ್ಥಿತಿ ಇತ್ತು. ಹಲವು ವರ್ಗಗಳಲ್ಲಿ ಭಾರತೀಯ ಚಿತ್ರ, ಕಿರುಚಿತ್ರಗಳು ನಾಮನಿರ್ದೇಶನವಾಗಿದ್ದರೂ ಅವುಗಳ ಬಗ್ಗೆ ಹೆಚ್ಚು ಸುದ್ದಿಯಿರಲಿಲ್ಲ. ಆದರೆ ಜನಪ್ರಿಯರಲ್ಲದ, ತಾರಾ ಕುಟುಂಬಕ್ಕೆ ಸೇರಿಲ್ಲದವರು ನಿರ್ದೇಶಿಸಿದ ಸಿನಿಮಾ ಕೃತಿಗಳು 77ನೇ ಕಾನ್ ಚಿತ್ರೋತ್ಸವದಲ್ಲಿ, ತಾವು ಸ್ಪರ್ಧಿಸಿದ್ದ ವರ್ಗಗಳಲ್ಲಿ ಪ್ರಶಸ್ತಿಗೆ ಪಾತ್ರವಾಗಿವೆ. ಪ್ರಶಸ್ತಿ ಗೆದ್ದ ಈ ಚಿತ್ರಗಳು, ಅವುಗಳ ನಿರ್ದೇಶಕರು ಮತ್ತು ನಟಿಯರು ಈಗ ಸುದ್ದಿಯಲ್ಲಿದ್ದಾರೆ.

ಮುಂಬೈನ ಪಾಯಲ್ ಕಪಾಡಿಯಾ ಅವರಿಗೆ ಕಾನ್ ಚಿತ್ರೋತ್ಸವ ಹೊಸದಲ್ಲ. ಅವರ 'ನೈಟ್ ಆಫ್ ನೋಯಿಂಗ್ ನಥಿಂಗ್" ಸಾಕ್ಷ್ಯಚಿತ್ರಕ್ಕೆ 2021ರ ಚಿತ್ರೋತ್ಸವದಲ್ಲಿ 'ಗೋಲ್ಡನ್ ಐ' ಪ್ರಶಸ್ತಿ ದೊರೆತಿತ್ತು. 2017ರ ಆವೃತ್ತಿಯಲ್ಲಿ ಪಾಯಲ್ ಅವರ 'ಆಫ್ಟರ್‌ನೂನ್ ಕ್ಲೌಡ್ಸ್' ಕಿರುಚಿತ್ರವು 'ಲಾ ಸಿನೆಫ್' ವರ್ಗದಲ್ಲಿ ಸ್ಪರ್ಧೆಗೆ ಆಯ್ಕೆಯಾಗಿತ್ತು. ಈಗ 2024ನೇ ಸಾಲಿನ 77ನೇ ಆವೃತ್ತಿಯಲ್ಲಿ ಇವರ 'ಆಲ್ ವಿ ಇಮ್ಯಾಜಿನ್ ಆ್ಯಸ್ ಲೈಟ್' (ಮಲಯಾಳ-ಹಿಂದಿ ಭಾಷೆ) ಚಿತ್ರವು 'ಗ್ರ್ಯಾಂಡ್ ಪ್ರಿಕ್ಸ್' ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಇದು ಕಾನ್ ಚಿತ್ರೋತ್ಸವದಲ್ಲಿನ ಮುಖ್ಯ ವರ್ಗದ ಒಂದು ಪ್ರಶಸ್ತಿ. ಈ ಪ್ರಶಸ್ತಿ ಗೆದ್ದುಕೊಂಡ ಎರಡನೇ ಭಾರತೀಯ ಚಿತ್ರವಿದು.

1946ರಲ್ಲಿ ಕಾನ್ ಚಿತ್ರೋತ್ಸವ ಆರಂಭವಾದಾಗ ಚೇತನ್ ಆನಂದ್ ನಿರ್ದೇಶನದ 'ನೀಚಾ ನಗರ್' ಈ ಪ್ರಶಸ್ತಿ ಗೆದ್ದುಕೊಂಡಿತ್ತು. ಆಗ 'ಗ್ರ್ಯಾಂಡ್ ಪ್ರಿಕ್ಸ್' ಎಂಬುದೇ ಅತ್ಯುನ್ನತ ಪ್ರಶಸ್ತಿಯಾಗಿತ್ತು. ಆದರೆ ನಂತರದ ದಿನಗಳಲ್ಲಿ 'ಪಾಮ್ ಡಾವ್' ಎಂಬ ಹೊಸ ಪ್ರಶಸ್ತಿಯನ್ನು ಸ್ಥಾಪಿಸಿ ಅದನ್ನೇ ಅತ್ಯುನ್ನತ ಪ್ರಶಸ್ತಿ ಎನ್ನಲಾಯಿತು. ಎರಡನೇ ಅತ್ಯುತ್ತಮ ಚಿತ್ರಕ್ಕೆ 'ಗ್ಯಾಂಡ್ ಪ್ರಿಕ್ಸ್' ನೀಡುವ ಪರಂಪರೆ ಆರಂಭಿಸಲಾಯಿತು. ಈಗ ಪಾಯಲ್ ಅವರ 'ಆಲ್ ವಿ ಇಮ್ಯಾಜಿನ್ ಆ್ಯಸ್ ಲೈಟ್' ಚಿತ್ರಕ್ಕೆ ದೊರೆತಿರುವುದೂ ಕಾನ್ ಚಿತ್ರೋತ್ಸವದ ಅತ್ಯುನ್ನತ ಎರಡನೇ ಚಿತ್ರ ಎಂಬ ಪ್ರಶಸ್ತಿ.

ಈ ಪ್ರಶಸ್ತಿ ಭಾರತೀಯ ಚಿತ್ರರಂಗಕ್ಕೂ ಬಹಳ ಮುಖ್ಯವಾದುದು. ಗ್ರ್ಯಾಂಡ್ ಪ್ರಿಕ್ಸ್ ಗೆದ್ದುಕೊಂಡ ಚಿತ್ರ ಎಂದಷ್ಟೇ ಅಲ್ಲ, 30 ವರ್ಷಗಳಲ್ಲಿ ಈ ವರ್ಗದಲ್ಲಿ ಸ್ಪರ್ಧೆಗೆ ಭಾರತದ ಯಾವ ಚಿತ್ರಗಳೂ ಆಯ್ಕೆಯಾಗಿರಲಿಲ್ಲ. 1994ರಲ್ಲಿ ಶಾಜಿ ಎನ್ ಕರುಣ್ ಅವರ ಮಲಯಾಳ ಚಿತ್ರ 'ಸ್ವಾಹಂ' ಕಾನ್ ಚಿತ್ರೋತ್ಸವದ ಮುಖ್ಯ ವರ್ಗದಲ್ಲಿ ಸ್ಪರ್ಧೆಗೆ ಆಯ್ಕೆಯಾಗಿತ್ತು. ಈಗ ಸರಿಯಾಗಿ 30 ವರ್ಷಗಳ ನಂತರ ಅದೇ ವರ್ಗದಲ್ಲಿ ಭಾರತದ ಚಿತ್ರವೊಂದು ಎರಡನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಗೆದ್ದುಕೊಂಡಿದೆ.

ಕಾನ್ ಚಿತ್ರೋತ್ಸವದ ತೀರ್ಪುಗಾರರ ಮಂಡಳಿಯು, 'ಮಹಿಳೆಯರು ಹೆಚ್ಚು-ಹೆಚ್ಚು ಸಿನಿಮಾಗಳನ್ನು ಮಾಡುತ್ತಿರುವುದು ಮಹತ್ವದ ಸಂಗತಿ. ಭಾರತೀಯ ಸಿನಿಮಾ ಜಗತ್ತು ಹಂತಹಂತವಾಗಿ ಬದಲಾಗುತ್ತಿದೆ ಮತ್ತು ಎಲ್ಲವನ್ನೂ ಒಳಗೊಳ್ಳುತ್ತಿದೆ. ಭಾರತೀಯ ಚಿತ್ರರಂಗದಲ್ಲಿ ಉತ್ತಮ ಸಿನಿಮಾಗಳನ್ನು ಮಾಡಲಾಗುತ್ತಿದೆ ಮತ್ತು ಅಲ್ಲಿನ ಪ್ರತಿ ರಾಜ್ಯದಲ್ಲೂ ಸಿನಿಮಾರಂಗ ಪ್ರಬಲವಾಗಿಯೇ ಇದೆ. ಆದರೂ ಮುಖ್ಯಭೂಮಿಕೆಯಲ್ಲಿ ಭಾರತೀಯ ಚಿತ್ರವೊಂದು ಮತ್ತೆ ಸ್ಪರ್ಧೆಗೆ ಆಯ್ಕೆಯಾಗಲು 30 ವರ್ಷಗಳು ಬೇಕಾದವು' ಎಂದು ವಿಶ್ಲೇಷಿಸಿದೆ.

ಆಗ ಶಿಸ್ತುಕ್ರಮ, ಈಗ ಹೆಮ್ಮೆ

ಪಾಯಲ್ ಕಪಾಡಿಯಾ ಅವರು ಪುಣೆಯ ಎಫ್‌ಟಿಐಐನ ಹಳೆಯ ವಿದ್ಯಾರ್ಥಿ. ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರವು 2015ರಲ್ಲಿ ಎಫ್‌ಟಿಐಐ ಮುಖ್ಯಸ್ಥರನ್ನಾಗಿ ಗಜೇಂದ್ರ ಚೌಹಾಣ್ ಅವರನ್ನು ನೇಮಕ ಮಾಡಿದಾಗ ಅಲ್ಲಿನ ವಿದ್ಯಾರ್ಥಿಗಳು ಪ್ರತಿಭಟಿಸಿದ್ದರು. ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ಪಕ್ಷದ ಹಿನ್ನೆಲೆಯ ವ್ಯಕ್ತಿಯನ್ನು ಎಫ್‌ಟಿಐಐ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದು ಸರಿಯಲ್ಲ ಎಂದು ವಿದ್ಯಾರ್ಥಿಗಳು ನಡೆಸಿದ 139 ದಿನಗಳ ಪ್ರತಿಭಟನೆಯ ಮುಂದಾಳುಗಳಲ್ಲಿ ಪಾಯಲ್ ಕೂಡ ಒಬ್ಬರು. ಪ್ರತಿಭಟನೆ ನಡೆಸಿದ ಕಾರಣಕ್ಕೆ ಎಫ್‌ಟಿಐಐ, ಪಾಯಲ್ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಿತ್ತು. ಅವರ ವಿದ್ಯಾರ್ಥಿ ವೇತನವನ್ನು ತಡೆಹಿಡಿದಿತ್ತು. ಅದೇ ಪಾಯಲ್ ಅವರು ಈಗ ಕಾನ್ ಚಿತ್ರೋತ್ಸವದಲ್ಲಿ ಭಾರತಕ್ಕೆ ತಮ್ಮ ಎರಡನೇ ಪ್ರಶಸ್ತಿಯನ್ನು ಗೆದ್ದುಕೊಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ. 'ಪಾಯಲ್ ಕಪಾಡಿಯಾ ಅವರ ಐತಿಹಾಸಿಕ ಜಯದ ಬಗ್ಗೆ ಭಾರತಕ್ಕೆ ಹೆಮ್ಮೆಯಿದೆ. ಈ ಪ್ರತಿಷ್ಠಿತ ಪ್ರಶಸ್ತಿಯು ಪಾಯಲ್ ಅವರ ಕೌಶಲಕ್ಕೆ ದೊರೆತ ಗೌರವ ಮಾತ್ರವಲ್ಲ, ಹೊಸತಲೆಮಾರಿನ ಭಾರತೀಯ ಸಿನಿಮಾ ನಿರ್ದೇಶಕರಿಗೆ ಸ್ಫೂರ್ತಿಯಾಗಲಿದೆ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.



'ಆಲ್ ವಿ ಇಮ್ಯಾಜಿನ್ ಆ್ಯಸ್ ಲೈಟ್'ಗೆ 'ಗ್ರ್ಯಾಂಡ್ ಪ್ರಿಕ್ಸ್' ಗರಿ: ಪ್ರಶಸ್ತಿಯೊಂದಿಗೆ ಕನಿ ಕುಸ್ರುದಿ, ಛಾಯಾ ಕದಮ್, ಪಾಯಲ್ ಕಪಾಡಿಯಾ ಮತ್ತು ದಿವ್ಯಾ ಪ್ರಭಾ —ಎಪಿ/ಪಿಟಿಐ ಚಿತ್ರ

ಪ್ರೀತಿಯ ಸೆಲೆ ಉಳಿಯಲು...

ಇಂಗ್ಲಿಷ್ ಸಾಹಿತ್ಯ ಓದಿದವರು. ಪತ್ರಕರ್ತೆಯಾಗಬೇಕೆಂದು ಹಂಬಲಿಸಿದ್ದರು. ಹಾಗಿದ್ದರೂ, ನಟನೆ ಅವರನ್ನು ಸೆಳೆಯಿತು. ಕೆಲವು ವರ್ಷ ರಂಗಭೂಮಿಯಲ್ಲೂ ಕೆಲಸ ಮಾಡಿದರು. ನಟನೆ ಬೇಡವೇ ಬೇಡ ಎಂದು ಪ್ರೊಡಕ್ಷನ್ ಡಿಸೈನರ್ ಆದರು. ಆದರೆ, ನಟನೆ ಅವರನ್ನು ಬಿಡಲಿಲ್ಲ. ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಉತ್ತಮ ನಟನೆಗಾಗಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಅವರೇ ಕೋಲ್ಕತ್ತದ ಅನಸೂಯಾ ಸೇನ್‌ಗುಪ್ತಾ.

ಲೈಂಗಿಕ ಕಾರ್ಯಕರ್ತೆಯರ ಬದುಕು, ಲೆಸ್ಬಿಯನ್‌ಗಳ ಬದುಕು–ಹೋರಾಟ–ಉಳಿವಿನ ಕಥಾಹಂದರ ಹೊಂದಿರುವ ಸಿನಿಮಾ 'ದಿ ಶೇಮ್‌ಲೆಸ್'ಗಾಗಿ ಅನಸೂಯಾ ಅವರಿಗೆ ಪ್ರಶಸ್ತಿ ಬಂದಿದೆ. ಈ ಚಿತ್ರವನ್ನು ಬಲ್ಗೇರಿಯಾದ ನಿರ್ದೇಶಕ ಕೊನ್‌ಸ್ಟಾಂಟಿನ್ ಬೊಜನೊವ್ ಅವರು ನಿರ್ದೇಶಿಸಿದ್ದಾರೆ. ಕಾನ್ ಚಿತ್ರೋತ್ಸವದಲ್ಲಿ ಭಾರತೀಯರೊಬ್ಬರು ನಟನೆಗಾಗಿ ಪ್ರಶಸ್ತಿ ಪಡೆದುಕೊಂಡದ್ದು ಇದೇ ಮೊದಲು.

'ಅನ್–ಸರ್ಟೇನ್ ರಿಗಾರ್ಡ್' ವಿಭಾಗದಲ್ಲಿ ಅನಸೂಯಾ ಅವರಿಗೆ ಪ್ರಶಸ್ತಿ ಬಂದಿದೆ. ಅತ್ಯಂತ ವಿಶಿಷ್ಟ ಎನಿಸುವ ಕಥಾಹಂದರ ಮತ್ತು ಮೂಲ ಕಥೆಗಳಿಗಾಗಿಯೇ 'ಅನ್–ಸರ್ಟೇನ್ ರಿಗಾರ್ಡ್' ಎನ್ನುವ ವಿಭಾಗವನ್ನು ರೂಪಿಸಲಾಗಿದೆ. ಈ ವಿಭಾಗದಲ್ಲಿ ಚಿತ್ರ ನಿರ್ಮಾಣದ ಹಲವು ವಿಭಾಗಗಳಿಗೆ ಪ್ರಶಸ್ತಿ ನೀಡಲಾಗುತ್ತದೆ.




ಅನಸೂಯಾ ಸೇನ್‌ಗುಪ್ತಾ

ಪಶ್ಚಿಮ ಬಂಗಾಳದ ಕೋಲ್ಕತ್ತವು ಅನಸೂಯಾ ಅವರ ಹುಟ್ಟೂರು. ಜಾಧವ್‌ಪುರ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ ಮುಗಿಸಿದರು. ಉತ್ಸಾಹಿ ಯುವಕರ ರಂಗಭೂಮಿ ಗುಂಪು 'ಟಿನ್ ಕ್ಯಾನ್'ನಲ್ಲಿ ಅನಸೂಯಾ ತಮ್ಮನ್ನು ಕೆಲಕಾಲ ತೊಡಗಿಸಿಕೊಂಡಿದ್ದರು. ನಂತರ, 2009ರಲ್ಲಿ ಮೊದಲ ಬಾರಿಗೆ ಸಿನಿಮಾ ರಂಗ ಪ್ರವೇಶಿಸಿದರು. ಅಂಜನ್ ದತ್ತಾ ಅವರ 'ಮ್ಯಾಡ್ಲಿ ಬಂಗಾಲಿ', ಅನುಸೂಯ ಅವರ ಮೊದಲ ಚಿತ್ರ. ಅಲ್ಲಿಂದ 2013ರಲ್ಲಿ ಅವರು ಮುಂಬೈಗೆ ಬಂದಿಳಿದರು. ಆದರೆ, ಅನಸೂಯಾ ಅವರನ್ನು ಬಾಲಿವುಡ್ ಒಳಗೆ ಕರೆದುಕೊಳ್ಳಲಿಲ್ಲ. ಅದಕ್ಕಾಗಿ ಅವರು ಪ್ರೊಡಕ್ಷನ್ ಡಿಸೈನರ್ ಆಗಿ ಹಲವು ಕಾರ್ಯಕ್ರಮಗಳಲ್ಲಿ, ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. ನೆಟ್‌ಫ್ಲಿಕ್ಸ್‌ನ 'ಮಸಬಾ ಮಸಬಾ', 'ರೇ', 'ನೋಬಲ್‌ಮ್ಯಾನ್', 'ಬ್ರಹಂ ನಮನ್' ಸಿನಿಮಾಗಳಿಗೆ ಪ್ರೊಡಕ್ಷನ್ ಡಿಸೈನರ್ ಆಗಿ ಕೆಲಸ ಮಾಡಿದ್ದಾರೆ. ಮುಂಬೈನ ಏಕತಾನ ಹಾಗೂ ಏಕಾಂಗಿ ಬದುಕು ಸಾಕೆನಿಸಿ, ಅನಸೂಯಾ ಅವರು 2021ರಲ್ಲಿ ಗೋವಾಕ್ಕೆ ನೆಲೆ ಬದಲಿಸಿದರು. ಮದುವೆಯಾಗಿ ಈಗ ಅವರು ಗೋವಾದಲ್ಲಿಯೇ ನೆಲೆಯೂರಿದ್ದಾರೆ. 2020ರಲ್ಲಿ 'ದಿ ಶೇಮ್‌ಲೆಸ್' ಸಿನಿಮಾದಲ್ಲಿ ಅವಕಾಶ ದೊರೆಯುತ್ತದೆ. ನಿರ್ದೇಶಕ ಕೊನ್‌ಸ್ಟಾಂಟಿನ್ ಬೊಜನೊವ್ ಅವರು ಫೇಸ್‌ಬುಕ್ ಮೂಲಕವಾಗಿ ಇವರನ್ನು ಸಂಪರ್ಕಿಸುತ್ತಾರೆ. ನಂತರ, ಅನಸೂಯಾ ಅವರು ಆಡಿಷನ್‌ಗಾಗಿ ಆಡಿಯೊ ಕ್ಲಿಪ್‌ವೊಂದನ್ನು ಕಳುಹಿಸುತ್ತಾರೆ. ಮೊದಲ ಹಂತದಲ್ಲಿಯೇ ಅನಸೂಯಾ ಅವರು ಆಯ್ಕೆಯೂ ಆಗುತ್ತಾರೆ.

'ತೀವ್ರ ದೌರ್ಜನ್ಯಕ್ಕೆ ಒಳಗಾದವರ ಎದೆಗೂಡಿನಲ್ಲೂ ಪ್ರೀತಿಯ ಸೆಲೆ ಇರುತ್ತದೆ. ಆ ಸೆಲೆಯು ಇನ್ನೊಬ್ಬರನ್ನು ಸಲಹುವಷ್ಟು ತೀವ್ರವಾಗಿರುತ್ತದೆ. ರೇಣುಕಾ (ಚಿತ್ರದಲ್ಲಿ ಅನಸೂಯಾ ಅವರ ನಿರ್ವಹಿಸಿದ ಪಾತ್ರದ ಹೆಸರು) ಹಾಗೂ ಅನಸೂಯಾ ಇಬ್ಬರೂ ಪ್ರೀತಿ ಮತ್ತು ನಂಬುಗೆಯನ್ನು ಜೀವಂತವಾಗಿ ಇರಿಸಿಕೊಳ್ಳುವುದಕ್ಕೆ ಹೋರಾಟ ನಡೆಸುತ್ತಾರೆ. ಇದೇ ನನ್ನನ್ನು ಮತ್ತು ನನ್ನ ಪಾತ್ರವನ್ನು ಒಟ್ಟಿಗೆ ಇರಿಸಿದೆ' ಎನ್ನುತ್ತಾರೆ ಅನಸೂಯಾ.

'ಸೂರ್ಯಕಾಂತಿ ಹೂಗೆ...'



ಚಿದಾನಂದ ಎಸ್. ನಾಯ್ಕ್

ಕನ್ನಡಿಗ ಚಿದಾನಂದ ಎಸ್. ನಾಯ್ಕ್ ಅವರ ನಿರ್ದೇಶನದ ಕಿರುಚಿತ್ರ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು...' (SUNFLOWERS WERE THE FIRST ONES TO KNOW...) ಕಾನ್ ಚಿತ್ರೋತ್ಸವದ 'ಲಾ ಸಿನೆಫ್' ವರ್ಗದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾಗಿದೆ. ಕನ್ನಡದ ಕಿರುಚಿತ್ರವೊಂದು ಈ ಪ್ರಶಸ್ತಿಗೆ ಪಾತ್ರವಾಗಿದ್ದು ಇದೇ ಮೊದಲು.

'ಲಾ ಸಿನೆಫ್' ಕಿರುಚಿತ್ರಗಳಿಗೆಂದೇ ಇರುವ ಪ್ರತ್ಯೇಕ ವರ್ಗ. ವಿಶ್ವದ ಎಲ್ಲಾ ಸಿನಿಶಾಲೆಗಳ ವಿದ್ಯಾರ್ಥಿಗಳು ನಿರ್ಮಿಸಿದ/ನಿರ್ದೇಶಿಸಿದ ಕಿರುಚಿತ್ರಗಳು ಮಾತ್ರ ಇಲ್ಲಿ ಸ್ಪರ್ಧಿಸಬಹುದು. ಈ ಬಾರಿ ಲಾ ಸಿನೆಫ್ ವರ್ಗದಲ್ಲಿ ವಿಶ್ವದ 450 ಸಿನಿಶಾಲೆಗಳ 2,000ಕ್ಕೂ ಹೆಚ್ಚು ಕಿರುಚಿತ್ರಗಳು ಈ ಸ್ಪರ್ಧೆಗೆ ಬಂದಿದ್ದವು. ಸ್ಪರ್ಧೆಗೆ ಆಯ್ಕೆಯಾಗಿದ್ದ 18 ಚಿತ್ರಗಳನ್ನು ಹಿಂದಿಕ್ಕಿ, ಚಿದಾನಂದ್ ಅವರ 'ಸೂರ್ಯಕಾಂತಿ ಹೂಗೆ...' ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ ಗೆದ್ದುಕೊಂಡಿದೆ.



ಪುಣೆಯ ಎಫ್‌ಟಿಐಐನ ಹಳೆಯ ವಿದ್ಯಾರ್ಥಿ ಚಿದಾನಂದ ಅವರ ಈ ಕಿರುಚಿತ್ರವು 16 ನಿಮಿಷಗಳದ್ದಾಗಿದೆ. ಅಜ್ಜಿಯ ಹುಂಜ ಮತ್ತು ಸೂರ್ಯೋದಯ ಜನಪದ ಕತೆಯನ್ನು ಸಿನಿಮಾರೂಪಕ್ಕೆ ತಂದ ಬಗೆಯ ಬಗ್ಗೆ ಮೆಚ್ಚುಗೆಯೂ ವ್ಯಕ್ತವಾಗಿತ್ತು. ಮೈಸೂರಿನವರಾದ ಚಿದಾನಂದ ವೈದ್ಯಕೀಯ ಶಿಕ್ಷಣ ಪಡೆದು, ವೈದ್ಯರೂ ಆಗಿದ್ದರು. ಆದರೆ ನಂತರದ ದಿನಗಳಲ್ಲಿ ಸಿನಿಮಾರಂಗಕ್ಕೆ ಕಾಲಿಟ್ಟರು. ಜನಪದ ಕತೆಗಳನ್ನು ಸಿನಿಮಾ ಮೂಲಕ ಹೇಳುವ ಹಾದಿಯಲ್ಲಿರುವ ಚಿದಾನಂದ, ಮತ್ತೆ ಮತ್ತೆ ಕಾನ್ ಚಿತ್ರೋತ್ಸವಕ್ಕೆ ಹೋಗುತ್ತೇವೆ ಎಂದಿದ್ದಾರೆ.

ಆಧಾರ: ಕಾನ್ ಚಿತ್ರೋತ್ಸವ ಪ್ರಶಸ್ತಿಪಟ್ಟಿ, ಬಿಬಿಸಿ, ಪಿಟಿಐ, 'ಮೈ ಕೋಲ್ಕತ್ತ' ಪತ್ರಿಕೆಯ ವರದಿ

ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

prajavani.net/cinesamman/season2



ಇದೀಗ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2023ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶಿತರನ್ನು ತಿಳಿಸುವ ಸಮಯ ಇದಾಗಿದೆ. ಈಗಾಗಲೇ ಹಲವು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರು, ಸಿನಿಮಾಗಳನ್ನು ಇಲ್ಲಿ ಪ್ರಕಟಿಸಲಾಗಿತ್ತು. ಇನ್ನುಳಿದ ನಾಲ್ಕು ವಿಭಾಗಗಳ ನಾಮನಿರ್ದೇಶಿತರ ವಿವರ ಇಲ್ಲಿದೆ.

ಇನ್ನುಳಿದ ವಿಭಾಗಗಳ ನಾಮನಿರ್ದೇಶಿತರು

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು

ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ



ಚಿತ್ರ: ಪಿಂಕಿ ಎಲ್ಲಿ?



ಚಿತ್ರ: ಪಾಲಾರ್



ಚಿತ್ರ: ವಿರಾಟಪುರ ವಿರಾಗಿ



ಚಿತ್ರ: ಡೇರ್ ಡೆವಿಲ್ ಮುಸ್ತಾಫಾ



ಚಿತ್ರ: ಕ್ಷೇತ್ರಪತಿ

ಅತ್ಯುತ್ತಮ ನಿರ್ಮಾಣ ವಿನ್ಯಾಸ

ಕಾಟೇರ	ಗುಣ
19.20.21	ಸಂತೋಷ್ ಪಾಂಚಾಲ್
ಗುರುದೇವ್ ಹೊಯ್ಸಳ	ಕೆಆರ್‌ಜಿ ಸ್ಟುಡಿಯೋಸ್
ಟಗರು ಪಲ್ಯ	ಉಮೇಶ್ ಕೆ ಕೃಪಾ
ಸಪ್ತ ಸಾಗರದಾಚೆ ಎಲ್ಲೋ ಸೈಡ್–ಎ	ಉಲ್ಲಾಸ್ ಹೈದೂರ್



ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್

ಕಾಟೇರ	ಅನ್ನಪೂರ್ಣ ಸ್ಟುಡಿಯೋಸ್ ಹೈದರಾಬಾದ್
ಘೋಸ್ಟ್	ಮೊಹಮ್ಮದ್ ಅಬ್ಬಿ
ವಿರಾಟಪುರ ವಿರಾಗಿ	ಬೀ ಕ್ರಿಯೇಟಿವ್ ಸ್ಟುಡಿಯೊ
ಟಗರು ಪಲ್ಯ	ರಾಜ್ ಪತ್ತಿಪಾಟಿ, ನಾಗೇಶ್
ಕಬ್ಜ	ಯೂನಿಫೈ ಮೀಡಿಯಾ




ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ

ಕಾಟೇರ	ಪ್ರದೀಪ್ ಜಿ
ವಿರಾಟಪುರ ವಿರಾಗಿ	ನವೀನ್ ಕುಮಾರ್
ಸಪ್ತ ಸಾಗರದಾಚೆ ಎಲ್ಲೋ ಸೈಡ್–ಎ	ಎಂ.ಆರ್.ರಾಜಕೃಷ್ಣನ್
ಪಿಂಕಿ ಎಲ್ಲಿ?	ಕೃಷ್ಣನ್ ಉನ್ನಿ ಎನ್.ಆರ್
19.20.21	ಮಹಾವೀರ್ ಸಾಬಣ್ಣನವರ್



ಗುಂಡಣ್ಣ



ಸಂದರ್ಭಕ್ಕನುಗುಣವಾಗಿ ಸದಾ ಬದಲಾಗಿ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ನಿಮಗೆಲ್ಲರಿಗೂ ಟೋಪಿ ಮಾರುವವನು ಹಾಗೂ ಕೋತಿಗಳ ಕಥೆ ಗೊತ್ತಿದೆ. ಟೋಪಿ ಮಾರಾಟಗಾರನೊಬ್ಬ ಒಂದೂರಿನಿಂದ ಇನ್ನೊಂದೂರಿಗೆ ಟೋಪಿ ಮಾರಲು ತನ್ನ ಬುಟ್ಟಿಯೊಂದಿಗೆ ಹೊರಟಿದ್ದ. ಒಂದು ಮಾವಿನ ತೋಪಿನಲ್ಲಿ ಕುಳಿತು ಊಟ ಮಾಡಿದ, ಹಾಗೆ ಮರದ ನೆರಳಲ್ಲಿ ಮಲಗಿ ನಿದ್ರೆ ಹೋದ. ಎದ್ದು ನೋಡುತ್ತಾನೆ, ಅವನ ಬುಟ್ಟಿಯಲ್ಲಿ ಒಂದು ಟೋಪಿಯೂ ಇಲ್ಲ. ತಲೆ ಎತ್ತಿ ನೋಡಿದರೆ ಮರದ ಮೇಲೆ ಕೋತಿಗಳೆಲ್ಲ ಇವನ ಟೋಪಿಯನ್ನು ಹಾಕಿಕೊಂಡು ಕುಳಿತಿವೆ.

ಕಪಿಗಳಿಂದ ಟೋಪಿಯನ್ನು ಮರಳಿ ಪಡೆಯಲು ಟೋಪಿ ಆತ ಹರಸಾಹಸ ಮಾಡಿದ. ಅವುಗಳನ್ನು ಗದರಿಸಿದ, ಆದರೆ ಅವು ಈತನನ್ನೇ ತಿರುಗಿ ಗದರಿಸಿದವು. ಕಡ್ಲೆಬೀಜದ ಆಮಿಷ ಒಡ್ಡಿದ. ಕೋತಿಗಳು ಕಡ್ಲೆ ಬೀಜವನ್ನು ತಿಂದವೇ ವಿನಃ ಟೋಪಿಯನ್ನು ಮರಳಿಸಲಿಲ್ಲ. ಕೊನೆಗೆ ಹತಾಶನಾದ ಆತ ತನ್ನ ಟೋಪಿಯನ್ನು ಕೆಳಕ್ಕೆಸೆದ. ಇದನ್ನೇ ಅನುಕರಿಸಿದ ಕೋತಿಗಳು ತಲೆಯ ಮೇಲಿನ ಟೋಪಿಯನ್ನು ಕೆಳಕ್ಕೆ ಹಾಕಿದವು. ಬೇಗ ಬೇಗನೆ ಅವುಗಳನ್ನು ಸಂಗ್ರಹಿಸಿಕೊಂಡು ಟೋಪಿ ಮಾಡುವ ಅಲ್ಲಿಂದ ಹೊರಟ.

ಇದು ಕಥೆಯ ಪೂರ್ವಾರ್ಧ ಮಾತ್ರ.

ಈ ಕಥೆಯ ಮುಂದುವರಿದ ಭಾಗದಲ್ಲಿ ಈ ಟೋಪಿ ಮಾರುವವನ ಮೊಮ್ಮಗ ಸಹಾ ಅದೇ ವೃತ್ತಿ ಮಾಡುತ್ತಿದ್ದ. ಅದೇ ಮಾವಿನ ತೋಪಿನ ಬಳಿ ಈತನೂ ಊಟಕ್ಕೆ ಕುಳಿತ. ನಂತರ ಅಲ್ಲಿಯೇ ಮಲಗಿದ. ಕಥೆ ಮರುಕಳಿಸಿತು. ಎಚ್ಚರವಾಗಿ ನೋಡುತ್ತಾನೆ, ಈ ಬಾರಿಯೂ ಬುಟ್ಟಿಯಲ್ಲಿ ಒಂದೂ ಟೋಪಿಯಿಲ್ಲ. ಮಂಗಗಳು ಟೋಪಿ ಧರಿಸಿ ಮರವೇರಿ ಕುಳಿತಿವೆ.

ಆದರೆ ಮೊಮ್ಮಗ ಗಾಭರಿಗೊಳ್ಳಲಿಲ್ಲ. ಒಂದು ಕವಳ ಹಾಕಿದ. ನಂತರ ಅಜ್ಜ ಮಾಡಿದಂತೆ ತಾನು ಸಹ ಟೋಪಿಯನ್ನು ನೆಲಕ್ಕೆ ಒಗೆದ. ಆದರೆ ಈ ಬಾರಿ ಯಾವ ಕೋತಿಯೂ ಟೋಪಿಯನ್ನು ಕೆಳಕ್ಕೆಸೆಯಲಿಲ್ಲ. ಬದಲಿಗೆ ಕೋತಿಗಳ ನಾಯಕ ಮರದಿಂದ ಕೆಳಗಿಳಿದು ಬಂದು ಹೇಳಿತು, 'ಅಣ್ಣಾ, ನಿನ್ನಜ್ಜ ನಿನಗೆ ಹೇಳಿರುವ ಕಥೆಯನ್ನೇ ನಮ್ಮಜ್ಜನೂ ನಮಗೆ ಹೇಳಿದ್ದಾನೆ. ಹೀಗಾಗಿ, ನೀನಿಲ್ಲಿಂದ ಹೋಗಬಹುದು' ಎಂದು.

ಬದಲಾಗುತ್ತಿರುವ ಜಗತ್ತಿನಲ್ಲಿ ನಾವೂ ಅನಿವಾರ್ಯವಾಗಿ ಬದಲಾಗಲೇಬೇಕು. ಹಿಂದೆಂದೋ ನಡೆದ ಕಥೆಯ ಆಧಾರದ ಮೇಲೇ ಜಗತ್ತು ಹಾಗೆಯೇ ಇರುತ್ತದೆ ಎಂದು ಅಂದುಕೊಳ್ಳುವುದು ಎಂದಿಗೂ ಸಲ್ಲ. ನಮ್ಮಂತೆಯೇ ಬೇರೆಯವರು ಸಹಾ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾಗುತ್ತಿರುತ್ತಾರೆ ಎನ್ನುವ ಅರಿವು ನಮಗೆ ಸದಾ ಇರಬೇಕು ಹಾಗೂ ಅದಕ್ಕೆ ತಕ್ಕಂತೆ ಪರಿಷ್ಕರಣೆಗೊಂಡು ಪ್ರತಿಕ್ರಿಯಿಸುವುದನ್ನು ನಾವು ಕಲಿಯಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಚತುರ್ಥಿ ಗಂ. 16-54 ನಕ್ಷತ್ರ: ಪೂರ್ವಾಷಾಢ ಗಂ. 10-14 ಯೋಗ: ಶುಭ ಗಂ. 06-37 ನಂತರ ಶುಕ್ಲ (ಶುಕ್ರ) ಗಂ. 28-28 ಕರಣ : ಬವ ಗಂ. 5-33, ವೃಷಭ ಮಾಸದ ನೇ 13 ದಿನ, ಮಳೆನಕ್ಷತ್ರ: ರೋಹಿಣಿ 1. ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-06 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 18 ಜುಲ್ಖಾಯದ್
ಅದೃಷ್ಟ ಸಂಖ್ಯೆ : 3, 1

ಮೇಷ: ಹಿರಿಯರ ಕೆಲವು ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಯೋಚಿಸು-ವುದರಲ್ಲಿ ಪ್ರಯೋಜನವಿಲ್ಲ. ಗೃಹ ಪ್ರವೇಶ ಮುಂದುಹಾಕುವುದು ಅನಿವಾರ್ಯ. ಸಣ್ಣ ವಿಷಯಗಳಿಂದ ದುಃಖ ಹೊಂದಬೇಡಿ.

ವೃಷಭ: ಹಳೆಯ ತಪ್ಪುಗಳು ಮತ್ತೆ ಮರುಕಳಿಸಿದಾಗ ಪೋಷಕರಿಗಾಗುವ ಅಸಮಾಧಾನವು ಮರ್ಯಾದೆಯ ಪ್ರಶ್ನೆಯಾಗುತ್ತದೆ. ರೇಷ್ಮೆ ಬೆಳೆಗಾರರಿಗೆ ಉತ್ತಮ ಆದಾಯ ಪ್ರಾಪ್ತಿ. ಮನೆಗೆ ಅತಿಥಿಯ ಆಗಮನವಾಗುವುದು.

ಮಿಥುನ: ಮಧುರ ಖಾದ್ಯಗಳ ಉತ್ಪಾದಕರಿಗೆ ಬೇಡಿಕೆ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ. ನಿರಪರಾಧಿಗಳ ಮೇಲೆ ಅಪರಾಧಗಳನ್ನು ಹೊರಿಸಿ ಅವರನ್ನು ದುಃಖಗೊಳಿಸುವುದು ಶ್ರೇಯಸ್ಸಲ್ಲ. ಮೃತ್ಯುವಿನ ದರ್ಶನ ಆದಂತಾಬಹುದು.

ಕರ್ಕಾಟಕ: ಸದ್ಯದಲ್ಲಿ ಎದುರಾಗಿರುವ ಸಮಸ್ಯೆಗಳು ಪರಿಹಾರ ಕಾಣಲಿವೆ. ಕಚ್ಚಾ ತೈಲದ ವಹಿವಾಟನ್ನು ನಡೆಸುವವರಿಗೆ ಅನಿರೀಕ್ಷಿತ ಸವಾಲುಗಳು ಎದುರಾಗುತ್ತವೆ. ಯಾವುದೇ ವಿಚಾರದಲ್ಲಿ ಆತುರದ ನಿರ್ಧಾರ ಒಳ್ಳೆಯದಲ್ಲ.

ಸಿಂಹ: ಜನಮಾನಸದಲ್ಲಿ ಅಚ್ಚಾಗಿರುವ ಕಾರ್ಯಗಳನ್ನು ನಿಲ್ಲಿಸಲು ಹೋಗಬೇಡಿ. ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದು ಅನಿವಾರ್ಯ. ಆಲಂಕಾರಿಕ ವಸ್ತು ಕೊಳ್ಳಲು ಹಣ ಕಳೆಯುವಿರಿ.

ಕನ್ಯಾ: ವೈವಾಹಿಕ ಜೀವನದಲ್ಲಿ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ಪಕ್ಕವಾದ್ಯ ಪ್ರವೀಣರಿಗೆ ಸಮಾರಂಭಗಳಲ್ಲಿ ಮನ್ನಣೆ ಸಿಗಲಿದೆ.

ತುಲಾ: ಹೋಟೆಲ್ ಉದ್ದಿಮೆದಾರರಿಗೆ ಸ್ವಲ್ಪ ಮಟ್ಟಿನ ನಷ್ಟಗಳು ಸಂಭವಿಸಬಹುದು ಅಥವಾ ಕೆಲಸಗಾರರ ಬೇಡಿಕೆಯಂಥ ಸಮಸ್ಯೆಗಳು ಎದುರಾಗಬಹುದು. ಹಳೆಯ ಏಕಾಂಗಿತನವು ಕಾಡುವ ಸಾಧ್ಯತೆ ಇದೆ.

ವೃಶ್ಚಿಕ: ವಿದ್ಯುತ್ ಉಪಕರಣಗಳನ್ನು ಸರಿಯಾದ ರೀತಿಯಲ್ಲಿ ಬಳಸದಿದ್ದಲ್ಲಿ ಹಾಳಾಗುವ ಸಾಧ್ಯತೆ ಇದೆ. ಪಾರಂಪರಿಕ ವೃತ್ತಿ ಮುಂದುವರಿಸುವವರಿಗೆ ಶುಭಫಲ ಪ್ರಾಪ್ತಿಯಾಗುವುದು. ದಲ್ಲಾಳಿಗಳ ಆಮಿಷಕ್ಕೆ ಮರುಳಾಗದಿರಿ.

ಧನು: ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ತಾಳ್ಮೆಯಿಂದ ಮತ್ತು ಜಾಣತನದಿಂದ ಒಪ್ಪಿಕೊಳ್ಳಿ. ಸಂತೋಷಕ್ಕಾಗಿ ಕೆಲವರು ಮಾಡುವ ಖರ್ಚು ದುಂದುವೆಚ್ಚವಾಗಿ ಕಾಣಬಹುದು.

ಮಕರ: ಅಕ್ಕ-ಪಕ್ಕದವರಲ್ಲಿ ಸ್ನೇಹಪರ ಸ್ವಭಾವ ತೋರುವುದರಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು. ಆಪ್ತರ ಮನೆಯಲ್ಲಿನ ನಡೆಯುವ ಸಮಾರಂಭಗಳಿಗಾಗಿ ಜವಾಬ್ದಾರಿ, ಓಡಾಟ ಹೆಚ್ಚಲಿದೆ.

ಕುಂಭ: ದಿನದ ಮೊದಲ ಭಾಗ ಶ್ರಮ ಭರಿತವಾಗಿದ್ದರೂ ನಂತರ ಬಹಳ ವಿರಾಮ ದೊರೆಯುವುದು. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಿರಿ. ಸಂಘ ಸಂಸ್ಥೆಗಳಲ್ಲಿ ಸ್ಥಾನ ಮಾನಗಳು ದೊರೆಯಲಿದೆ.

ಮೀನ: ವಿಚಿತ್ರ ಕನಸುಗಳು ಹಗಲನ್ನೂ ಚಿಂತೆಯಲ್ಲಿ ಕಳೆಯುವಂತೆ ಮಾಡುತ್ತದೆ. ಕಾರ್ಯಕ್ಷೇತ್ರದಲ್ಲಿನ ಕೋಪವು ಮನೆಯ ಮಡದಿ ಹಾಗೂ ಮಗನ ಮೇಲೆ ಪ್ರಯೋಗವಾಗುವುದು ಬೇಡ.

ಪದಬಂಧ 5693

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಭೇದ ಭಾವವಿಲ್ಲದಿರುವುದು (5)
4. ಆ ಮೋದಕ ತಿನ್ನುವಾಗ ಆದ ಸಂತೋಷ (3)
5. ಮಧುರ ಫಲ ನೀಡುವ ವೃಕ್ಷ (2)
7. ವಿವಿಧದಲ್ಲಿರುವ ರೀತಿ (2)
10. ಕಮರಿಯೊಳಗೆ ಕಾಣಿಸಿದ ಆನೆ (2)
13. ನೈಪುಣ್ಯದಿಂದ ಗಳಿಸಿಕೊಂಡಿರುವ ಸುಕೃತ (2)
15. ಮರಳು ಇಲ್ಲಿದೆ (3)
16. ಆಕಾಶವನ್ನು ಮುಟ್ಟುವಂತಹ ಕಟ್ಟಡ (5)

ಮೇಲಿಂದ ಕೆಳಕ್ಕೆ
1. ಅಕ್ಷರಗಳನ್ನು ತಿಳಿದವನು (4)
2. ದರ್ಶನ ತೋರಿ ದೃಷ್ಟಾಂತವನ್ನು ನೀಡಿ (4)
3. ಮತ ಹಾಕಲು ಹೋದಾಗ ಆವರಿಸಿದ ಕತ್ತಲು (2)
4. ಪೂಜೆ ಮಾಡುವವನು (4)
6. ಸೂರ್ಯನ ಇನ್ನೊಂದು ಹೆಸರು (2)
8. ಅಧಮನ ಹತ್ತಿರವಿರುವ ಸಿರಿವಂತ (4)
9. ಶಾಖದಿಂದ ಕೂಡಿದ ನೆತ್ತರು ಉಲ್ಬಾಕಾಣುತ್ತಿದೆ (4)
11. ಪುಢಾರಿ ಬಳಿಯಲ್ಲೇ ಕಾಣಿಸಿಕೊಂಡಿರುವ ಶತ್ರು (2)
12. ತೆಳ್ಳಗಿನ ಸೊಂಟ (4)
14. ಗಣನೀಯವಾದವನು ಏಕೋ ತಿರುಗಿದ್ದಾನಲ್ಲಾ? (2)

■	■	■	■	1	■	■	■	■
■	■	2				3	■	■
4			■		■	5	6	■
	■		■		■	■	7	8
	■		■	■	■	9	■	
10	11	■	■	12	■		■	
■	13	14	■		■	15		
■	■	16					■	■
■	■	■	■		■	■	■	■

5692ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಗಮ 3.ದಿನಾಂಕ
4.ಮಡದಿ 6.ಆಟ
7.ನವ 9.ಹುತ್ತ
13.ವರ 14.ಚಿಲುಕ
15.ಜತನ 16.ನಗಾರಿ.

ಮೇಲಿಂದ ಕೆಳಕ್ಕೆ:
1.ಆಕಳು 2.ಮಮತೆ
3.ದಿಟ 5.ದಿನ
6.ಅಜಾನುಬಾಹು
8.ವರ್ಣವಿಕಾರ
10.ತ್ರುಚಿ 11.ಅಂಕನ
12.ಗುಜರಿ 13.ವನ

ಸುಡೊಕು 6078

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6077 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4


ಚಂಡಮಾರುತವು ಅಪ್ಪಳಿಸುವುದಕ್ಕೂ ಮೊದಲು ಮೀನುಗಾರಿಕಾ ದೋಣಿಯನ್ನು ಬಾಂಗ್ಲಾದೇಶದ ಕುವಾಕಾತಾದಲ್ಲಿ ಇಬ್ಬರು ವ್ಯಕ್ತಿಗಳು ಸಮುದ್ರದ ದಡಕ್ಕೆ ತಂದು ಇರಿಸಿದರು —ಎಎಫ್‌ಪಿ ಚಿತ್ರ


ಮಳೆಯಿಂದಾಗಿ ಕೋಲ್ಕತ್ತ ವಿಮಾನ ನಿಲ್ದಾಣವು ಭಾನುವಾರ ಜಲಾವೃತವಾಗಿತ್ತು – ಪಿಟಿಐ ಚಿತ್ರ

ಚಂಡಮಾರುತ: 1 ಲಕ್ಷ ಜನರ ಸ್ಥಳಾಂತರ


ಕೋಲ್ಕತ್ತ (ಪಿಟಿಐ): ರೀಮಲ್ ಚಂಡಮಾರುತದಿಂದ ಜೀವಹಾನಿ ಉಂಟಾಗುವುದನ್ನು ತಪ್ಪಿಸುವ ಉದ್ದೇಶದಿಂದ ಪಶ್ಚಿಮ ಬಂಗಾಳ ಸರ್ಕಾರವು ಅಂದಾಜು 1.10 ಲಕ್ಷ ಜನರನ್ನು ಕರಾವಳಿ ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ರವಾನಿಸಿದೆ.

ಸುಂದರಬನ ಹಾಗೂ ಸಾಗರ ದ್ವೀಪದಿಂದಲೂ ಜನರನ್ನು ಸ್ಥಳಾಂತರ ಮಾಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಕ್ಷಣೆ ಹಾಗೂ ಪರಿಹಾರ ಕಾರ್ಯಕ್ಕೆ ನೆರವಾಗಲು ರಾಜ್ಯದ ಪರಿಹಾರ ನಿರ್ವಹಣಾ ತಂಡ ಮತ್ತು ಎನ್‌ಡಿಆರ್‌ಎಫ್‌ನ ತಲಾ 16 ತುಕಡಿಗಳನ್ನು ನಿಯೋಜಿಸಲಾಗಿದೆ.

'ಜನರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸುವ ಯತ್ನಗಳು ಕರಾವಳಿ ಪ್ರದೇಶದ ಮೇಲೆ ಗಮನ ಕೇಂದ್ರೀಕರಿಸಿವೆ' ಎಂದು ಅವರು ತಿಳಿಸಿದ್ದಾರೆ. ರಾಜ್ಯ ಸರ್ಕಾರವು ಅಂದಾಜು 5.4 ಲಕ್ಷ ಟಾರ್ಪಾಲಿನ್‌ಗಳನ್ನು ವಿತರಿಸಿದೆ. ಆಹಾರ ಧಾನ್ಯಗಳ ಪೊಟ್ಟಣ, ಹಾಲಿನ ಪುಡಿ, ಕುಡಿಯುವ ನೀರಿನ ಪೊಟ್ಟಣಗಳು ಈ ಪ್ರದೇಶದಲ್ಲಿ ಅಗತ್ಯ ಪ್ರಮಾಣದಲ್ಲಿ ಲಭ್ಯವಿರುವಂತೆ ಖಾತರಿಪಡಿಸಲಾಗಿದೆ.

ಪರಿಸ್ಥಿತಿಯನ್ನು ಅವಲೋಕಿಸಲು ರಾಜ್ಯದ ಸಚಿವಾಲಯದಲ್ಲಿ ಕೇಂದ್ರೀಕೃತ ನಿಯಂತ್ರಣ ಘಟಕವೊಂದನ್ನು ಆರಂಭಿಸಲಾಗಿದೆ.

ಚಂಡಮಾರುತವು ಭಾನುವಾರ ಮಧ್ಯರಾತ್ರಿಗೆ ಮೊದಲೇ ಅಪ್ಪಳಿಸಲಿದೆ ಎಂದು ಅಂದಾಜಿಸಲಾಗಿದೆ. ಚಂಡಮಾರುತದ ವೇಗವು ಪ್ರತಿ ಗಂಟೆಗೆ 110 ಕಿ.ಮೀ.ನಿಂದ 120 ಕಿ.ಮೀ.ವರೆಗೆ ಇರುವ ಸಾಧ್ಯತೆ ಇದೆ. ಮಾರುತದ ವೇಗವು ಗಂಟೆಗೆ 135 ಕಿ.ಮೀ. ವರೆಗೂ ಇರಬಹುದು ಎಂದು ಕೂಡ ಹೇಳಲಾಗಿದೆ. ರೀಮಲ್ ಚಂಡಮಾರುತದ ಪರಿಣಾಮಗಳನ್ನು ನಿಭಾಯಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಅವಲೋಕನ ನಡೆಸಲು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಭೆ ನಡೆಸಿದರು.



ಬಂಗಾಳದಲ್ಲಿ ಸಾರಿಗೆ ವ್ಯವಸ್ಥೆಗೆ ಅಡಚಣೆ

ಕೋಲ್ಕತ್ತ (ಪಿಟಿಐ): ರೀಮಲ್ ಚಂಡಮಾರುತವು ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾದೇಶದ ಕರಾವಳಿಗೆ ಅಪ್ಪಳಿಸಲಿರುವ ಕಾರಣಕ್ಕೆ, ಕೋಲ್ಕತ್ತ ಮತ್ತು ಪಶ್ಚಿಮ ಬಂಗಾಳದ ದಕ್ಷಿಣ ಭಾಗದಲ್ಲಿ ವಿಮಾನ, ರೈಲು ಮತ್ತು ರಸ್ತೆ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ.

ಕೋಲ್ಕತ್ತ ವಿಮಾನ ನಿಲ್ದಾಣ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮವಾಗಿ ಭಾನುವಾರ ಮಧ್ಯಾಹ್ನದಿಂದ ಅನ್ವಯವಾಗುವಂತೆ 21 ಗಂಟೆಗಳವರೆಗೆ ವಿಮಾನಗಳ ಕಾರ್ಯಾಚರಣೆಯನ್ನು ನಿರ್ಬಂಧಿಸಿದ್ದಾರೆ. ಇದರಿಂದಾಗಿ ಒಟ್ಟು 394 ವಿಮಾನಗಳ ಕಾರ್ಯಾಚರಣೆ ಇರುವುದಿಲ್ಲ. ಪೂರ್ವ ಮತ್ತು ದಕ್ಷಿಣ ರೈಲ್ವೆಯು ಹಲವು ರೈಲುಗಳ ಸಂಚಾರವನ್ನು ರದ್ದುಪಡಿಸಿದೆ.

ಕೋಲ್ಕತ್ತ ಹಾಗೂ ಇತರ ಜಿಲ್ಲಾ ಕೇಂದ್ರಗಳಲ್ಲಿ ಭಾನುವಾರ ಬಸ್, ಟ್ಯಾಕ್ಸಿ ಮತ್ತು ರಿಕ್ಷಾ ಸಂಚಾರ ವಿರಳವಾಗಿತ್ತು. ಚಂಡಮಾರುತದ ಪರಿಣಾಮವಾಗಿ ರಸ್ತೆ ಹಾಗೂ ರೈಲು ಸಾರಿಗೆ ಸೋಮವಾರ ಅಸ್ತವ್ಯಸ್ತವಾಗುವ ಸಾಧ್ಯತೆ ಇದೆ.

ಪರಿಸ್ಥಿತಿ ಎದುರಿಸಲು ಸನ್ನದ್ಧ

- ಕೋಲ್ಕತ್ತದಲ್ಲಿ ಚಂಡಮಾರುತ ಎದುರಿಸಲು ನಡೆದಿರುವ ಸಿದ್ಧತೆ ಪರಿಶೀಲಿಸಲು ಕೋಲ್ಕತ್ತ ಮೇಯರ್ ಫಿರ್ಹಾದ್ ಹಕೀಂ ಅಧಿಕಾರಿಗಳ ಸಭೆ ನಡೆಸಿದ್ದಾರೆ.
- ಕೋಲ್ಕತ್ತದಲ್ಲಿ ಚಂಡಮಾರುತದ ನಂತರದ ಪರಿಸ್ಥಿತಿಯನ್ನು ನಿಭಾಯಿಸಲು 15 ಸಾವಿರ ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದೆ.
- ರಾತ್ರಿಯಿಡೀ ಎಚ್ಚರದಿಂದ ಇರುವುದಾಗಿ, ಪರಿಸ್ಥಿತಿಯ ಮೇಲೆ ಖುದ್ದಾಗಿ ನಿಗಾ ಇರಿಸುವುದಾಗಿ ಹಕೀಂ ಭರವಸೆ ನಿಡಿದ್ದಾರೆ.
- ರೀಮಲ್ ಪರಿಣಾಮವಾಗಿ ಒಡಿಶಾದ ಭದ್ರಕ್, ಬಾಲೇಶ್ವರ, ಕೇಂದ್ರಪಾಢ ಮತ್ತು ಮಯೂರಭಂಜ್ ಜಿಲ್ಲೆಗಳಲ್ಲಿ 7 ಸೆಂ.ಮೀ.ನಿಂದ 11 ಸೆಂ.ಮೀ.ವರೆಗೆ ಮಳೆ ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ.
- ತ್ರಿಪುರಾ ಸರ್ಕಾರವು ದಕ್ಷಿಣ, ಧಲಾಯ್, ಖೊವಾಯ್ ಮತ್ತು ಪಶ್ಚಿಮ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದೆ. ಈ ಜಿಲ್ಲೆಗಳಲ್ಲಿ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ.
- ತ್ರಿಪುರಾದಲ್ಲಿ ಇನ್ನುಳಿದ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಸುದ್ದಿ 2 ನಿಮಿಷ

ಸೇನಾ ಮುಖ್ಯಸ್ಥ ಮನೋಜ್ ಪಾಂಡೆ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರ ಸೇವಾ ಅವಧಿಯನ್ನು ಸರ್ಕಾರ ಒಂದು ತಿಂಗಳ ಕಾಲ ವಿಸ್ತರಿಸಿದೆ.

ಮೇ 31ರಂದು ಜನರಲ್ ಪಾಂಡೆ ಅವರು ನಿವೃತ್ತರಾಗಬೇಕಿತ್ತು, ಆದರೆ, ಜೂನ್ 30ರವರೆಗೆ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

'ಸೇನಾ ನಿಯಮಾವಳಿಗಳ ಅಡಿಯಲ್ಲಿ ಜನರಲ್ ಪಾಂಡೆ ಅವರ ಸೇವಾ ಅವಧಿಯನ್ನು ವಿಸ್ತರಿಸಲು ಸಚಿವ ಸಂಪುಟದ ನೇಮಕಾತಿ ಸಮಿತಿಯು ಅನುಮತಿ ನೀಡಿದೆ' ಎಂದು ರಕ್ಷಣಾ ಇಲಾಖೆ ತಿಳಿಸಿದೆ.



ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಿದ ಹಮಾಸ್

ದಿರ್ ಅಲ್–ಬಲಾಹ (ಗಾಜಾ ಪಟ್ಟಿ), (ಎಪಿ): ಇಸ್ರೇಲ್ ಗುರಿಯಾಗಿಸಿಕೊಂಡು ಹಮಾಸ್ ಭಾನುವಾರ ರಾಕೆಟ್ ದಾಳಿ ನಡೆಸಿದ್ದು, ಟೆಲ್‌ಅವಿವ್‌ನಲ್ಲಿ ವೈಮಾನಿಕ ದಾಳಿಯ ಸೈರನ್‌ಗಳು ಮೊಳಗಿದವು.

ಜನವರಿಯಿಂದ ಈಚೆಗೆ ಹಮಾಸ್ ನಡೆಸಿದ ದೀರ್ಘ ದಾಳಿ ಇದಾಗಿದ್ದರೂ, ಯಾವುದೇ ಹಾನಿಯಾದ ಬಗ್ಗೆ ತಕ್ಷಣಕ್ಕೆ ವರದಿ ದಾಖಲಾಗಿಲ್ಲ. ಬಂಡುಕೋರರು ಯುದ್ಧ ಆರಂಭಿಸಿದಾಗಿನಿಂದಲೂ ಸಣ್ಣ ಪ್ರಮಾಣದಲ್ಲಿ ಗಾಜಾದ ಸುತ್ತಮುತ್ತಲ ಪ್ರದೇಶಗಳ ಮೇಲೆ ನಿರಂತರವಾಗಿ ದಾಳಿ ನಡೆಸುತ್ತಿದ್ದಾರೆ.

ಹಮಾಸ್‌ನ ಮಿಲಿಟರಿ ವಿಭಾಗವು ಈ ದಾಳಿಯನ್ನು ನಡೆಸಿರುವುದಾಗಿ ಹೇಳಿಕೊಂಡಿದೆ.

'ಸೇನೆಯು ಈಚೆಗೆ ದಾಳಿ ನಡೆಸಿದ ದಕ್ಷಿಣ ಗಾಜಾದ ರಫಾ ಪ್ರದೇಶದಿಂದ ಉಡಾವಣೆಯಾಗಿರುವ ಎಂಟು ಸ್ಫೋಟಕಗಳು ದೇಶ ಪ್ರವೇಶಿಸಿದ್ದು, ಹಲವು ರಾಕೆಟ್‌ಗಳನ್ನು ಗಡಿಯಲ್ಲೇ ನಿಷ್ಕ್ರಿಯಗೊಳಿಸಲಾಗಿದೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಮಾನವೀಯ ನೆರವು ಹೊತ್ತು ಬಂದಿರುವ ಟ್ರಕ್‌ಗಳಿಗೆ ಪ್ರವೇಶಾವಕಾಶ ನೀಡಲಾಗಿದೆ ಎಂದು ಇಸ್ರೇಲ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಪಾಕ್: ಐವರು ಉಗ್ರರ ಹತ್ಯೆ, ಇಬ್ಬರು ಯೋಧರು ಹುತಾತ್ಮ

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಂಖ್ತುಂಖ್ವಾ ಪ್ರಾಂತ್ಯದಲ್ಲಿ ಭಾನುವಾರ ಸೇನಾಪಡೆಯ ಯೋಧರು ಕೈಗೊಂಡಿದ್ದ ಕಾರ್ಯಾಚರಣೆಯಲ್ಲಿ ಕನಿಷ್ಠ ಐವರು ಉಗ್ರರು ಮೃತಪಟ್ಟಿದ್ದಾರೆ. ಇದೇ ವೇಳೆ ಕ್ಯಾಪ್ಟನ್ ಸೇರಿ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ ಎಂದು ಪಾಕಿಸ್ತಾನ ಸೇನೆ ತಿಳಿಸಿದೆ.

'ಖೈಬರ್ ಪಂಖ್ತುಂಖ್ವಾ ವಲಯದ ಹಸನ್ ಖೇಲ್‌ನಲ್ಲಿ ಉಗ್ರರು ಇರುವುದಾಗಿ ಗುಪ್ತಚರ ಇಲಾಖೆ ಖಚಿತ ಮಾಹಿತಿ ನೀಡಿತ್ತು. ಇದರ ಆಧಾರದ ಮೇಲೆ ಸೇನೆಯು ಉಗ್ರರ ನಿಗ್ರಹ ಕಾರ್ಯಾಚರಣೆ ಕೈಗೊಂಡು ಐವರನ್ನು ಹೊಡೆದುರುಳಿಸಿದೆ. ಕಾರ್ಯಾಚರಣೆಯಲ್ಲಿ ಮೂವರು ಉಗ್ರರು ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನ ಸೇನೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಖೈಬರ್ ಪಂಖ್ತುಂಖ್ವಾ ಮತ್ತು ಬಲೂಚಿಸ್ತಾನ ವಲಯದಲ್ಲಿ ಈಚೆಗೆ ಉಗ್ರರ ಉಪಟಳ ಹೆಚ್ಚಾಗಿರುವ ನಡುವೆಯೇ ಈ ಕಾರ್ಯಾಚರಣೆ ನಡೆದಿದೆ.



ಬಸ್‌ಗೆ ಬೆಂಕಿ ಹಚ್ಚಿದ ಭಯೋತ್ಪಾದಕರು

ಪೇಶಾವರ (ಪಿಟಿಐ): ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ತೆಹ್ರೀಕ್ ಎ ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಸಂಘಟನೆಯ ಭಯೋತ್ಪಾದಕರು, ಬಸ್‌ವೊಂದರಲ್ಲಿ ಇದ್ದ ಪ್ರಯಾಣಿಕರನ್ನು ಕೆಳಗಿಳಿಸಿ ಚಿತ್ರಹಿಂಸೆ ನೀಡಿದ್ದಾರೆ. ಅಲ್ಲದೆ ಬಸ್‌ಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ದ್ರಾಜಿಂಡಾದಿಂದ ಡೇರಾ ಇಸ್ಮಾಯಿಲ್ ಖಾನ್‌ಗೆ ಶನಿವಾರ ತೆರಳುತ್ತಿದ್ದ ಬಸ್ ಅನ್ನು ಟಿಟಿಪಿ ಭಯೋತ್ಪಾದಕರು ದಾರಬನ್ ತೆಹಸಿಲ್ ಪ್ರದೇಶದಲ್ಲಿ ತಡೆದು, ಪ್ರಯಾಣಿಕರನ್ನು ಬಲವಂತವಾಗಿ ಕಳೆಗಿಳಿಸಿದ್ದಾರೆ. ಸರ್ಕಾರವನ್ನು ಬೆಂಬಲಿಸಿದ್ದಕ್ಕಾಗಿ ಪ್ರಯಾಣಿಕರಿಗೆ ಬೆದರಿಕೆ ಹಾಕಿದ್ದಲ್ಲದೆ, ಹಿಂಸೆಯನ್ನೂ ನೀಡಿದ್ದಾರೆ. ನಂತರ ಖಾಲಿ ಬಸ್ ಅನ್ನು ಸುಟ್ಟು, ಬೂದಿ ಮಾಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಪರಿಸ್ಥಿತಿ ನಿಯಂತ್ರಿಸಲು ಈ ಪ್ರದೇಶದಲ್ಲಿ ಭಾರಿ ಸಂಖ್ಯೆಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

'ಉಕ್ರೇನ್ ಮೇಲೆ ತೀವ್ರ ದಾಳಿಗೆ ರಷ್ಯಾ ತಯಾರಿ'

ಕೀವ್ (ಎಪಿ): ಉಕ್ರೇನ್‌ನ ಹಾರ್ಕಿವ್ ನಗರದ ಮೇಲೆ ಶನಿವಾರ ರಷ್ಯಾ ನಡೆಸಿದ ಬಾಂಬ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ಈ ನಡುವೆ ಉಕ್ರೇನಿನ ಉತ್ತರ ಗಡಿಯಲ್ಲಿ ರಷ್ಯಾ ತನ್ನ ಆಕ್ರಮಣವನ್ನು ತೀವ್ರಗೊಳಿಸಲು ತಯಾರಿ ನಡೆಸುತ್ತಿದೆ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ಹೇಳಿದ್ದಾರೆ.


ವೊಲೊಡಿಮಿರ್ ಝೆಲೆನ್‌ಸ್ಕಿ

ಬಾಂಬ್ ಸ್ಫೋಟದಲ್ಲಿ 43 ಜನರು ಗಾಯಗೊಂಡಿದ್ದರೆ, 16 ಜನರು ನಾಪತ್ತೆಯಾಗಿದ್ದಾರೆ ಎಂದು ಹಾರ್ಕಿವ್ ಗವರ್ನರ್ ಓಲೆಹ್ ಸಿನಿಹುಬೊವ್ ತಿಳಿಸಿದ್ದಾರೆ.

ವಿಡಿಯೊ ಸಂದೇಶ ಹಂಚಿಕೊಂಡಿರುವ ಝೆಲೆನ್‌ಸ್ಕಿ 'ಹಾರ್ಕಿವ್ ನಗರದಿಂದ ವಾಯುವ್ಯಕ್ಕೆ 90 ಕಿ.ಮೀ ದೂರದಲ್ಲಿ ರಷ್ಯಾವು ಆಕ್ರಮಣಕಾರಿ ಕ್ರಮ ಕೈಗೊಳ್ಳುತ್ತಿದೆ. ನಮ್ಮ ಗಡಿ ಬಳಿ ರಷ್ಯಾದ ಸೇನಾ ಪಡೆಗಳಿವೆ' ಎಂದಿದ್ದಾರೆ.

ರಷ್ಯಾ ಸೇನೆ ಪಡೆಗಳು ಯಾವ ಸ್ಥಳದಲ್ಲಿವೆ ಎಂಬುದನ್ನು ನಿರ್ದಿಷ್ಟಪಡಿಸಿಲ್ಲ. ಆದರೆ, ಉಕ್ರೇನ್ ಅಧಿಕಾರಿಗಳು ಸುಮಿ ಪ್ರದೇಶದ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಸುಮಾರು 2,50,000 ಜನರಿರುವ ಹಾರ್ಕಿವ್ ಮತ್ತು ಸುಮಿ ನಗರಗಳು ರಷ್ಯಾದ ಗಡಿಯಿಂದ ಕೇವಲ 25 ಕಿ.ಮೀ ದೂರದಲ್ಲಿವೆ.

ರಷ್ಯಾ ಪಡೆಗಳು ಹಾರ್ಕಿವ್ ಪ್ರದೇಶಗಳಲ್ಲಿನ ಹಳ್ಳಿಗಳನ್ನು ವಶಪಡಿಸಿಕೊಂಡಿದ್ದು, ನಗರದ ಕೇಂದ್ರ ಭಾಗದಲ್ಲಿ ಬರಲು ಪ್ರಯತ್ನಿಸುತ್ತಿವೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ. ಮೇ 10ರಿಂದ ಈವರೆಗೆ ಉಕ್ರೇನ್ ಅಧಿಕಾರಿಗಳು ಇಲ್ಲಿಂದ 11,000 ಜನರನ್ನು ಸ್ಥಳಾಂತರಗೊಳಿಸಿದ್ದಾರೆ.

ಪೋಶೆ ಕಾರು ಅಪಘಾತ ಸ್ಥಳದಲ್ಲಿ ಕಾಂಗ್ರೆಸ್‌ನಿಂದ ಪ್ರಬಂಧ ಸ್ಪರ್ಧೆ

ಪುಣೆ (ಪಿಟಿಐ): 17 ವರ್ಷದ ಬಾಲಕನೊಬ್ಬ ಅತಿವೇಗದಿಂದ ಕಾರು ಚಲಾಯಿಸಿದ್ದರಿಂದ ಇಬ್ಬರು ಮೃತಪಟ್ಟ ಘಟನೆ ನಡೆದಿದ್ದ ಸ್ಥಳದಲ್ಲಿ ಯುವ ಕಾಂಗ್ರೆಸ್ ಭಾನುವಾರ ಪ್ರಬಂಧ ಬರೆಯುವ ಸ್ಪರ್ಧೆಯನ್ನು ಆಯೋಜಿಸಿತ್ತು.

ಅಂದಾಜು 100 ಯುವಕ–ಯುವತಿಯರು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. 'ನನ್ನ ನೆಚ್ಚಿನ ಕಾರು', 'ಒಂದು ವೇಳೆ ನನ್ನ ತಂದೆ ಬಿಲ್ಡರ್ ಆಗಿದ್ದರೆ' ಹಾಗೂ 'ಮದ್ಯಪಾನ ದಿಂದಾಗುವ ದುಷ್ಪರಿಣಾಮಗಳು' ಎಂಬ ವಿಷಯಗಳ ಮೇಲೆ ಪ್ರಬಂಧ ಬರೆಯಲು ಸೂಚಿಸಲಾಗಿತ್ತು.

ಕಸ್ಬಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ರವೀಂದ್ರ ಧಂಗೇಕರ್ ಸಹ ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಸ್ಪರ್ಧೆ ಆಯೋಜಿಸಿದ್ದ ಸ್ಥಳದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಇಲ್ಲಿನ ಕಲ್ಯಾಣನಗರ ಪ್ರದೇಶದಲ್ಲಿ ಮೇ 19ರಂದು ಈ ಅಪಘಾತ ಸಂಭವಿಸಿತ್ತು. ಬಾಲಕ ಚಲಾಯಿಸುತ್ತಿದ್ದ ಎನ್ನಲಾದ ಪೋಶೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಐಟಿ ಉದ್ಯೋಗಿಗಳು ಮೃತಪಟ್ಟಿದ್ದರು.

ಈ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಬಾಲಕ ಮದ್ಯ ಸೇವನೆ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿ, ಬಾಲಕನ ತಂದೆ ಹಾಗೂ ಉದ್ಯಮಿ ವಿಶಾಲ್ ಅಗರವಾಲ್, ತಾತ ಸುರೇಂದ್ರ ಅಗರವಾಲ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಬಾಲಕನನ್ನು ಜೂನ್ 5ರ ವರೆಗೆ ವೀಕ್ಷಣಾ ಕೇಂದ್ರಕ್ಕೆ ಕಳುಹಿಸಲಾಗಿದೆ.

ಬಸ್‌ಗೆ ಟ್ರಕ್ ಡಿಕ್ಕಿ 12 ಯಾತ್ರಾರ್ಥಿಗಳ ಸಾವು

ಶಹಜಹಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಉತ್ತರಾಖಂಡದ ಪೂರ್ಣಗಿರಿ ದೇವಸ್ಥಾನಕ್ಕೆ ತೆರಳುತ್ತಿದ್ದ ಬಸ್‌ಗೆ ಟ್ರಕ್‌ವೊಂದು ಡಿಕ್ಕಿಯಾದ ಪರಿಣಾಮ ಬಸ್‌ನಲ್ಲಿದ್ದ 12 ಯಾತ್ರಾರ್ಥಿಗಳು ಸಾವಿಗೀಡಾಗಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ಸೀತಾಪುರದಿಂದ ಸಂಜೆ 6 ಗಂಟೆಗೆ ಪೂರ್ಣಗಿರಿಗೆ ಹೊರಟಿದ್ದ ಬಸ್‌ನಲ್ಲಿ 59 ಪ್ರಯಾಣಿಕರಿದ್ದರು. ಶಹಜಹಾನ್‌ಪುರ ಜಿಲ್ಲೆಯ ಹಾಜಿಯಾಪುರ ಗ್ರಾಮದಲ್ಲಿ ಶನಿವಾರ ರಾತ್ರಿ 11 ಗಂಟೆಗೆ ರಸ್ತೆ ಬದಿಯ ಉಪಾಹಾರ ಗೃಹದ ಬಳಿ ಬಸ್ ನಿಲ್ಲಿಸಲಾಗಿತ್ತು. ಕೆಲ ಯಾತ್ರಾರ್ಥಿಗಳು ಊಟಕ್ಕೆಂದು ತೆರಳಿದ್ದರೆ, ಕೆಲವರು ಬಸ್‌ನಲ್ಲೇ ಕಾಯುತ್ತಿದ್ದರು. ಈ ವೇಳೆ ಜಲ್ಲಿಕಲ್ಲು ತುಂಬಿದ್ದ ಟ್ರಕ್‌ವೊಂದು ನಿಯಂತ್ರಣ ತಪ್ಪಿ ಪಲ್ಟಿಯಾಗಿ ಬಸ್ ಮೇಲೆ ಬಿದ್ದಿದೆ.

ಸ್ಥಳೀಯ ಪೊಲೀಸರು ಮತ್ತು ಗ್ರಾಮ ಸ್ಥರು ಬಸ್ಸಿನೊಳಗೆ ಸಿಲುಕಿದ್ದ ಕೆಲ ಪ್ರಯಾಣಿಕರನ್ನು ರಕ್ಷಿಸಿದ್ದಾರೆ.

ಘಟನೆಯಲ್ಲಿ 6 ಮಂದಿ ಮಹಿಳೆಯರು ಮತ್ತು ಮೂವರು ಮಕ್ಕಳು ಸೇರಿದಂತೆ 12 ಜನ ಮೃತಪಟ್ಟಿದ್ದರೆ ಉಳಿದ 9 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆ ಬಳಿಕ ಟ್ರಕ್ ಚಾಲಕ ಪರಾರಿಯಾಗಿದ್ದು, ಆತನಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಪುವಾ ನ್ಯೂಗಿನಿಯಲ್ಲಿ ಅವಘಡ 150ಕ್ಕೂ ಹೆಚ್ಚು ಮನೆ ನಾಶ

ಭೂಕುಸಿತ: ಮೃತರ ಸಂಖ್ಯೆ 670ಕ್ಕೆ

ಮೆಲ್ಬರ್ನ್ (ಎಪಿ): ಪಪುವಾ ನ್ಯೂಗಿನಿಯಲ್ಲಿ ಸಂಭವಿಸಿದ ಭಾರಿ ಪ್ರಮಾಣದ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 670 ದಾಟಿದೆ ಎಂದು ವಿಶ್ವಸಂಸ್ಥೆಯ ಅಂತರ ರಾಷ್ಟ್ರೀಯ ವಲಸೆ ಸಂಸ್ಥೆ ಭಾನುವಾರ ಅಂದಾಜು ಮಾಡಿದೆ.

ಭೂ ಕುಸಿತದಿಂದ ಅಂದಾಜು 150ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ ಎಂದು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ವಲಸೆ ಸಂಸ್ಥೆಯ ಅಧಿಕಾರಿ ಅಕ್ಟೋಪ್ರಾಕ್ ತಿಳಿಸಿದ್ದಾರೆ.

ಶುಕ್ರವಾರ ಸಂಭವಿಸಿದ ಭೂಕುಸಿತದ ವೇಳೆ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 60ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ ಎಂದು ಅಂದಾಜಿಸಲಾಗಿತ್ತು. ಆದರೆ ಯಂಬಲಿ ಮತ್ತು ಎಂಗಾ ಪ್ರಾಂತೀಯ ಅಧಿಕಾರಿಗಳ ಲೆಕ್ಕಾಚಾರವನ್ನು ಆಧರಿಸಿ ಈ ಸಂಖ್ಯೆಯನ್ನು ಪರಿಷ್ಕರಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

670ಕ್ಕೂ ಹೆಚ್ಚು ಜನರ ದೇಹವು ಮಣ್ಣಿನಲ್ಲಿ ಹುದುಗಿ ಹೋಗಿದೆ ಎನ್ನಲಾಗುತ್ತಿದೆ. ಭೂಮಿ ಇನ್ನೂ ಜಾರುತ್ತಿರುವುದರಿಂದ ಅಪಾಯದ ಪರಿಸ್ಥಿತಿ ಮುಂದುವರಿದಿದೆ. ಹೀಗಾಗಿ ರಕ್ಷಣಾ ಕಾರ್ಯಕ್ಕೂ ತೊಡಕಾಗಿದೆ. ಭಾನುವಾರದ ವೇಳೆಗೆ ಕೇವಲ ಆರು ದೇಹಗಳನ್ನು ಹೊರತೆಗೆಯಲಾಗಿದೆ ಎಂದು ಅವರು ಹೇಳಿದ್ದಾರೆ.

ಈ ಪ್ರದೇಶದಲ್ಲಿ ಬದುಕುಳಿದಿರುವವರನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ. ಭೂಕುಸಿತದಿಂದ ಉಂಟಾಗಿರುವ ಅವಘಡಗಳು ಮತ್ತು ಬುಡಕಟ್ಟು ಜನರ ನಡುವಿನ ಘರ್ಷಣೆ ಸಹ ರಕ್ಷಣಾ ಕಾರ್ಯಕ್ಕೆ ಅಡ್ಡಿಯಾಗಿ ಪರಿಣಮಿಸಿದೆ. ದಕ್ಷಿಣ ಪೆಸಿಫಿಕ್ ದ್ವೀಪ ರಾಷ್ಟ್ರವು ನೆರವಿಗಾಗಿ ಅಂತರ ರಾಷ್ಟ್ರೀಯ ಬೆಂಬಲ ಪಡೆಯುವ ನಿಟ್ಟಿನಲ್ಲಿ ಯೋಚಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಲ್ಲು, ಮಣ್ಣುಗಳ ಅಡಿಯಲ್ಲಿ ಸುಮಾರು 20ರಿಂದ 26 ಅಡಿ ಆಳದಲ್ಲಿ ಸಿಲುಕಿರುವವರ ಹುಡುಕಾಟ ಕಷ್ಟಕರವಾಗಿದೆ. ಇದರ ಪರಿಣಾಮ ಇಡೀ ಪ್ರದೇಶದಲ್ಲಿ ದುಃಖ ಮತ್ತು ಶೋಕದ ವಾತಾವರಣ ಇದೆ ಎಂದು ಅಕ್ಟೋಪ್ರಾಕ್ ಮಾಹಿತಿ ನೀಡಿದ್ದಾರೆ.

ಈ ಪ್ರದೇಶಕ್ಕೆ ಆಹಾರ, ನೀರು ಮತ್ತು ಇತರ ಅಗತ್ಯ ಸಾಮಗ್ರಿಗಳನ್ನು ಸಾಗಿಸುವುದೂ ಕಷ್ಟಕರವಾಗಿದೆ. ತಂಬಿಟಾನಿಸ್ ಗ್ರಾಮದಲ್ಲಿ ಬುಡಕಟ್ಟು ಜನರ ನಡುವಿನ ಸಂಘರ್ಷವು ಸಾಮಗ್ರಿಗಳ ಸಾಗಾಟಕ್ಕೆ ಸಂಕಷ್ಟ ತಂದಿದೆ. ಪುಪುವಾ ನ್ಯೂಗಿನ ಸೈನಿಕರು ಬೆಂಗಾವಲು ಪಡೆಗಳಾಗಿ ಸಾಮಗ್ರಿಗಳಿಗೆ ಭದ್ರತೆ ಒದಗಿಸುತ್ತಿದ್ದಾರೆ.

ಭೂಕುಸಿತ ಸಂಭವಿಸಿದ ಪ್ರದೇಶದಲ್ಲಿ ಸುಮಾರು 4,000ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದರು. ಇವರಲ್ಲಿ ಗಾಯಗೊಂಡವರು, ಕಾಣೆಯಾದವರ ಸಂಖ್ಯೆ ನಿಖರವಾಗಿ ಗೊತ್ತಾಗಿಲ್ಲ. ಈ ಕುರಿತು ಅಂಕಿ ಅಂಶಗಳನ್ನು ಕಲೆಹಾಕಲಾಗುತ್ತಿದೆ. ಕೆಲ ಮನೆಗಳು, ಸಣ್ಣ ವ್ಯಾಪಾರ ಕೇಂದ್ರಗಳು, ಅತಿಥಿ ಗೃಹಗಳು, ಶಾಲೆ ಮತ್ತಿತರ ಕಡೆಗಳಲ್ಲಿ ವೈದ್ಯಕೀಯ ಸೌಲಭ್ಯ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


ಪಪುವಾ ನ್ಯೂಗಿನಿಯ ಪೊಗೆರಾ ಗ್ರಾಮದಲ್ಲಿ ಸಂಭವಿಸಿದ್ದ ಭೂಕುಸಿತದಲ್ಲಿ ಸಿಲುಕಿರುವವರ ರಕ್ಷಣಾ ಕಾರ್ಯದಲ್ಲಿ ಸ್ಥಳೀಯ ಜನರು ಭಾನುವಾರ ನಿರತರಾಗಿದ್ದರು —ಎಪಿ/ಪಿಟಿಐ ಚಿತ್ರ







ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗೆಲುವು ಸಾಧಿಸುತ್ತಿದ್ದಂತೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ (ಎಡ). ಕೋಲ್ಕತ್ತ ತಂಡದ ಸಹ ಮಾಲೀಕ ಶಾರೂಕ್ ಖಾನ್ ಪ್ರೇಕ್ಷಕರತ್ತ ಕೈಬೀಸಿ ಸಂಭ್ರಮಿಸಿದರು –ಪಿಟಿಐ ಚಿತ್ರ

ಪ್ರಮುಖ ಅಂಶಗಳು

1260	ಟೂರ್ನಿಯಲ್ಲಿ ದಾಖಲಾದ ಒಟ್ಟು ಸಿಕ್ಸರ್‌ಗಳು
2175	ಟೂರ್ನಿಯಲ್ಲಿ ದಾಖಲಾದ ಒಟ್ಟು ಬೌಂಡರಿಗಳು
42	ಸನ್‌ರೈಸರ್ಸ್ ತಂಡದ ಅಭಿಷೇಕ್ ಶರ್ಮಾ ಟೂರ್ನಿಯಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ ಬ್ಯಾಟರ್.
14	ಕೆಕೆಆರ್‌ನ ಫಿಲ್ ಸಾಲ್ಟ್ ಇನಿಂಗ್ಸ್‌ವೊಂದರಲ್ಲಿ ಗಳಿಸಿದ ಬೌಂಡರಿಗಳು
5	ಆರ್‌ಸಿಬಿಯ ರಜತ್ ಪಾಟೀದಾರ್, ವಿರಾಟ್ ಕೊಹ್ಲಿ ಹಾಗೂ ರಾಜಸ್ಥಾನ ರಾಯಲ್ಸ್‌ನ ಸಂಜು ಸ್ಯಾಮ್ಸನ್ ತಲಾ ಐದು ಅರ್ಧಶತಕ ಗಳಿಸಿದರು.
2	ರಾಜಸ್ಥಾನ ರಾಯಲ್ಸ್‌ನ ಜೋಸ್ ಬಟ್ಲರ್ ಈ ಟೂರ್ನಿಯಲ್ಲಿ ಅತಿ ಹೆಚ್ಚು ಶತಕ ಗಳಿಸಿದರು
416.66	ಕೋಲ್ಕತ್ತ ನೈಟ್‌ರೈಡರ್ಸ್‌ನ ರಮಣದೀಪ್ ಸಿಂಗ್ ಅತಿ ಹೆಚ್ಚು ಸ್ಟ್ರೈಕ್ ರೇಟ್ ದಾಖಲಿಸಿದ ಬ್ಯಾಟರ್
2	ಸನ್‌ರೈಸರ್ಸ್‌ನ ಭುವನೇಶ್ವರ್ ಕುಮಾರ್ ಮೇಡನ್ ಓವರ್‌ಗಳ ದಾಖಲೆ
149	ಮುಂಬೈ ಇಂಡಿಯನ್ಸ್‌ನ ಜಸ್‌ಪ್ರೀತ್ ಬೂಮ್ರಾ ಅತಿ ಹೆಚ್ಚು ಡಾಟ್‌ಬಾಲ್ ಹಾಕಿದ ಬೌಲರ್

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 113 (18.3 ಓವರುಗಳಲ್ಲಿ)

ಅಭಿಷೇಕ್ ಬಿ ಸ್ಟಾರ್ಕ್ 2 (5ಎ)
ಹೆಡ್ ಸಿ ಗುರ್ಬಾಜ್ ಬಿ ಅರೋರಾ 0 (1)
ತ್ರಿಪಾಠಿ ಸಿ ರಮಣದೀಪ್ ಬಿ ಸ್ಟಾರ್ಕ್ 9 (13ಎ, 4x1)
ಮರ್ಕರಂ ಸಿ ಸ್ಟಾರ್ಕ್ ಬಿ ರಸೆಲ್ 20 (23, 4x3)
ನಿತೀಶ್ ರೆಡ್ಡಿ ಸಿ ಗುರ್ಬಾಝ್ ಬಿ ಹರ್ಷಿತ್ 13 (10ಎ, 4x1, 6x1)
ಕ್ಲಾಸೆನ್ ಬಿ ಹರ್ಷಿತ್ 16 (17ಎ, 4x1)
ಶಾಬಾಜ್ ಸಿ ಸುನಿಲ್ ಬಿ ವರುಣ್ 8 (7ಎ, 6x1)
ಸಮದ್ ಸಿ ಗುರ್ಬಾಜ್ ಬಿ ರಸೆಲ್ 4 (4ಎ)
ಕಮಿನ್ಸ್ ಸಿ ಸ್ಟಾರ್ಕ್ ಬಿ ರಸೆಲ್ 24 (19ಎ, 4x2, 6x1)
ಉನದ್ಕತ್ ಎಲ್‌ಬಿಡಬ್ಲ್ಯು 4 (11ಎ)
ಭುವನೇಶ್ವರ್ ಔಟಾಗದೇ 0 (1ಎ)
ಇತರೆ: 13 (ಬೈ5, ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1–2 (ಅಭಿಷೇಕ್ ಶರ್ಮಾ, 0.5), 2–6 (ಟ್ರಾವಿಸ್ ಹೆಡ್, 1.6), 3–21 (ರಾಹುಲ್ ತ್ರಿಪಾಠಿ, 4.2), 4–47 (ನಿತೀಶ್ ಕುಮಾರ್ ರೆಡ್ಡಿ, 6.6), 5–62 (ಏಡನ್ ಮರ್ಕರಂ, 10.2), 6–71 (ಶಾಬಾಜ್ ಅಹ್ಮದ್, 11.5), 7–77 (ಅಬ್ದುಲ್ ಸಮದ್, 12.4), 8–90 (ಹೆನ್ರಿಚ್ ಕ್ಲಾಸೆನ್, 14.1), 9–113 (ಜಯದೇವ್ ಉನದ್ಕತ್, 17.5), 10–113 (ಪ್ಯಾಟ್ ಕಮಿನ್ಸ್, 18.3).
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3–0–14–2; ವೈಭವ್ ಅರೋರಾ 3–0–24–1; ಹರ್ಷಿತ್ ರಾಣಾ 4–1–24–2; ಸುನಿಲ್ ನಾರಾಯಣ್ 4–0–16–1; ಆಂಡ್ರೆ ರಸೆಲ್ 2.3–0–19–3; ವರುಣ್ ಚಕ್ರವರ್ತಿ 2–0–9–1.

ಕೋಲ್ಕತ್ತ ನೈಟ್ ರೈಡರ್ಸ್: 2ಕ್ಕೆ114 (10.3 ಓವರ್‌ಗಳಲ್ಲಿ)

ಗುರ್ಬಾಝ್ ಎಲ್‌ಬಿಡಬ್ಲ್ಯು ಬಿ ಶಾಬಾಜ್ 39 (32ಎ, 4x5, 6x2)
ಸುನಿಲ್ ಸಿ ಶಾಬಾಜ್ ಬಿ ಕಮಿನ್ಸ್ 6 (2ಎ, 6x1)
ವೆಂಕಟೇಶ್ ಔಟಾಗದೇ 52 (26ಎ, 4x4, 6x3)
ಶ್ರೇಯಸ್ ಔಟಾಗದೇ 6 (3ಎ, 4x1)
ಇತರೆ: 11(ಬೈ 4, ಲೆಗ್‌ಬೈ 2, ವೈಡ್ 5)
ವಿಕೆಟ್ ಪತನ: 1–11 (ಸುನಿಲ್, 1.2), 2–102 (ರಹಮಾನುಲ್ಲಾ ಗುರ್ಬಾಝ್, 8.5)
ಬೌಲಿಂಗ್: ಭುವನೇಶ್ವರ್ 2–0–25–0; ಕಮಿನ್ಸ್ 2–0–18–1; ನಟರಾಜನ್ 2–0–29–0; ಶಾಬಾಜ್ 2.3–0–22–1; ಉನದ್ಕತ್ 1–0–9–0; ಮರ್ಕರಂ 1–0–5–0
ಪಂದ್ಯದ ಆಟಗಾರ: ಮಿಚೆಲ್ ಸ್ಟಾರ್ಕ್
ಸರಣಿಯ ಆಟಗಾರ: ಸುನಿಲ್ ನಾರಾಯಣ್

ಫಲಿತಾಂಶ: ಕೋಲ್ಕತ್ತ ತಂಡಕ್ಕೆ 8 ವಿಕೆಟ್‌ಗಳ ಜಯ, ಪ್ರಶಸ್ತಿ

ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು

ಆಟಗಾರ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ವಿರಾಟ್ ಕೊಹ್ಲಿ (ಆರ್‌ಸಿಬಿ)	15	741	113*	1	5
ಋತುರಾಜ್ ಗಾಯಕವಾಡ(ಸಿಎಸ್‌ಕೆ)	14	583	108*	1	4
ರಿಯಾನ್ ಪರಾಗ್ (ಆರ್‌ಆರ್)	16	573	84*	0	4
ಟ್ರಾವಿಸ್ ಹೆಡ್ (ಎಸ್‌ಆರ್‌ಎಚ್)	15	567	102	1	4
ಸಂಜು ಸ್ಯಾಮ್ಸನ್ (ಆರ್‌ಆರ್)	16	527	86	0	5

ಮಿಚೆಲ್ ಸ್ಟಾರ್ಕ್ ಮಿಂಚಿನ ದಾಳಿ • ವೆಂಕಟೇಶ್ ಅಯ್ಯರ್ ಅರ್ಧಶತಕ • ಮಂಕಾದ ಸನ್‌ರೈಸರ್ಸ್ ಹೈದರಾಬಾದ್

ಕೋಲ್ಕತ್ತಕ್ಕೆ ಮೂರನೇ ಕಿರೀಟ

ಪ್ರಜಾವಾಣಿ ವಾರ್ತೆ

ಆರೆಂಜ್ ಕ್ಯಾಪ್
ವಿರಾಟ್ ಕೊಹ್ಲಿ (741 ರನ್)
ರಾಯಲ್ ಚಾಲೆಂಜರ್ಸ್ ಬೆಂಗಳೂರು



ಪರ್ಪಲ್ ಕ್ಯಾಪ್
ಹರ್ಷಲ್ ಪಟೇಲ್ (24 ವಿಕೆಟ್)
ಪಂಜಾಬ್ ಕಿಂಗ್ಸ್



ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ಪಂದ್ಯ	ವಿಕೆಟ್
ಹರ್ಷಲ್ ಪಟೇಲ್(ಪಂಜಾಬ್)	14	24
ವರುಣ ಚಕ್ರವರ್ತಿ (ಕೋಲ್ಕತ್ತ)	15	21
ಜಸ್‌ಪ್ರೀತ್ ಬೂಮ್ರಾ (ಮುಂಬೈ)	13	20
ಆಂಡ್ರೆ ರಸೆಲ್ (ಕೋಲ್ಕತ್ತ)	15	19
ಹರ್ಷಿತ್ ರಾಣಾ(ಕೋಲ್ಕತ್ತ)	13	19

ಚೆನ್ನೈ: ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಗಳಿಸಿ ಎಲ್ಲರ ಹುಬ್ಬೇರುವಂತೆ ಮಾಡಿದ್ದ ವೇಗಿ ಮಿಚೆಲ್ ಸ್ಟಾರ್ಕ್ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಪ್ರಶಸ್ತಿ ಗೆಲುವಿನ ಕಾಣಿಕೆ ನೀಡಿದರು.

ಚೆಪಾಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಆಸ್ಟ್ರೇಲಿಯಾದ ಸ್ಟಾರ್ಕ್ (3–0–14–2) ಕಾರಣರಾದರು. ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡವು 8 ವಿಕೆಟ್‌ಗಳಿಂದ ಗೆದ್ದಿತು. 114 ರನ್‌ಗಳ ಗುರಿಯನ್ನು ಕೋಲ್ಕತ್ತ ತಂಡವು 57 ಎಸೆತಗಳು ಬಾಕಿಯಿರುವಂತೆಯೇ 2 ವಿಕೆಟ್ ಕಳೆದುಕೊಂಡು ಮುಟ್ಟಿತು. ವೆಂಕಟೇಶ್ ಅಯ್ಯರ್ (ಅಜೇಯ 52; 26ಎ) ಅರ್ಧಶತಕ ಗಳಿಸಿದರು.


ಐಪಿಎಲ್ ಇತಿಹಾಸದಲ್ಲಿ ಕೋಲ್ಕತ್ತ ತಂಡವು ಗೆದ್ದ ಮೂರನೇ ಟ್ರೋಫಿ ಇದಾಗಿದೆ. ಈ ಹಿಂದೆ ಎರಡು ಸಲ ಪ್ರಶಸ್ತಿ ಜಯಿಸಿದಾಗ ಗೌತಮ್ ಗಂಭೀರ್ ನಾಯಕರಾಗಿದ್ದರು. ಇದೀಗ ಅವರು ತಂಡದ ಮೆಂಟರ್ ಆಗಿದ್ದಾರೆ. ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ತಂಡವು ಈ ಸಾಧನೆ ಮಾಡಿದೆ.

ಐಪಿಎಲ್‌ನ ಅತ್ಯಂತ ದೊಡ್ಡ ಮೊತ್ತ (287 ರನ್) ಗಳಿಸಿದ ದಾಖಲೆಯನ್ನೂ ಈ ಟೂರ್ನಿಯಲ್ಲಿ ಸನ್‌ರೈಸರ್ಸ್ ಮಾಡಿತ್ತು. ನಾಲ್ಕು ಬಾರಿ 250ಕ್ಕೂ ಹೆಚ್ಚಿನ ರನ್‌ಗಳ ಮೊತ್ತವನ್ನೂ ಗಳಿಸಿತ್ತು. ಆದರೆ ಈ ಪಂದ್ಯದಲ್ಲಿ 18.3 ಓವರ್‌ಗಳಲ್ಲಿ 113 ರನ್ ಗಳಿಸಿತು. ಟೂರ್ನಿಯಲ್ಲಿಯೇ ತಂಡವೊಂದು ಗಳಿಸಿದ ಎರಡನೇ ಅತಿ ಕಡಿಮೆ ಮೊತ್ತ ಇದಾಯಿತು. ಸನ್‌ರೈಸರ್ಸ್ ಇನಿಂಗ್ಸ್‌ನಲ್ಲಿ ಕೇವಲ 3 ಸಿಕ್ಸರ್‌ಗಳು ದಾಖಲಾದವು.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಕಮಿನ್ಸ್ ಯೋಜನೆಯನ್ನು ಅವರ ಸ್ನೇಹಿತ ಸ್ಟಾರ್ಕ್ ಬುಡಮೇಲು ಮಾಡಿದರು. ಮೊದಲ ಓವರ್‌ನಲ್ಲಿಯೇ ಸನ್‌ರೈಸರ್ಸ್‌ಗೆ ಆಘಾತ ನೀಡಿದರು. ಅವರು ಹಾಕಿದ ಐದನೇ ಎಸೆತವನ್ನು ಮುಂದಡಿ ಇಟ್ಟು ಪಂಚ್ ಮಾಡಲು ಪ್ರಯತ್ನಿಸಿದ ಎಡಗೈ ಬ್ಯಾಟರ್ ಅಭಿಷೇಕ್ ಕಣ್ಣು ಮಿಟುಕಿಸುವುದರಲ್ಲಿ ಕ್ಲೀನ್‌ಬೌಲ್ಡ್ ಆದರು.

ಎರಡನೇ ಓವರ್‌ನಲ್ಲಿ ಬಲಗೈ ವೇಗಿ ವೈಭವ್ ಅರೋರಾ ಕೂಡ ಸ್ಟಾರ್ಕ್ ಅವರ ಗುಡ್‌ಲೆಂಗ್ತ್ ತಂತ್ರವನ್ನೇ ಅನುಸರಿಸಿ ಯಶಸ್ವಿಯಾದರು. ಅವರ ಎಸೆತವನ್ನು ಹೊಡೆಯುವ ಯತ್ನದಲ್ಲಿ ಟ್ರಾವಿಸ್ ಹೆಡ್ ವಿಕೆಟ್‌ಕೀಪರ್ ಗುರ್ಬಾಜ್‌ಗೆ ಕ್ಯಾಚಿತ್ತರು. ಐದನೇ ಓವರ್‌ನಲ್ಲಿ ರಾಹುಲ್ ತ್ರಿಪಾಠಿಗೂ ಡಗ್‌ಔಟ್ ದಾರಿ ತೋರಿಸಿದ ಸ್ಟಾರ್ಕ್, ಸನ್‌ರೈಸರ್ಸ್ 'ಪವರ್‌ಪ್ಲೇ'ಗೆ ಕಡಿವಾಣ ಹಾಕಿದರು. ಇದರ ನಂತರವೂ ಉಳಿದ ಬೌಲರ್‌ಗಳು ಬಿಗಿಪಟ್ಟು ಹಾಕಿದರು. ಇದರಿಂದಾಗಿ ತಂಡವು 90 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿತು. ಆ್ಯಂಡ್ರೆ ರಸೆಲ್ 3, ಹರ್ಷಿತ್ ರಾಣಾ 2 ಹಾಗೂ ಸುನಿಲ್ ನಾರಾಯಣ್ ಮತ್ತು ವರುಣ ಚಕ್ರವರ್ತಿ ತಲಾ ಒಂದು ವಿಕೆಟ್ ಗಳಿಸಿದರು. ಸನ್‌ರೈಸರ್ಸ್ ತಂಡದ ಏಡನ್ ಮರ್ಕರಂ (20; 23ಎ) ಹಾಗೂ ಪ್ಯಾಟ್ ಕಮಿನ್ಸ್ (24; 19ಎ) ಅವರಿಬ್ಬರ ಆಟದಿಂದಾಗಿ ತಂಡದ ಮೊತ್ತವು 100ರ ಗಡಿ ದಾಟುವಂತಾಯಿತು.

ಏಕಪಕ್ಷೀಯವಾದ ಪಂದ್ಯದಲ್ಲಿ ಕೋಲ್ಕತ್ತ ತಂಡವು ಕೇವಲ 10.3 ಓವರ್‌ಗಳಲ್ಲಿ ಗುರಿ ಮುಟ್ಟಿತು. ಮೈದಾನದ ನಡುವೆ ಸಂಭ್ರಮಿಸುತ್ತಿದ್ದ ತಮ್ಮ ತಂಡದ ಆಟಗಾರರನ್ನು ಕೋಲ್ಕತ್ತ ತಂಡದ ಸಹ ಮಾಲೀಕ, ಬಾಲಿವುಡ್ ತಾರೆ ಶಾರೂಕ್ ಖಾನ್, ಕೋಚ್ ಚಂದ್ರಕಾಂತ್ ಪಂಡಿತ್ ಹಾಗೂ ಗಂಭೀರ್ ಅಭಿನಂದಿಸಿದರು.



ಗೆಲುವಿನ ಸಂಭ್ರಮದಲ್ಲಿ ಕೋಲ್ಕತ್ತ ತಂಡದ ವೆಂಕಟೇಶ್ ಅಯ್ಯರ್, ಮಿಚೆಲ್ ಸ್ಟಾರ್ಕ್ ಮತ್ತು ನಾಯಕ ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆ

ಎಫ್‌ಪಿಐ: ₹22,000 ಕೋಟಿ ಹಿಂತೆಗೆತ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆಯಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮೇ ತಿಂಗಳ ಆರಂಭದಿಂದ 24ರ ವರೆಗೆ ಭಾರತದ ಷೇರು ಮಾರುಕಟ್ಟೆಗಳಿಂದ ₹22,047 ಕೋಟಿ ಬಂಡವಾಳವನ್ನು ಹಿಂತೆಗೆದುಕೊಂಡಿದ್ದಾರೆ.

ಚೀನಾದ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯುತ್ತಿರುವುದು ಕೂಡ ಬಂಡವಾಳ ಹಿಂಪಡೆಯಲು ಕಾರಣವಾಗಿದೆ.

ಫೆಬ್ರುವರಿಯಲ್ಲಿ ₹1,539 ಕೋಟಿ ಹಾಗೂ ಮಾರ್ಚ್‌ನಲ್ಲಿ ₹35,098 ಕೋಟಿ ಹೂಡಿಕೆ ಮಾಡಿದ್ದರು.

ಆದರೆ, ಏಪ್ರಿಲ್‌ನಲ್ಲಿ ಭಾರತವು ಮಾರಿಷಸ್ ಜೊತೆಗಿನ ತೆರಿಗೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೆಲವು ನಿಯಮಾವಳಿಗಳಲ್ಲಿ ಬದಲಾವಣೆ ತಂದಿತು. ಅಲ್ಲದೆ, ಅಮೆರಿಕದ ಬಾಂಡ್ ಗಳಿಕೆಯೂ ಇಳಿಕೆ ಕಂಡಿತ್ತು. ಹಾಗಾಗಿ, ಈ ತಿಂಗಳಿನಲ್ಲಿ ₹8,700 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು.

ಚುನಾವಣಾ ಫಲಿತಾಂಶದ ಬಗ್ಗೆ ವಿದೇಶಿ ಹೂಡಿಕೆದಾರರಲ್ಲಿ ಸ್ಪಷ್ಟತೆ ಮೂಡಿದರೆ ದೇಶೀಯ ಮಾರುಕಟ್ಟೆಗಳಲ್ಲಿ ಷೇರುಗಳನ್ನು ಖರೀದಿಸುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಚುನಾವಣಾ ಫಲಿತಾಂಶ ಹೊರಬೀಳುವುದಕ್ಕೂ ಮೊದಲೇ ವಿದೇಶಿ ಬಂಡವಾಳ ಹೂಡಿಕೆ ಪ್ರಮಾಣವು ಏರಿಕೆಯಾಗಬಹುದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

'ಚೀನಾ ಮಾರುಕಟ್ಟೆಗಳು ಏರಿಕೆ ಕಂಡಿದ್ದರಿಂದ ವಿದೇಶಿ ಹೂಡಿಕೆದಾರರು ಭಾರತದ ಮಾರುಕಟ್ಟೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಶಾಂಘೈ ಮಾರುಕಟ್ಟೆ ಮೂಲಕ ವಿದೇಶಿ ಬಂಡವಾಳ ಹೂಡಿಕೆಗೆ ನಿರ್ಬಂಧಗಳಿವೆ. ಆದರೆ, ಹಾಂಗ್‌ಕಾಂಗ್ ಮಾರುಕಟ್ಟೆ ಮೂಲಕ ಹೂಡಿಕೆಗೆ ಅವಕಾಶವಿದೆ. ಕಳೆದ ತಿಂಗಳು ಹಾಂಗ್‌ಕಾಂಗ್‌ನ ಹ್ಯಾಂಗ್ ಸೆಂಗ್ ಸೂಚ್ಯಂಕ ಶೇ7.66ರಷ್ಟು ಏರಿಕೆ ಕಂಡಿದೆ' ಎಂದು ಹೇಳಿದ್ದಾರೆ.

'ಚುನಾವಣಾ ಫಲಿತಾಂಶದ ಬಗ್ಗೆ ಹೂಡಿಕೆದಾರರಲ್ಲಿ ಸ್ಪಷ್ಟತೆ ಇಲ್ಲ. ಹಾಗಾಗಿ, ಫಲಿತಾಂಶಕ್ಕೂ ಮುನ್ನವೇ ಭಾರತದ ಮಾರುಕಟ್ಟೆಗಳಲ್ಲಿ ಹೂಡಿಕೆಗೆ ಅವರು ಹಿಂಜರಿಯುತ್ತಿದ್ದಾರೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ವ್ಯವಸ್ಥಾಪಕ (ಸಂಶೋಧನೆ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಬಾಂಡ್‌ಗಳತ್ತ ಹೂಡಿಕೆದಾರರ ಚಿತ್ತ

ವಿದೇಶಿ ಹೂಡಿಕೆದಾರರು ಭಾರತದ ಸಾಲಪತ್ರ ಮಾರುಕಟ್ಟೆಯಲ್ಲಿ ತಮ್ಮ ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸುತ್ತಿದ್ದಾರೆ.

ಜನವರಿಯಲ್ಲಿ ₹19,836 ಕೋಟಿ, ಫೆಬ್ರುವರಿಯಲ್ಲಿ ₹22,419 ಕೋಟಿ ಹಾಗೂ ಮಾರ್ಚ್‌ನಲ್ಲಿ ₹13,602 ಕೋಟಿ ಹಾಗೂ ಏಪ್ರಿಲ್‌ನಲ್ಲಿ ₹2,009 ಕೋಟಿ ಹೂಡಿಕೆ ಮಾಡಿದ್ದಾರೆ.

ಭಾರತದ ಬಾಂಡ್ ಅನ್ನು ಜೆ.ಪಿ. ಮಾರ್ಗನ್‌ನ ಗ್ಲೋಬಲ್ ಬಾಂಡ್ ಇಂಡೆಕ್ಸ್‌ಗೆ ಸೇರಿಸುತ್ತಿರುವುದರಿಂದ ಭಾರತದ ಬಾಂಡ್‌ಗಳತ್ತ ವಿದೇಶಿ ಹೂಡಿಕೆದಾರರು ಚಿತ್ತ ಹರಿಸಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಿಡಿಪಿ: ಶೇ 6.1ರಿಂದ ಶೇ 6.7ರಷ್ಟು ಪ್ರಗತಿ ನಿರೀಕ್ಷೆ



ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿಯು ಶೇ 6.1ರಿಂದ ಶೇ 6.7ರಷ್ಟು ಪ್ರಗತಿ ಕಾಣಲಿದೆ ಎಂದು ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಇದು ಡಿಸೆಂಬರ್ ತ್ರೈಮಾಸಿಕದಲ್ಲಿ ದಾಖಲಾಗಿದ್ದಕ್ಕಿಂತಲೂ ಕಡಿಮೆಯಿದೆ.

2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7.6ರಿಂದ ಶೇ 7.8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದ್ದಾರೆ.

ಜಿಡಿಪಿಯು ಜೂನ್ ತ್ರೈಮಾಸಿಕದಲ್ಲಿ ಶೇ 8.2ರಷ್ಟು, ಸೆಪ್ಟೆಂಬರ್‌ನಲ್ಲಿ ಶೇ 8.1 ಹಾಗೂ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 8.4ರಷ್ಟು ದಾಖಲಾಗಿದೆ.

'ಕೊನೆಯ ತ್ರೈಮಾಸಿಕದಲ್ಲಿ ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಉತ್ತಮಗೊಂಡಿವೆ. ನಿರ್ಮಾಣ ಮತ್ತು ಹೂಡಿಕೆ ವಲಯದ ಬೆಳವಣಿಗೆಯೂ ಸದೃಢವಾಗಿದೆ. ಆದರೆ, ಕೃಷಿ ವಲಯದ ಚಟುವಟಿಕೆಗಳು ಕುಗ್ಗಿವೆ. ಹಾಗಾಗಿ, ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 6.1ರಷ್ಟು ದಾಖಲಾಗಲಿದೆ. ಪೂರ್ಣ ಹಣಕಾಸು ವರ್ಷದಲ್ಲಿ ಶೇ 7.6ರಷ್ಟು ಪ್ರಗತಿ ಕಾಣಲಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

'ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7.8ರಷ್ಟು ಹಾಗೂ ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7.8ರಷ್ಟು ಪ್ರಗತಿ ಕಾಣಲಿದೆಯೆಂದು ಐಎಂಎಫ್ ಅಂದಾಜಿಸಿದೆ' ಎಂದು ಇವೈ ಇಂಡಿಯಾದ ಮುಖ್ಯ ನೀತಿ ಸಲಹೆಗಾರ ಡಿ.ಕೆ. ಶ್ರೀವಾಸ್ತವ ಹೇಳಿದ್ದಾರೆ.

ದೇಶೀಯ ಕ್ರೆಡಿಟ್ ರೇಟಿಂಗ್ ಏಜೆನ್ಸಿಯಾದ ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್, ಕೊನೆಯ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 6.2ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

ಕಳೆದ ತಿಂಗಳಿನಲ್ಲಿ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು 2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಆರ್ಥಿಕತೆಯು ಶೇ 7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿದೆ.

9 ಕಂಪನಿಗಳ ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,404 ಅಂಶ ಏರಿಕೆಯಾಗಿದೆ.

ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳ ಪೈಕಿ ಐಟಿಸಿ ಹೊರತುಪಡಿಸಿ ಉಳಿದ ಕಂಪನಿಗಳ ಮಾರುಕಟ್ಟೆ ಮೌಲ್ಯವು (ಎಂ–ಕ್ಯಾಪ್) ₹1.85 ಲಕ್ಷ ಕೋಟಿ ಏರಿಕೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯಕ್ಕೆ ₹61,398 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹20.02 ಲಕ್ಷ ಕೋಟಿಗೆ ತಲುಪಿದೆ. ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹38,966 ಕೋಟಿ ಸೇರ್ಪಡೆಯಾಗಿದೆ.

ಭಾರತೀಯ ಜೀವ ವಿಮಾ ನಿಗಮದ ಮಾರುಕಟ್ಟೆ ಮೌಲ್ಯಕ್ಕೆ ₹35,135 ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಎಂ–ಕ್ಯಾಪ್ ₹6.51 ಲಕ್ಷ ಕೋಟಿಗೆ ಮುಟ್ಟಿದೆ.

ಭಾರ್ತಿ ಏರ್‌ಟೆಲ್ ₹22,921 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹9,985 ಕೋಟಿ, ಇನ್ಫೊಸಿಸ್ ₹8,821 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹6,916 ಕೋಟಿ, ಐಸಿಐಸಿಐ ಬ್ಯಾಂಕ್ ₹903 ಕೋಟಿ, ಟಿಸಿಎಸ್ ಮಾರುಕಟ್ಟೆ ಮೌಲ್ಯಕ್ಕೆ ₹271 ಕೋಟಿ ಸೇರ್ಪಡೆಯಾಗಿದೆ.

ಐಟಿಸಿ ಕಂಪನಿಯ ಎಂ–ಕ್ಯಾಪ್ ₹436 ಕೋಟಿ ಕರಗಿದೆ.

ಅತಿಯಾದ ಸಾಲ; ಬದುಕಿಗೆ ಶೂಲ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸಾಲ ಮಾಡಿ ಸಂಪತ್ತು ಸೃಷ್ಟಿಸಲು ಮುಂದಾದರೆ ಸಮಸ್ಯೆಯಿಲ್ಲ. ಆದರೆ, ಸಾಲ ಮಾಡಿ ತುಪ್ಪ ತಿನ್ನಲು ಹೋದರೆ ಬೆಪ್ಪರಾಗೋದು ಖಚಿತ.

ಹೌದು. ಸಾಲ ಎರಡು ಅಲಗಿನ ಕತ್ತಿ ಇದ್ದಂತೆ. ಎಷ್ಟು ಎಚ್ಚರಿಕೆಯಿಂದ ಅದನ್ನು ಬಳಸುತ್ತೇವೆಯೋ ಅಷ್ಟು ಅನುಕೂಲವಾಗುತ್ತದೆ. ಎಚ್ಚರ ತಪ್ಪಿದರೆ ಅದೇ ಶೂಲವಾಗುತ್ತದೆ. ಬನ್ನಿ, ಸಾಲದ ಸುಳಿಗೆ ಸಿಲುಕಲು ಕಾರಣವೇನು? ಅದರಿಂದ ಪಾರಾಗಲು ಏನು ಮಾಡಬೇಕು? ಸಾಲ ನಿರ್ವಹಣೆಯಲ್ಲಿ ಮರುಪಾವತಿ ಸಾಮರ್ಥ್ಯ ಎಷ್ಟು ಮುಖ್ಯವಾಗುತ್ತದೆ ಎನ್ನುವ ಬಗ್ಗೆ ವಿವರವಾಗಿ ತಿಳಿಯೋಣ.

ಸಾಲದ ಸುಳಿಗೆ ಸಿಲುಕಲು ಕಾರಣವೇನು?: 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎನ್ನುವುದು ಹಿರಿಯರು ಹೇಳಿದ ಮಾತು. ಆದಾಯ ಎಷ್ಟಿದೆಯೋ ಅದನ್ನು ಮೀರಿ ಜೀವನ ನಡೆಸಬಾರದು ಎನ್ನುವುದು ಈ ಮಾತಿನ ಸಂದೇಶ. ಆದರೆ, ಬಹುಪಾಲು ಜನರು ಮೈ ತುಂಬಾ ಸಾಲ ಮಾಡಿಕೊಂಡಿರುತ್ತಾರೆ. ತಮಗೆ ಎಷ್ಟು ಸಾಲ ಸಿಗುತ್ತದೆ ಎನ್ನುವುದರ ಅಂದಾಜಿನ ಮೇಲೆ ಹಣಕಾಸಿನ ತೀರ್ಮಾನಗಳನ್ನು ಮಾಡುತ್ತಾರೆ.

ವಾರ್ಷಿಕ ಆದಾಯದ ಮೂರ್ನಾಲ್ಕು ಪಟ್ಟು ಬೆಲೆ ಬಾಳುವ ಕಾರು ಖರೀದಿ ಮಾಡುವುದು, ಸಾಲ ಮಾಡಿ ವಿದೇಶ ಪ್ರವಾಸಕ್ಕೆ ತೆರಳುವುದು, ಇಎಂಐ ಮೂಲಕ ಬಟ್ಟೆ ಖರೀದಿಸುವುದು ಹೀಗೆ ಅಳತೆ ಅಂದಾಜಿಲ್ಲದೆ ಹಣ ಪೋಲು ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಅವರೇ ಅಧಃಪತನಕ್ಕೆ ಕೊಂಡೊಯ್ಯುತ್ತಾರೆ.

ತೋರಿಕೆಯ ಶ್ರೀಮಂತಿಕೆ ಅಥವಾ ಮೋಜಿಗಾಗಿ ಅನೇಕರು ಸಾಲದ ಸುಳಿಯಲ್ಲಿ ಸಿಲುಕುತ್ತಾರೆ. ಕೆಲವರಂತೂ ಹತ್ತಾರು ಕ್ರೆಡಿಟ್ ಕಾರ್ಡ್ ಇಟ್ಟುಕೊಂಡು ಒಂದು ಸಾಲ ತೀರಿಸಲು ಮತ್ತೊಂದು, ಆ ಸಾಲ ತೀರಿಸಲು ಇನ್ನೊಂದು ಸಾಲ ಎಂಬಂತೆ ಮುಂದುವರಿದು ಸಾಲದ ವಿಷವರ್ತುಲದಲ್ಲೇ ಜೀವನ ಸಾಗಿಸುತ್ತಾರೆ.

ಕ್ರೆಡಿಟ್ ಕಾರ್ಡ್ ಸಾಲಕ್ಕೆ ಶೇ 45ರಿಂದ ಶೇ 50ರಷ್ಟು ಬಡ್ಡಿ ಇದೆ ಎಂಬುದನ್ನೂ ಮರೆತು ಮುಂದುವರಿಯುತ್ತಾರೆ. ವಾಸ್ತವದಲ್ಲಿ ಹೀಗೆ ಮಾಡಿದಾಗ ಯಾವುದೇ ವ್ಯಕ್ತಿ ಆರ್ಥಿಕವಾಗಿ ಸಬಲವಾಗಲು ಸಾಧ್ಯವೇ ಇಲ್ಲ. ಸಾಲದ ಚಕ್ರದಡಿ ವ್ಯಕ್ತಿ ಸಿಲುಕುವುದರಿಂದ ಮನೆ ಖರೀದಿ, ಮಕ್ಕಳ ವಿದ್ಯಾಭ್ಯಾಸ, ನಿವೃತ್ತಿ ಜೀವನಕ್ಕೆ ಉಳಿತಾಯದಂತಹ ಮಹತ್ವದ ಹಣಕಾಸಿನ ಗುರಿಗಳನ್ನು ತಲುಪಲು ಆತನಿಗೆ ಸಾಧ್ಯವಾಗುವುದಿಲ್ಲ.

ಹಳೆ ಸಾಲ ತೀರಿಸಲು ಹೊಸ ಸಾಲ ಮಾಡುವುದು, ಸಂಬಂಧಿಕರು, ಸ್ನೇಹಿತರು ಮತ್ತು ಸಹಪಾಠಿಗಳಿಂದ ಸಾಲ ಪಡೆಯುವುದು, ಸಾಲ ತೀರಿಸಲಾಗದೆ ಸಂಬಂಧಗಳನ್ನು ಕೆಡಿಸಿಕೊಳ್ಳುವುದು, ಸಾಮಾಜಿಕ ಬಹಿಷ್ಕಾರದಂತಹ ಸನ್ನಿವೇಶ ಎದುರಿಸುವುದು, ಕುಟುಂಬದಿಂದ ದೂರವಾಗುವುದು ಹೀಗೆ ಸಾಲದ ಅತಿಯಾದ ಹೊರೆಯಿಂದ ಉಂಟಾಗುವ ತೊಂದರೆಗಳು ಒಂದೆರಡಲ್ಲ.

ಈ ಲೇಖನ ಓದುತ್ತಿರುವ ಹಲವರು ಈಗಾಗಲೇ ಇಂತಹ ಸಮಸ್ಯೆಗೆ ಸಿಲುಕಿರಬಹುದು. ಒಂದೊಮ್ಮೆ ಸಿಲುಕಿದ್ದರೆ ನಿಮ್ಮ ಹಣಕಾಸಿನ ತೀರ್ಮಾನಗಳನ್ನು ನೀವೇ ಪ್ರಶ್ನೆ ಮಾಡಿಕೊಳ್ಳಬೇಕು. ನಿಮ್ಮ ನಿರ್ಧಾರಗಳನ್ನು ಪುನರ್‌ಮನನ ಮಾಡಿ ಸಾಲದ ಸುಳಿಯಿಂದ ಪಾರಾಗುವ ದಾರಿಗಳನ್ನು ಹುಡುಕಬೇಕು.

ಸಾಲದ ಸುಳಿಯಿಂದ ಪಾರಾಗುವುದು ಹೇಗೆ?: ಹಣಕಾಸು ನಿರ್ವಹಣೆಯಲ್ಲಿ ಎಡವಿ ಸಾಲದ ಸುಳಿಗೆ ಸಿಲುಕುವಂತಹ ತಪ್ಪುಗಳು ಕೆಲವೊಮ್ಮೆ ನಡೆದು ಹೋಗಿರುತ್ತವೆ. ಆ ತಪ್ಪುಗಳನ್ನು ಅರಿತು ಸರಿದಾರಿಯಲ್ಲಿ ಮುನ್ನಡೆಯುವ ಪ್ರಯತ್ನ ಮಾಡಬೇಕು. ಒಂದೊಮ್ಮೆ ಸಾಲದ ಸುಳಿಗೆ ಸಿಲುಕಿ ಒದ್ದಾಡುತ್ತಿದ್ದರೆ ಮೊದಲು ಆ ವಿಚಾರವನ್ನು ನಿಮ್ಮ ಕುಟುಂಬ ಮತ್ತು ಪ್ರೀತಿಪಾತ್ರರ ಗಮನಕ್ಕೆ ತನ್ನಿ. ಎಷ್ಟು ಸಾಲ ಮಾಡಿದ್ದೀರಿ ಎನ್ನುವ ಸಂಪೂರ್ಣ ವಿವರವನ್ನು ನೀಡಿ. ಮತ್ತೆ ಸಾಲ ಮಾಡಿ ಸಂಕಷ್ಟಕ್ಕೆ ಸಿಲುಕದಂತೆ ಎಚ್ಚರವಹಿಸುತ್ತೇನೆ ಎಂದು ಮಾತು ಕೊಡಿ.

ಮಾಡಿರುವ ಎಲ್ಲ ಸಾಲಗಳ ಪಟ್ಟಿ ಮಾಡಿಕೊಂಡು ಸಾಲಕ್ಕೆ ಪಾವತಿಸುತ್ತಿರುವ ಬಡ್ಡಿ ಎಷ್ಟು ಎನ್ನುವುದರ ಲೆಕ್ಕಾಚಾರ ಮಾಡಿ. ಯಾವ ಸಾಲದ ಬಡ್ಡಿ ಜಾಸ್ತಿ ಇದೆಯೋ ಅದನ್ನು ಮೊದಲು ತೀರಿಸಲು ಪ್ರಯತ್ನಿಸಿ. ನಿಮ್ಮ ಕುಟುಂಬದವರ ಬಳಿ ಇರುವ ಉಳಿತಾಯದ ಹಣವನ್ನು ಸಾಲ ಮರುಪಾವತಿಗೆ ಕೊಡುವಂತೆ ಕೋರಿಕೊಳ್ಳಿ. ನಿಮ್ಮ ಬಳಿ ಕೂಡಿಟ್ಟ ಮೊತ್ತವಿದ್ದರೆ ಅದನ್ನು ಸಾಲ ತೀರಿಸಲು ಬಳಸಿ. ಸಾಲವನ್ನು ಬೇಗ ತೀರಿಸಲು ಈಗಾಗಲೇ ಇರುವ ಉದ್ಯೋಗದ ಜೊತೆಗೆ ಪಾರ್ಟ್ ಟೈಂ ಉದ್ಯೋಗ ಮಾಡಬಹುದೇ ನೋಡಿ.

ಕಾರು ಇದ್ದರೆ ಅದನ್ನು ಮಾರಾಟ ಮಾಡಿ ಒಂದಷ್ಟು ಸಾಲದ ಹೊರೆಯನ್ನು ಇಳಿಸಿಕೊಳ್ಳಿ. ಗೃಹ ಸಾಲವಿದ್ದರೆ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡಿ ಸಾಲದ ಅವಧಿಯನ್ನು ತಾತ್ಕಾಲಿಕವಾಗಿ ಹೆಚ್ಚಿಸಿಕೊಂಡು ಮಾಸಿಕ ಕಂತಿನ ಮೊತ್ತವನ್ನು ತಗ್ಗಿಸಿಕೊಳ್ಳಿ. ಕೈಸಾಲಗಳಿದ್ದರೆ ಕೊಟ್ಟ ವ್ಯಕ್ತಿಯ ಜೊತೆ ಮಾತನಾಡಿ ಮರುಪಾವತಿಗೆ ಹೆಚ್ಚಿನ ಸಮಯ ಕೇಳಿ. ಸಾಧ್ಯವಾದರೆ ಈಗಿರುವ ಸಾಲದ ಬಡ್ಡಿದರಕ್ಕಿಂತ ಕಡಿಮೆ ಬಡ್ಡಿದರಕ್ಕೆ ಸಾಲ ಸಿಗಬಹುದೇ ನೋಡಿ. ಕಡಿಮೆ ಬಡ್ಡಿದರದ ಸಾಲದಿಂದ ಹೆಚ್ಚಿನ ಬಡ್ಡಿದರದ ಸಾಲ ತೀರಿಸಿಕೊಂಡರೆ ಅನುಕೂಲವಾಗುತ್ತದೆ. ಈ ಕೆಲ ಅಂಶಗಳು ಸಾಲದ ಸುಳಿಯಿಂದ ಪಾರಾಗಲು ನಿಮ್ಮ ನೆರವಿಗೆ ಬರುತ್ತವೆ.

ಆದಾಯಕ್ಕೆ ತಕ್ಕಂತೆ ಎಷ್ಟು ಸಾಲ ಮಾಡಬೇಕು?: ನಮ್ಮ ಎಲ್ಲಾ ಸಾಲಗಳ ಒಟ್ಟು ಮಿತಿ ನಮ್ಮ ಮಾಸಿಕ ನಿವ್ವಳ ಆದಾಯದ ಶೇ 25ರಿಂದ ಶೇ 35ರ ಒಳಗೆ ಇರಬೇಕು. ಆಗ ಸಾಲ ನಿರ್ವಹಣೆಯು ಸುಲಭವಾಗುತ್ತದೆ. ಉದಾಹರಣೆಗೆ ಪ್ರತಿ ತಿಂಗಳು ಕೈ ಸಿಗುವ ಸಂಬಳ ₹1 ಲಕ್ಷ ಎಂದುಕೊಳ್ಳಿ. ಪ್ರತಿ ತಿಂಗಳು ಉಳಿತಾಯಕ್ಕಾಗಿ ಮೀಸಲಿಡುವ ಮೊತ್ತ ₹25 ಸಾವಿರವಾಗಿದ್ದು, ಮಾಸಿಕ ವೆಚ್ಚ ₹35 ಸಾವಿರ ಎಂದುಕೊಳ್ಳಿ. ₹10 ಸಾವಿರ ತುರ್ತು ಅಗತ್ಯಗಳಿಗೆ ಮೀಸಲಿಟ್ಟುಕೊಂಡಿದ್ದೀರಿ ಎಂದು ಭಾವಿಸಿ. ಈ ಲೆಕ್ಕಾಚಾರದಂತೆ ನಿಮ್ಮ ಸಾಲದ ಗರಿಷ್ಠ ಮಾಸಿಕ ಕಂತು ₹30 ಸಾವಿರ ಮೀರಬಾರದು. ನೆನಪಿರಲಿ, ಸಾಲ ಕೆಟ್ಟದ್ದಲ್ಲ. ವಿವೇಚನೆ ಇಲ್ಲದೆ, ವಿವೇಕ ಮರೆತು ಸಾಲ ಮಾಡಬಾರದು ಅಷ್ಟೇ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆಯಲ್ಲಿ ಗೂಳಿ ಓಟ

ಮೇ 24ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಪುಟಿದೆದ್ದಿವೆ. 75,410 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.90ರಷ್ಟು ಜಿಗಿದಿದೆ. 22,957 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 2.02ರಷ್ಟು ಗಳಿಕೆ ಕಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಹೆಚ್ಚಳ, ರಿಟೇಲ್ ಹೂಡಿಕೆದಾರರಿಂದ ಖರೀದಿ ಭರಾಟೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ಸಕಾರಾತ್ಮಕ ಸಾಧನೆ, ಎನ್‌ಡಿಎ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬಹುದು ಎಂಬ ವಿಶ್ವಾಸ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಎಲ್ಲಾ 12 ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. ನಿಫ್ಟಿ ಮಾಧ್ಯಮ ಶೇ 4.7, ಲೋಹ ಶೇ 3.88, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.51, ಎನರ್ಜಿ ಶೇ 3.31, ಅನಿಲ ಮತ್ತು ತೈಲ ಶೇ 2.99, ರಿಯಲ್ ಎಸ್ಟೇಟ್ ಶೇ 2.66, ಆಟೊ ಶೇ 2.6, ನಿಫ್ಟಿ ಬ್ಯಾಂಕ್ ಶೇ 1.78, ಫೈನಾನ್ಸ್ ಶೇ 1.74, ಮಾಹಿತಿ ತಂತ್ರಜ್ಞಾನ ಶೇ 1.33, ಫಾರ್ಮಾ ಶೇ 0.73ರಷ್ಟು ಹಾಗೂ ಎಫ್‌ಎಂಸಿಜಿ ಶೇ 0.7ರಷ್ಟು ಗಳಿಕೆ ಕಂಡಿವೆ.

ಏರಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಹಿಂದೂಸ್ತಾನ್ ಜಿಂಕ್, ಭಾರತ್ ಎಲೆಕ್ಟ್ರಾನಿಕ್ಸ್, ಅದಾನಿ ಪವರ್, ಅದಾನಿ ಎಂಟರ್‌ಪ್ರೈಸಸ್, ಹಿಂದೂಸ್ತಾನ್ ಏರೋನಾಟಿಕ್ಸ್, ಅದಾನಿ ಟೋಟಲ್ ಗ್ಯಾಸ್, ಕೋಲ್ ಇಂಡಿಯಾ ಮತ್ತು ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 6ರಿಂದ ಶೇ 20ರಷ್ಟು ಗಳಿಕೆ ಕಂಡಿವೆ.

ಜೊಮಾಟೊ, ನೈಕಾ, ಶ್ರೀ ಸಿಮೆಂಟ್ಸ್, ಸನ್ ಫಾರ್ಮಾ, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ಸ್, ಜೈಡಸ್ ಲೈಫ್ ಸೈನ್ಸಸ್ ಮತ್ತು ಇಂಟರ್ ಗ್ಲೋಬ್ ಏವಿಯೇಷನ್ ಇಳಿಕೆಯಾಗಿವೆ.

ಮುನ್ನೋಟ: ಈ ವಾರ ಐಆರ್‌ಸಿಟಿಸಿ, ಎಲ್‌ಐಸಿ, ಟಾಟಾ ಸ್ಟೀಲ್, ಎನ್‌ಎಂಡಿಸಿ, ಎನ್‌ಎಂಡಿಸಿ ಸ್ಟೀಲ್, ಆರ್ ಆರ್ ಕೇಬಲ್, ಟಿಟಿಕೆ ಪ್ರೆಸ್ಟೀಜ್, ಮುತ್ತೂಟ್ ಫೈನಾನ್ಸ್, ಆಲ್ಕೆಮ್ ಲ್ಯಾಬೊರೇಟರೀಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಅಲ್ಲದೆ, 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದ ಜಿಡಿಪಿ ದತ್ತಾಂಶ ಹೊರಬೀಳಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.



ಅಗ್ನಿ ಅವಘಡ: 100 ಪಕ್ಷಿಗಳು ಸಾವು

ತಿರುವನಂತಪುರ (ಪಿಟಿಐ): ಸಾಕು ಪ್ರಾಣಿಗಳ ಮಾರಾಟ ಮಳಿಗೆಯೊಂದರಲ್ಲಿ (ಪೆಟ್ ಶಾಪ್) ಸಂಭವಿಸಿದ ಅಗ್ನಿ ಅವಘಡದಲ್ಲಿ ಸುಮಾರು 100 ಪಕ್ಷಿಗಳು, ಮೊಲಗಳು ಹಾಗೂ ಮೀನುಗಳು ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ.

ಶಿಬಿನ್ ಎಂಬುವವರಿಗೆ ಸೇರಿದ ಮಳಿಗೆಯಲ್ಲಿ ಮುಂಜಾನೆ ಬೆಂಕಿ ಹೊತ್ತಿಕೊಂಡಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ ಬಳಿಕ ಕೆಲ ಪ್ರಾಣಿಗಳನ್ನು ರಕ್ಷಿಸಲಾಗಿದೆ.

ಪಕ್ಷಿಗಳು, ಕೆಲ ಮೀನು ಮತ್ತು ಮೊಲಗಳು ಸಾವಿಗೀಡಾಗಿದ್ದು, ಶಾಪ್‌ನಲ್ಲಿದ್ದ ಅನೇಕ ಪರಿಕರಗಳು ನಾಶವಾಗಿವೆ. ₹2.5 ಲಕ್ಷಕ್ಕೂ ಅಧಿಕ ನಷ್ಟವುಂಟಾಗಿದೆ ಎಂದು ಶಿಬಿನ್ ತಿಳಿಸಿದ್ದಾರೆ. ಘಟನೆಯ ಹಿಂದೆ ಕೆಲವರ ಕೈವಾಡ ಇರುವ ಶಂಕೆ ವ್ಯಕ್ತವಾಗಿದ್ದು, ಈ ಬಗ್ಗೆ ದೂರು ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹605

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)
₹250-465
ದ್ವಿತಳಿ (ಬಿ.ವಿ)
₹333-608

ಹಿಗ್ಗಿದ ವಿದೇಶಿ ವ್ಯಾಪಾರ ಕೊರತೆ

ಒಂದನೇ ಪುಟದಿಂದ


2022–23ರಲ್ಲಿ ಭಾರತದ ವ್ಯಾಪಾರ ಕೊರತೆಯ ಅಂತರವು ₹21.99 ಲಕ್ಷ ಕೋಟಿ ಇತ್ತು. 2023–24ನೇ ಆರ್ಥಿಕ ವರ್ಷದಲ್ಲಿ ₹19.79 ಲಕ್ಷ ಕೋಟಿ ಆಗಿದೆ.

'ವ್ಯಾಪಾರ ಕೊರತೆಯು ಪ್ರತಿ ಬಾರಿಯೂ ಆರ್ಥಿಕತೆ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲ. ಕಚ್ಚಾ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದರಿಂದ ದೇಶದ ತಯಾರಿಕಾ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಇದರಿಂದ ರಫ್ತು ಪ್ರಮಾಣವು ಏರಿಕೆಯಾಗಲಿದೆ. ಆದರೂ, ಈ ಬೆಳವಣಿಗೆಯು ದೇಶೀಯ ಕರೆನ್ಸಿ ಮೇಲೆ ಒತ್ತಡ ಹೆಚ್ಚಿಸಲಿದೆ' ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ. 'ದ್ವಿಪಕ್ಷೀಯ ವ್ಯಾಪಾರ ಕೊರತೆಯು ದೇಶದ ನಿರ್ಣಾಯಕ ಸರಕುಗಳ ಪೂರೈಕೆ ಮೇಲೆ ಅವಲಂಬಿತವಾಗಿದೆ. ಆದರೆ, ವ್ಯಾಪಾರ ಕೊರತೆಯ ಹೆಚ್ಚಳವು ದೇಶದ ಆರ್ಥಿಕತೆಗೆ ಅಪಾಯ ತರಲಿದೆ' ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಮರುಜೀವ

ಟಿ20 ವಿಶ್ವಕಪ್ ಮೆಲುಕು

- 1975, 1979ರ ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿ ಮೆರೆದು, ನಂತರದ ವರ್ಷಗಳಲ್ಲಿ ಪ್ರಶಸ್ತಿಯ ಬರ ಎದುರಿಸುತ್ತಿದ್ದ ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಮರುಜೀವ ದೊರೆತ ಟೂರ್ನಿ ಇದು. ಡರೆನ್ ಸ್ಯಾಮಿ ನಾಯಕತ್ವದ ವಿಂಡೀಸ್ ತಂಡವು 33 ವರ್ಷಗಳ ಬಳಿಕ ಚುಟುಕು ಮಾದರಿ ಕ್ರಿಕೆಟ್‌ನಲ್ಲಿ ಐಸಿಸಿ ಪ್ರಶಸ್ತಿಯನ್ನು ಗೆದ್ದು ಬೀಗಿತು.
- ಏಷ್ಯಾ ಖಂಡದ ರಾಷ್ಟ್ರವೊಂದರಲ್ಲಿ ನಡೆದ ಮೊದಲ ಟಿ20 ವಿಶ್ವಕಪ್ ಟೂರ್ನಿ ಇದು. ಶ್ರೀಲಂಕಾದಲ್ಲಿ 2012 ಸೆಪ್ಟೆಂಬರ್ 18ರಿಂದ ಅಕ್ಟೋಬರ್ 7ರವರೆಗೆ ನಡೆಯಿತು. ಏಷ್ಯಾದ ಭಾರತ, ಪಾಕಿಸ್ತಾನ ಅಥವಾ ಆತಿಥೇಯ ಶ್ರೀಲಂಕಾ ಕಪ್ ಗೆಲ್ಲುವ ನಿರೀಕ್ಷೆ ಇತ್ತಾದರೂ ಅದು ತಲೆಕೆಳಗಾಯಿತು.
- ನ್ಯೂಜಿಲೆಂಡ್ ಆಟಗಾರ ಬ್ರೆಂಡನ್ ಮೆಕಲಮ್ ಅವರು ಬಾಂಗ್ಲಾದೇಶ ವಿರುದ್ಧ 58 ಎಸೆತಗಳಲ್ಲಿ 123 ರನ್ ಗಳಿಸಿದ್ದು, ಈ ಟೂರ್ನಿಯಲ್ಲಿ ಅತ್ಯಧಿಕ ಸ್ಕೋರ್ ಆಗಿದೆ.
- ನಾಲ್ಕನೇ ವಿಶ್ವಕಪ್: **2012**
- ಆತಿಥ್ಯ: ಶ್ರೀಲಂಕಾ
- ವಿಜೇತ ತಂಡ: ವೆಸ್ಟ್ ಇಂಡೀಸ್
- ರನ್ನರ್ಸ್ ಅಪ್: ಶ್ರೀಲಂಕಾ
- ತಂಡಗಳು: **12**
- ಪಂದ್ಯಗಳು: **27**
- ಸರಣಿ ಶ್ರೇಷ್ಠ: ಶೇನ್ ವ್ಯಾಟ್ಸನ್ (ಆಸ್ಟ್ರೇಲಿಯಾ)
- ಶ್ರೇಷ್ಠ ಬ್ಯಾಟರ್: ಶೇನ್ ವ್ಯಾಟ್ಸನ್ (ಆಸ್ಟ್ರೇಲಿಯಾ, **249** ರನ್)
- ಶ್ರೇಷ್ಠ ಬೌಲರ್: ಅಜಂತಾ ಮೆಂಡೀಸ್ (ಶ್ರೀಲಂಕಾ, **15** ವಿಕೆಟ್)


ಕ್ರಿಸ್ ಗೇಲ್

ಪ್ರಮುಖ ಅಂಶಗಳು

- ಮಹೇಂದ್ರ ಸಿಂಗ್ ಧೋನಿ ನಾಯಕತ್ವದ ಭಾರತ ತಂಡವು 'ಎ' ಗುಂಪಿನಲ್ಲಿದ್ದ ಇಂಗ್ಲೆಂಡ್ ಮತ್ತು ಅಫ್ಗಾನಿಸ್ಥಾನವನ್ನು ಮಣಿಸಿ, ಅಗ್ರಸ್ಥಾನದೊಂದಿಗೆ ಸೂಪರ್ 8 ಹಂತ ಪ್ರವೇಶಿಸಿತ್ತು. ಅಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಸೋತರೆ, ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದು 4 ಅಂಕ ಸಂಪಾದಿಸಿತ್ತು. ಆದರೆ, ಅಷ್ಟೇ ಅಂಕ ಸಂಪಾದಿಸಿದ್ದ ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳು ಸೆಮಿಫೈನಲ್ ಪ್ರವೇಶಿಸಿದವು. ನೆಟ್ ರನ್‌ರೇಟ್ ಕಡಿಮೆ ಇದ್ದ ಕಾರಣ ಭಾರತ ನಿರಾಸೆ ಅನುಭವಿಸಿತ್ತು.
- ಸೂಪರ್ 8 ಹಂತದ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನ ತಂಡವನ್ನು 8 ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಪಾಕ್ 19.4 ಓವರ್‌ಗಳಲ್ಲಿ 128 ರನ್ ಗಳಿಸಿತ್ತು. ವಿರಾಟ್ ಕೊಹ್ಲಿ (78 ರನ್) ಬ್ಯಾಟಿಂಗ್ ಬಲದಿಂದ 17 ಓವರ್‌ಗಳಲ್ಲಿ ಭಾರತ ಗುರಿ ಮುಟ್ಟಿತ್ತು.
- ಶ್ರೀಲಂಕಾ ತಂಡವು ಸೂಪರ್ 8 ಹಂತದ ಮುಖಾಮುಖಿಯಲ್ಲಿ ವೆಸ್ಟ್ ಇಂಡೀಸ್ ಅನ್ನು ಒಂಬತ್ತು ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತ್ತು. ಆದರೆ, ಫೈನಲ್‌ನಲ್ಲಿ ಅದೇ ತಂಡದ ವಿರುದ್ಧ ಆತಿಥೇಯರು ಮುಖಭಂಗ ಅನುಭವಿಸಿದರು.
- ಫೈನಲ್‌ನಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ 20 ಓವರ್‌ಗಳಿಗೆ 6 ವಿಕೆಟ್‌ಗೆ 137 ರನ್ ಗಳಿಸಿತ್ತು. ಮರ್ಲಾನ್ ಸ್ಯಾಮ್ಯುಯೆಲ್ಸ್ (78 ರನ್; 56 ಎಸೆತ) ಏಕಾಂಗಿ ಹೋರಾಟ ನಡೆಸಿದ್ದರು. ಶ್ರೀಲಂಕಾದ ಅಜಂತಾ ಮೆಂಡೀಸ್ 12ಕ್ಕೆ 4 ವಿಕೆಟ್ ಪಡೆದು ಮಿಂಚಿದ್ದರು. ಆದರೆ, ಈ ಗುರಿಯನ್ನು ಬೆನ್ನಟ್ಟುವಲ್ಲಿ ಲಂಕಾ ಪಡೆ ಎಡವಿತು. 18.4 ಓವರ್‌ಗಳಲ್ಲಿ 101 ರನ್‌ಗೆ ಕುಸಿಯಿತು. ಸುನಿಲ್ ನಾರಾಯಣ್ 9ಕ್ಕೆ 3 ವಿಕೆಟ್ ಪಡೆದು ಗಮನ ಸೆಳೆದರು. ಸ್ಯಾಮ್ಯುಯೆಲ್ಸ್ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರವಾಗಿದ್ದರು.
- ವೆಸ್ಟ್ ಇಂಡೀಸ್ ತಂಡವು ಟ್ರೋಫಿ ಗೆಲ್ಲುತ್ತಿದ್ದಂತೆ ಸ್ಫೋಟಕ ಬ್ಯಾಟರ್ ಕ್ರಿಸ್ ಗೇಲ್ ಸೇರಿದಂತೆ ಆಟಗಾರರು ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ 'ಗಂಗ್ನಮ್ ಸ್ಟೈಲ್' ನೃತ್ಯ ಮಾಡಿ ಸಂಭ್ರಮಿಸಿದ್ದರು.

ಆಧಾರ: ಕ್ರೀಡಾ ವೆಬ್‌ಸೈಟ್‌ಗಳು

ಬಾಕ್ಸಿಂಗ್: ನಿಶಾಂತ್, ಅವಿನಾಶ್‌ಗೆ ಜಯ

ಬ್ಯಾಂಕಾಕ್ (ಪಿಟಿಐ): ಭಾರತದ ಸ್ಪರ್ಧಿಗಳು ಒಲಿಂಪಿಕ್ಸ್ ಬಾಕ್ಸಿಂಗ್ ವಿಶ್ವ ಕ್ವಾಲಿಫೈಯರ್ ಟೂರ್ನಿಯ ಮೂರನೇ ದಿನವಾದ ಭಾನುವಾರವೂ ಪ್ರಾಬಲ್ಯ ಮುಂದುವರಿಸಿದರು.

ಅವಿನಾಶ್ ಜಮ್ವಾಲ್ (63.5 ಕೆಜಿ) ಮತ್ತು ನಿಶಾಂತ್ ದೇವ್ (71 ಕೆಜಿ) ತಮ್ಮ ವಿಭಾಗಗಳಲ್ಲಿ 5–0 ಅಂತರದಿಂದ ಸುಲಭ ಗೆಲುವು ದಾಖಲಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಾರಿತ್ರಿಕ ಸಾಧನೆ

ದೀಪಾ ಕರ್ಮಾಕರ್‌ಗೆ ಚಿನ್ನದ ಪದಕ

ತಾಷ್ಕೆಂಟ್ (ಪಿಟಿಐ): ಭಾರತದ ಜಿಮ್ನಾಸ್ಟ್ ದೀಪಾ ಕರ್ಮಾಕರ್ ಭಾನುವಾರ ಚಾರಿತ್ರಿಕ ಸಾಧನೆ ಮಾಡಿದರು.

ಇಲ್ಲಿ ನಡೆದ ಏಷ್ಯನ್ ಸೀನಿಯರ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ದೀಪಾ, ಮಹಿಳೆಯರ ವಾಲ್ಟ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು. ಈ ಸಾಧನೆ ಮಾಡಿದ ಭಾರತದ ಮೊದಲ ಜಿಮ್ನಾಸ್ಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ವಾಲ್ಟ್ ಫೈನಲ್‌ನಲ್ಲಿ 30 ವರ್ಷದ ದೀಪಾ ಅವರು 13.566 ಅಂಕಗಳನ್ನು ಗಳಿಸಿದರು. ಉತ್ತರ ಕೊರಿಯಾದ ಕಿಮ್ ಸನ್ ಯಾಂಗ್ (13.466) ಹಾಗೂ ಜೊ ಯಾಂಗ್ ಬಿಯಾಲ್ (12.966) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು. ಇಡೀ ಚಾಂಪಿಯನ್‌ಷಿಪ್‌ನ ಆಲ್‌ರೌಂಡ್ ವಿಭಾಗದಲ್ಲಿ ಅವರು ಒಟ್ಟು 46.166 ಅಂಕ ಗಳಿಸಿ, 16ನೇ ಸ್ಥಾನ ಪಡೆದರು.

'ಏಷ್ಯನ್ ಜಿಮ್ನಾಸ್ಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಇತಿಹಾಸ ಸೃಷ್ಟಿಯಾಗಿದೆ. ಪ್ರೇರಣಾದಾಯಿ ದೀಪಾ, ಅಭಿನಂದನೆಗಳು' ಎಂದು ಭಾರತ ಕ್ರೀಡಾ ಪ್ರಾಧಿಕಾರ 'ಎಕ್ಸ್' ಸಂದೇಶ ಹಾಕಿದೆ.

2015ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ದೀಪಾ ಅವರು ಕಂಚು ಪಡೆದಿದ್ದರು. ಅದೇ ಸ್ಪರ್ಧೆಯಲ್ಲಿ ಪುರುಷರ ವಿಭಾಗದ ಫ್ಲೋರ್ ಎಕ್ಸ್‌ರ್‌ಸೈಜ್‌ನಲ್ಲಿ ಭಾರತದ ಆಶಿಶ್ ಕುಮಾರ್ ಗಳಿಸಿದ್ದರು. 2019 ಹಾಗೂ 2022ರಲ್ಲಿ ಪ್ರಣತಿ ನಾಯಕ ಅವರು ಕಂಚಿನ ಪದಕಗಳನ್ನು ಗಳಿಸಿದ್ದರು. ಅವರೂ ವಾಲ್ಟ್ ವಿಭಾಗದಲ್ಲಿಯೇ ಸಾಧನೆ ಮಾಡಿದ್ದರು. ಆದರೆ ಚಿನ್ನ ಗೆದ್ದ ಭಾರತದ ಮೊದಲ ಸ್ಪರ್ಧಿ ದೀಪಾ ಆಗಿದ್ದಾರೆ. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವರು 4ನೇ ಸ್ಥಾನ ಗಳಿಸಿದ್ದರು.


ಭಾರತದ ದೀಪಾ ಕರ್ಮಾಕರ್–ಎಎಫ್‌ಪಿ ಚಿತ್ರ

ಅಮೆರಿಕ ವಿಮಾನ ಏರಿದ ರೋಹಿತ್ ಬಳಗ

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಕೆಲವು ಆಟಗಾರರು ಭಾನುವಾರ ಮುಂಬೈನಿಂದ ಅಮೆರಿಕಕ್ಕೆ ಪ್ರಯಾಣಿಸಿದರು.

ವಿಶ್ವಕಪ್ ಟೂರ್ನಿಯು ಜೂನ್ 2ರಿಂದ ಆರಂಭವಾಗಲಿದೆ. ವೆಸ್ಟ್ ಇಂಡೀಸ್ ಹಾಗೂ ಅಮೆರಿಕ ಜಂಟಿ ಆತಿಥ್ಯ ವಹಿಸಲಿವೆ.

ರೋಹಿತ್ ಜೊತೆಗೆ ಸೂರ್ಯ ಕುಮಾರ್ ಯಾದವ್, ವೇಗಿ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ಶಿವಂ ದುಬೆ, ಸ್ಪಿನ್ನರ್ ಕುಲದೀಪ್ ಯಾದವ್, ರವೀಂದ್ರ ಜಡೇಜ, ಮೊಹಮ್ಮದ್ ಸಿರಾಜ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ವಿಕೆಟ್‌ಕೀಪರ್ ರಿಷಭ್ ಪಂತ್, ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಈ ಪ್ರಯಾಣಿಸಿದರು.

ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್, ಹಾರ್ದಿಕ್ ಪಾಂಡ್ಯ, ಸಂಜು ಸ್ಯಾಮ್ಸನ್ ಹಾಗೂ ಯಜುವೇಂದ್ರ ಚಾಹಲ್ ಅವರನ್ನೊಳಗೊಂಡ ಬ್ಯಾಚ್ ಇನ್ನಷ್ಟೇ ತೆರಳಬೇಕಿದೆ.


ಮುಂಬೈ ವಿಮಾನ ನಿಲ್ದಾಣದಲ್ಲಿ ಭಾರತ ಕ್ರಿಕೆಟ್ ತಂಡದ ಶಿವಂ ದುಬೆ, ಪಾರಸ್ ಮಾಂಬ್ರೆ (ಬೌಲಿಂಗ್ ಕೋಚ್), ವಿಕ್ರಂ ರಾಥೋಡ್ (ಬ್ಯಾಟಿಂಗ್ ಕೋಚ್), ಜಸ್‌ಪ್ರೀತ್ ಬೂಮ್ರಾ, ಕುಲದೀಪ್ ಯಾದವ್, ರವೀಂದ್ರ ಜಡೇಜ, ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ –ಪಿಟಿಐ ಚಿತ್ರ

ಶ್ರೀಹರಿಗೆ ಬೆಳ್ಳಿ ಪದಕ

ನವದೆಹಲಿ: ಬೆಂಗಳೂರಿನ ಈಜುಪಟು ಶ್ರೀಹರಿ ನಟರಾಜ್ ಅವರು ಫ್ರಾನ್ಸ್‌ನ ಕ್ಯಾನೆಟ್ ಎನ್ ರೌಸಿಲೋನ್‌ನಲ್ಲಿ ನಡೆದ 30ನೇ ಮೇರ್ ನಾಸ್ಟ್ರಮ್ ಟೂರ್ 50 ಮೀಟರ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು.



ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಕರ್ನಾಟಕದ ನಟರಾಜ್ ಅವರು ಶನಿವಾರ ಇಲ್ಲಿ 25.50 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಕೂದಲೆಳೆಯ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಹಂಗರಿಯ ಆ್ಯಡಮ್ ಜಸ್ಜೊ (25.46 ಸೆಕೆಂಡ್) ಚಿನ್ನದ ಪದಕ ಗೆದ್ದರು.

ಮಹಿಳಾ ತಂಡಕ್ಕೆ ಸೋಲು

ಆ್ಯಂಟ್‌ವರ್ಪ್ (ಪಿಟಿಐ): ಎಫ್‌ಐಎಚ್‌ನ ಪ್ರೊ ಲೀಗ್‌ನ ಬೆಲ್ಜಿಯಂ ಲೆಗ್‌ನಲ್ಲಿ ಭಾರತ ಮಹಿಳಾ ಹಾಕಿ ತಂಡ, ಭಾನುವಾರ ಭಾರತ 0–3 ಗೋಲುಗಳಿಂದ ಅರ್ಜೆಂಟೀನಾ ತಂಡಕ್ಕೆ ಮಣಿಯಿತು.

ಟೆನಿಸ್: ಒಸಾಕಾ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ): ಜಪಾನ್‌ನ ನವೊಮಿ ಒಸಾಕಾ, ಮೂರು ವರ್ಷಗಳಲ್ಲಿ ಇದೇ ಮೊದಲ ಬಾರಿ ಫ್ರೆಂಚ್ ಓಪನ್‌ನಲ್ಲಿ ಜಯ ದಾಖಲಿಸಿದರು. ಅವರ ಮುಂದಿನ ಸಂಭವನೀಯ ಎದುರಾಳಿ ಇಗಾ ಶ್ವಾಂಟೆಕ್. ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರೂ ಗ್ರ್ಯಾನ್‌ಸ್ಲಾಮ್ ಟೂರ್ನಿ ಮೊದಲ ಸುತ್ತಿನಲ್ಲಿ ಸೋಲದ ದಾಖಲೆ ಕಾಪಾಡಿಕೊಂಡರು.

ನಾಲ್ಕು ಗ್ರ್ಯಾನ್‌ಸ್ಲಾಮ್ ಟೂರ್ನಿಗಳನ್ನು ಗೆದ್ದಿರುವ ಒಸಾಕಾ, ಪ್ಯಾರಿಸ್‌ನಲ್ಲಿ ಇದುವರೆಗೆ ಮೂರನೇ ಸುತ್ತನ್ನು ದಾಟಿಲ್ಲ. 26 ವರ್ಷ ವಯಸ್ಸಿನ ಒಸಾಕಾ, ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 6–1, 4–6, 7–5 ರಿಂದ 48ನೇ ಕ್ರಮಾಂಕದ ಲೂಸಿಯಾ ಬ್ರೊನ್ಝೆಟ್ಟಿ (ಇಟಲಿ) ಅವರನ್ನು ಸೋಲಿಸಿದರು.

ಇದು 2022ರ ಆಸ್ಟ್ರೇಲಿಯನ್ ಓಪನ್ ನಂತರ ಒಸಾಕಾ ಅವರಿಗೆ ಮೊದಲ ಜಯ. ಮಾಜಿ ಅಗ್ರಮಾನ್ಯ ಆಟಗಾರ್ತಿಯಾದ ಅವರು ಈಗ 134ನೇ ಸ್ಥಾನದಲ್ಲಿದ್ದಾರೆ.

ಅಗ್ರ ಶ್ರೇಯಾಂಕದ ಆಟಗಾರ್ತಿ ಹಾಗೂ ಹಾಲಿ ಚಾಂಪಿಯನ್ ಶ್ವಾಂಟೆಕ್ ಸೋಮವಾರ ತಮ್ಮ ಮೊದಲ ಸುತ್ತಿನಲ್ಲಿ ಕ್ವಾಲಿಫೈಯರ್ ಲಿಯೊಲಿಯಾ ಜೀನ್‌ಜೀನ್ (ಫ್ರಾನ್ಸ್) ಅವರನ್ನು ಎದುರಿಸಲಿದ್ದು, ಗೆದ್ದಲ್ಲಿ ಪೋಲೆಂಡ್‌ನ ಆಟಗಾರ್ತಿಗೆ ಒಸಾಕಾ ಎದುರಾಳಿಯಾಗುತ್ತಾರೆ.

ಮಲೇಷ್ಯಾ ಮಾಸ್ಟರ್ಸ್: ಸಿಂಧು ರನ್ನರ್ ಅಪ್

ಕೌಲಾಲಂಪುರ (ಪಿಟಿಐ): ಭಾರತದ ಪಿ.ವಿ. ಸಿಂಧು ಮಲೇಷ್ಯಾ ಮಾಸ್ಟರ್ಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ನಿರಾಶೆ ಅನುಭವಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನದ ಸಿಂಧು 21-16 5-21 16-21ರಿಂದ ಏಳನೇ ರ‍್ಯಾಂಕ್ ಆಟಗಾರ್ತಿ, ಚೀನಾದ ವಾಂಗ್ ಝಿ ಯೀ ವಿರುದ್ಧ ಸೋತರು.

ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಆಡುವ ಸಿದ್ಧತೆಯಲ್ಲಿರುವ ಸಿಂಧು ಅವರು ಈ ಪಂದ್ಯದಲ್ಲಿ ಜಯಿಸುವ ನೆಚ್ಚಿನ ಆಟಗಾರ್ತಿಯಾಗಿದ್ದರು. ಪಂದ್ಯದ ಮೊದಲ ಗೇಮ್‌ನಲ್ಲಿ ಪಾರಮ್ಯವನ್ನೂ ಮೆರೆದಿದ್ದರು. ಆದರೆ ಎರಡನೇ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರು.

ನಿರ್ಣಾಯಕ ಗೇಮ್‌ನಲ್ಲಿ ತಿರುಗೇಟು ನೀಡಿದ್ದ ಹೈದರಾಬಾದಿನ ಸಿಂಧು, ಒಂದು ಹಂತದಲ್ಲಿ 11–3 ರಿಂದ ಮುನ್ನಡೆ ಗಳಿಸಿದ್ದರು. ಈ ಹಂತದಲ್ಲಿ ಹಿಡಿತ ಸಡಿಲಿಸಿದ ಸಿಂಧು ಲೋಪಗಳನ್ನು ಎಸಗಿದರು. ಇದರ ಲಾಭ ಪಡೆದ ಚೀನಾದ ಆಟಗಾರ್ತಿ ವಾಂಗ್ 18 ಅಂಕಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಸಾಧ್ಯವಾಯಿತು. ಈ ಹಂತದಲ್ಲಿ ಸಿಂಧುಗೆ ಸಿಕ್ಕಿದ್ದು ಕೇವಲ 5 ಅಂಕಗಳು ಮಾತ್ರ.

